ಜನಶಕ್ತಿ

ಕನ್ನಡ ವಾರಪತ್ರಿಕೆ

Blog : janashakthi.wordpress.com e-mail : js_weekly@yahoo.com

ಸಂಪುಟ 07, ಸಂಚಿಕೆ 43

ಅಕ್ಟೋಬರ್ 27, 2013 ಪುಟ 16 ರೂ. 10/-



ಹೊಸ ಕೃಷಿ ಮಾರುಕಟ್ಟೆ ನೀತಿ :






ರೈತನಿಗಾಗಿಯೋ? ಕಾರ್ಪೋರೇಟ್ ಕಂಪನಿಗಳಿಗಾಗಿಯೋ?



ಯೆಟ್ನಾಮ್ : ಜನತಾ ಯುದ್ಧದ ಸೇನಾನಿ
ನರಲ್ ಗಿಯಾಪ್ ಇನ್ನಿಲ್ಲ



ಎರಡು ವಿಪತ್ತುಗಳು
ತದ್ವಿರುದ್ಧ ಪ್ರತಿಕ್ರಿಯೆಗಳು




ಮೂಢನಂಬಿಕೆ ನಿಯಂತ್ರಣ ಕಾಯ್ದೆ :
ಮೊದಲು ಇವರ ವಿರುದ್ಧ ಬಳಕೆಯಾಗಲಿ

ಅತಿಥಿ ಉಪನ್ಯಾಸಕರಿಗೆ ರಾಜ್ಯ ಸರ್ಕಾರ ವಂಚನೆ

ಬಿ.ರಾಜಶೇಖರಮೂರ್ತಿ

ರಾಜ್ಯಾದ್ಯಂತ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಕಳೆದ 15 ವರ್ಷಗಳಿಂದ ಸೇವೆ ಸಲ್ಲಿಸಿಕೊಂಡು ಬರುತ್ತಿರುವ ಅತಿಥಿ ಉಪನ್ಯಾಸಕರನ್ನು ಕಾಂಗ್ರೇಸ್‌ನ ರಾಜ್ಯ ಸರ್ಕಾರವು ಕೂಡ ಅಮಾನವೀಯವಾಗಿ ವಂಚಿಸಿದೆ. ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ 10600ಕ್ಕಿಂತ ಹೆಚ್ಚಿರುವ ಅತಿಥಿ ಉಪನ್ಯಾಸಕರು ಸಾಮಾಜಿಕವಾಗಿ ಆರ್ಥಿಕವಾಗಿ ಹಿಂದುಳಿದಿದ್ದು, ಅತ್ಯಂತ ಕಷ್ಟ ಪಟ್ಟು ಉನ್ನತ ಅಧ್ಯಯನ ಮಾಡಿದವರಾಗಿದ್ದಾರೆ. ಸರ್ಕಾರಿ ಪದವಿ ಕಾಲೇಜುಗಳಲ್ಲಿ ಬಡ ವಿಧ್ಯಾರ್ಥಿಗಳ ಭವಿಷ್ಯಕ್ಕಾಗಿ ದುಡಿಯುತ್ತಿರುವ ಇವರನ್ನು



ಅತ್ಯಂತ ಅಮಾವೀಯವಾಗಿ ಕಂಡು ಕಡೆಗಣಿಸಲಾಗಿದೆ. ತಿಂಗಳಿಗೆ ಕೇವಲ ಎಂಟು-ಹತ್ತು ಸಾವಿರ ಸಂಬಳದಂತೆ ಈ ಸರ್ಕಾರವೂ ಕೂಡ ಪ್ರತಿ ತಿಂಗಳಿಗೆ ಸರಿಯಾಗಿ ಸಂಬಳ ನೀಡುತ್ತಿಲ್ಲ. ಕಳೆದ ವರ್ಷದ ವೇತನ ಇನ್ನೂ ಕೆಲ ಜಿಲ್ಲೆಗಳಲ್ಲಿ ಅತಿಥಿ ಉಪನ್ಯಾಸಕರ ಕೈ ಸೇರಿಲ್ಲ. ಮದುವೆ ಆಗಿ ಗರ್ಭಿಣಿ ಅಥವಾ ಹೆರಿಗೆ ಆದರೆ ಅತಿಥಿ ಉಪನ್ಯಾಸಕರ ಕೆಲಸ ಕಳೆದುಕೊಳ್ಳುತ್ತಾರೆ. ಇಂತಹ ಗಂಭೀರ ಬೇಡಿಕೆಗಳನ್ನು ಈಡೇರಿಸುವ ಬದಲಿಗೆ ದಿನಕ್ಕೊಂದು ನೀತಿಗಳನ್ನು ಜಾರಿಗೆ ತಂದು ಅತಿಥಿ ಉಪನ್ಯಾಸಕರಿಗೆ ಹಂತ ಹಂತವಾಗಿ ಕೆಲಸ ಇಲ್ಲದಂತೆ ರಾಜ್ಯ ಸರ್ಕಾರ ಮಾಡುತ್ತಿದೆ.

ರಾಜ್ಯ ಸರ್ಕಾರವು ಅತಿಥಿ ಉಪನ್ಯಾಸಕರ ಬೇಡಿಕೆಗಳನ್ನು ಈಡೇರಿಸಬೇಕೆಂದು ಸೆಪ್ಟೆಂಬರ್ 1,2013 ರಂದು ರಾಜ್ಯ ಸಮಾವೇಶ ನಡೆಸುವ ಮುಖಾಂತರ ಅತಿಥಿ ಉಪನ್ಯಾಸಕರು ಒತ್ತಾಯಿಸಿದ್ದಾರೆ. ನಂತರದಲ್ಲಿ ಸೆಪ್ಟೆಂಬರ್ 25 ರಂದು ರಾಜ್ಯದ್ಯಂತ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳ ಮುಖಾಂತರ ಉನ್ನತ ಶಿಕ್ಷಣ ಸಚಿವರಿಗೆ ಮತ್ತೊಮ್ಮೆ ಮನವಿ ಪತ್ರ ಸಲ್ಲಿಸಿ ಬೇಡಿಕೆಗಳ ಈಡೇರಿಕೆಗೆ ಮನವಿ ಮಾಡಿದ್ದಾರೆ. ಇಷ್ಟಾದರೂ ಅತಿಥಿ ಉಪನ್ಯಾಸಕ ಮುಖಂಡರನ್ನು ಮಾತುಕತೆಗೆ ಕರೆದು ಸಮಸ್ಯೆಗಳ ಪರಿಹಾರಕ್ಕೆ ರಾಜ್ಯ ಸರ್ಕಾರ ಮುಂದಾಗುತ್ತಿಲ್ಲ. ಬದಲಿಗೆ ಖಾಸಗಿ ಅನುದಾನಿತ ಕಾಲೇಜುಗಳಲ್ಲಿದ್ದ 1200 ಖಾಯಂ ಉಪನ್ಯಾಸಕರನ್ನು ಡೆಪ್ಯೂಟೇಶನ್ ಮೇಲೆ ತಂದು ಅತಿಥಿ ಉಪನ್ಯಾಸಕರ ಜಾಗಗಳಿಗೆ ಏಕಾಏಕಿ ಹಾಕುವ ಮುಖಾಂತರ ಮೂರೇ ತಿಂಗಳಲ್ಲಿ 2400 ಅತಿಥಿ ಉಪ್ಯಾಸಕರನ್ನು ಕೆಲಸದಿಂದ ವಜಾಗೊಳಿಸಲಾಗಿದೆ. 10-15 ವರ್ಷಗಳ ಕಾಲ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದವರು ಇಂದು ಬೀದಿಗೆ ಬಿದ್ದಿದ್ದಾರೆ.

ಉನ್ನತ ಶಿಕ್ಷಣ ಸಚಿವರಾದ ಆರ್.ವಿ. ದೇಶಪಾಂಡೆಯವರು ಮಾಧ್ಯಮಗಳ ಮುಖಾಂತರ ಸುಳ್ಳು ಸುಳ್ಳು ಹೇಳಿಕೆಗಳನ್ನು ನೀಡುತ್ತಾ ಅತಿಥಿ ಉಪನ್ಯಾಸಕರ ಬೇಡಿಕೆಗಳನ್ನು ಈಡೇರಿಸುತ್ತಿದ್ದೇವೆಂದು ತಿರುಗಾಡುತ್ತಿದ್ದಾರೆ. ತಾಳ್ಮೆಯಿಂದ ಅತಿಥಿ ಉಪನ್ಯಾಸಕರ ಸಮಸ್ಯೆಗಳನ್ನು ಆಲಿಸಿ ಬಗೆ ಹರಿಸಲು ಸಾಧ್ಯವಾಗದೆ ಹೋದಲ್ಲಿ ಅವರು ಉನ್ನತ ಶಿಕ್ಷಣ ಸಚಿವ ಸ್ಥಾನಕ್ಕೆ ರಾಜಿನಾಮೆಯನ್ನು ನೀಡುವುದು ಒಳ್ಳೆಯದು.

ಮುಖ್ಯಮಂತ್ರಿಗಳ ಜಾಣ ಕಿವುಡು:

ಸಾಮಾಜಿಕ ನ್ಯಾಯವನ್ನು ಎತ್ತಿಹಿಡಿಯುವ ರಾಜ್ಯ ಸರ್ಕಾರವೆಂದು ಈಗಾಗಲೇ 6 ತಿಂಗಳು ಕಳೆದಿರುವ ಮುಖ್ಯ ಮಂತ್ರಿ ಸಿದ್ದರಾಮಯ್ಯನವರು ಜಾಣ ಕಿವುಡತನವನ್ನು ಪ್ರದರ್ಶಿಸುತ್ತಿದ್ದಾರೆ. ಆರ್ಥಿಕ ನೀತಿಗಳ ವಿಚಾರದಲ್ಲಿ ಕಳೆದ ಬಿಜೆಪಿಗೂ ತಮಗೂ ಯಾವುದೇ ವ್ಯತ್ಯಾಸವಿಲ್ಲವೆಂದು ಈಗಾಗಲೇ ಸಾಬೀತು ಪಡಿಸಿದ್ದಾರೆ. ಅತಿಥಿ ಉಪನ್ಯಾಸಕರ ಗಂಭೀರ ಸಮಸ್ಯೆಗಳ ಬಗ್ಗೆ ಅರಿವಿದ್ದರೂ ಇಲ್ಲದಂತೆ ಮರೆಮಾಚುತ್ತಿದ್ದಾರೆ. ನೂತನ ಸರ್ಕಾರದ ಮೇಲೆ ಭರವಸೆಗಳಿನ್ನಿಟ್ಟುಕೊಂಡು ಅತಿಥಿ ಉಪನ್ಯಾಸಕರು ಶಾಂತಿ ರೀತಿಯಿಂದ ಹಲವಾರು ಬಾರಿ ಮನವಿ ಮಾಡಿದ್ದರೂ ಪ್ರಯೋಜನ ಕಾಣುತ್ತಿಲ್ಲ. ಸರ್ಕಾರಿ ಪದವಿ ಕಾಲೇಜುಗಳಲ್ಲಿ ಲಕ್ಷಾಂತರ ಬಡ ವಿದ್ಯಾರ್ಥಿಗಳಿಗೆ ಉಪನ್ಯಾಸ ಮಾಡುತ್ತಿರುವ ಅತಿಥಿ ಉಪನ್ಯಾಸಕರಿಗೆ ವೇತನ ಹೆಚ್ಚಿಸಲು ಮತ್ತು ಸೇವಾ ಭದ್ರತೆಯನ್ನು ಒದಗಿಸಲು ರಾಜ್ಯ ಸರ್ಕಾರ ಮುಂದಾಗುತ್ತಿಲ್ಲ. ಈ ರೀತಿಯಾದರೆ ಇನ್ಯಾವ ರೀತಿಯಲ್ಲಿ ಸಿದ್ದರಾಮಯ್ಯನವರು ಬಡ-ಹಿಂದುಳಿದ ವಿದ್ಯಾರ್ಥಿಗಳಿಗೆ ಸಾಮಾಜಿಕ ನ್ಯಾಯವನ್ನು ಒದಗಿಸುತ್ತಾರೆ?


ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಮುಂದಾಗುತ್ತಿಲ್ಲ. ಸರ್ಕಾರಿ ಇಲಾಖೆಗಳಲ್ಲಿ ಗುತ್ತಿಗೆ, ಹೊರ ಗುತ್ತಿಗೆ ಹಾಗೂ ಇನ್ನಿತರ ಹೆಸರುಗಳಲ್ಲಿ ದುಡಿಯುತ್ತಿರುವ 5ಲಕ್ಷ ಯುವಜನತೆಗೆ ಉದ್ಯೋಗ ಭದ್ರತೆಯನ್ನು ಒದಗಿಸುತ್ತಿಲ್ಲ. ಜೊತೆಗೆ ಉದ್ಯೋಗ ಸೃಷ್ಟಿಗೆ ಪೂರಕ ಉದ್ದಿಮೆಗಳ ಸ್ಥಾಪನೆಗೆ ಆದ್ಯತೆ ನೀಡುತ್ತಿಲ್ಲ. ಬದಲಿಗೆ ಬಿಜೆಪಿಯಂತೆಯೇ "ಜಾಗತಿಕ ಬಂಡವಾಳ ಹೂಡಿಕೆ" ಹೆಸರಿನಲ್ಲಿ ಇನ್ನಷ್ಟು ಉದ್ಯೋಗ ನಾಶ ಮಾಡುವಂತಹ ನೀತಿಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಜಾರಿಗೆ ತರಲು ಹೊರಟಿದ್ದಾರೆ. ಇಂತಹ ನೀತಿಗಳ ಭಾಗವಾಗಿಯೇ ಇಂದು ಅತಿಥಿ ಉಪನ್ಯಾಸಕರು ಬೀದಿಗೆ ಬೀಳುವಂತಾಗಿದೆ.

ಇಂತಹ ನೀತಿಗಳನ್ನು ಕೈಬಿಟ್ಟು ಅತಿಥಿ ಉಪನ್ಯಾಸಕರು ಗೌರವದಿಂದ ಬದುಕಲು ಸೇವಾ ಭದ್ರತೆಯನ್ನು ಒದಗಿಸಬೇಕು. ಯುಜಿಸಿಯ ನಿಯಮದಂತೆ ತಿಂಗಳಿಗೆ ರೂ. 25 ಸಾವಿರ ಸಂಬಳ ನೀಡಬೇ ಉಪನ್ಯಾಸಕರ ನೇಮಕಾತಿಯಲ್ಲಿ ಅ ಉಪನ್ಯಾಸಕರಿಗೆ ಆಧ್ಯತೆ ನೀಡಿ, ಕನಿಷ್ಠ ವರ್ಷ ಸೇವಾನುಭವ ಆಧರಿಸಿ ವರ್ಷ 5ರಂತೆ ಕೃಪಾಂಕವನ್ನು ನೀಡಬೇ ವಯೋಮಿತಿ ಮೀರಿರುವ/ ಮೀರುತ್ತಿರು ಅತಿಥಿ ಉಪನ್ಯಾಸಕರಿಗೆ ಉಪನ್ಯಾಸ ನೇಮಕಾತಿಯಲ್ಲಿ ಆಧ್ಯತೆ ನೀಡಬೇಕು. ಖಾ ಇರುವ 6 ಸಾವಿರ ಉಪನ್ಯಾಸಕ, 3 ಸಾ ಬೋಧಕೇತರ ಹುದ್ದೆಗಳು ಹಾಗೂ ಕಾಲೇ ಶಿಕ್ಷಣ ಇಲಾಖೆಯ ಖಾಲಿ ಹುದ್ದೆಗಳ ಭರ್ತಿ ಮಾಡಬೇಕು. ಎಲ್ಲಾ ಹಂತದ ಕಾಲೇ ಶಿಕ್ಷಣ ಇಲಾಖೆಗಳು ಮತ್ತು ಎಲ್ಲಾ ಸರ್ಕಾ ಪದವಿ ಕಾಲೇಜುಗಳಿಗೆ ಅಗ ಅತ್ಯಾಧುನಿಕ ಮೂಲಭೂ ಶೈಕ್ಷಣಿಕ ಸೌಲಭ್ಯಗಳ ಒದಗಿಸಬೇಕು.ಮಹಿಳಾ ಅತಿ ಉಪನ್ಯಾಸಕರಿಗೆ ಸಂಬಳ ಸಹಿತ 5ತಿಂಗ ಹೆರಿಗೆ ರಜೆ ನೀಡಬೇಕು. ಆಗ ಸರ್ಕಾ ಪದವಿ ಕಾಲೇಜುಗಳಲ್ಲಿ ಓದುವ ಮಕ್ಕ ಭವಿಷ್ಯಕ್ಕೆ ಅನುಕೂಲ ಮಾಡಿಕೊಟ್ಟಾಗುತ್ತ ರಾಜ್ಯ ಸರ್ಕಾರಕ್ಕೂ ಗೌರವ ಹೆಚ್ಚುತ್ತ ಈ ಬೇಡಿಕೆಗಳನ್ನು ಈಡೇರಿಸುವ ಒತ್ತಾಯಿಸಿ ಇದೇ ಅಕ್ಟೋಬರ್ 22 ರಂ ಬೆಂಗಳೂರಿನಲ್ಲಿ ಅತಿಥಿ ಉಪನ್ಯಾಸಕ ಬೃಹತ್ ಪ್ರತಿಭಟನಾ ಪ್ರದರ್ಶನವನ ಏರ್ಪಡಿಸಲಾಗಿದೆ.

ಕಾಲುಬಾಯಿ ರೋಗ-
ಜಾನುವಾರುವಿನ ಮೌಲ್ಯದ ಆಧಾರದಲ್ಲಿ ಪರಿಹಾರಕ್ಕೆ ಆಗ್ರಹ
ರಾಸಿಗೆ ಕನಿಷ್ಟ 50 ಸಾವಿರ ನಿಗದಿಗೆ ಒತ್ತಾಯ

ಕಾಲುಬಾಯಿ ಜ್ವರದಿಂದ ಮೃತಪಟ್ಟಿರುವ ಜಾನುವಾರುಗಳ ಮಾಲೀಕರಿಗೆ ಕನಿಷ್ಟ 50 ಸಾವಿರ ರೂ.ಗಳ ಪರಿಹಾರ ನೀಡುವಂತೆ ಆಗ್ರಹಿಸಿ ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯಕರ್ತರು ಅಕ್ಟೋಬರ್ 15, 2013 ರಂದು ರಾಮನಗರ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು.

ಕಾಲುಬಾಯಿರೋಗ ಬರಸಿಡಿಲಿನಂತೆ



ಬಡಿದು ಸಾವಿರಾರು ಜಾನುವಾರುಗಳ ಸಾವಿಗೆ ಕಾರಣವಾಗುತ್ತಿದೆ. ಕಳೆದ ಎರಡು ತಿಂಗಳಿನಿಂದ ರಾಮನಗರ ಜಿಲ್ಲೆಯಲ್ಲಿ ಜಾನುವಾರುಗಳು ಸರಣಿಯಾಗಿ ಸಾವನ್ನಪ್ಪಿವೆ. ಜಿಲ್ಲಾಡಳಿತ ಸಮರ್ಪಕ ಚಿಕಿತ್ಸೆ ನೀಡಲು ಸಂಪೂರ್ಣ ವಿಫಲಾಗಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು. ಅಲ್ಲದೇ ಜಿಲ್ಲಾಡಳಿತ ತಕ್ಷಣ ಪಶು ಇಲಾಖೆಯ ಸಿಬ್ಬಂದಿಯ ಸಭೆ ಕರೆದು ಸಮರೋಪಾದಿಯಲ್ಲಿ ಕಾಲುಬಾಯಿ ರೋಗವನ್ನು ತಡೆಗಟ್ಟಲು ತುರ್ತು ಕ್ರಮಕೈಗೊಳ್ಳಬೇಕು ಹಾಗೂ ಈಗಾಗಲೇ ಮೃತಪಟ್ಟಿರುವ ರಾಸುಗಳ ಮಾಲೀಕರ ಪ್ರತಿ ರಾಸಿಗೆ 50 ಸಾವಿರ ರೂ.ಗಳ ಪರಿಹಾ ನೀಡಬೇಕು ಎಂದು ಆಗ್ರಹಿಸಲಾಯಿತ ಕಾಲುಬಾಯಿ ರೋಗದಿಂದ ಮೃತಪ ರಾಸುಗಳ ಪಟ್ಟಿ ತಯಾರಿಸಬೇಕ ಜಾನುವಾರುಗಳ ಮಾಲೀಕರಿಗೆ ಈ ಕುರಿ ಒಂದು ದೃಢೀಕರಣ ಪತ್ರ ನೀಡಬೇ ಜಾನುವಾರುಗಳ ಮೌಲ್ಯದ ಆಧಾ ಮೇಲೆ ಗರಿಷ್ಟ ಪರಿಹಾರ ನೀಡಬೇಕ ಕಾಯಿಲೆ ಹರಡದಂತೆ ಉತ್ತ ಗುಣಮಟ್ಟದ ಸಾಮೂಹಿಕ ಲಸಿ ಹಾಕಬೇಕು. ಸ್ತ್ರೀಶಕ್ತಿ ಸ್ವ-ಸಹಾ ಗುಂಪುಗಳ ಮೂಲಕ ಹೈನುಗಾರಿಕೆಗಾ ಪಡೆದ ಸಾಲವನ್ನು ಮನ್ನಾ ಮಾಡಬೇಕು ಎಂದು ಈ ಸಂದರ್ಭದ ಒತ್ತಾಯಿಸಲಾಯಿತು. ಜಾನುವಾರುಗ ವಾರ್ಷಿಕ ವಿಮೆ ಪ್ರೀಮಿಯಂನಲ್ಲಿ ರೈತ ಪಾಲನ್ನು ಶೇ. 75ರಷ್ಟು ಇಳಿಸಬೇಕು, ಪ ಆಸ್ಪತ್ರೆಗಳಲ್ಲಿರುವ ಖಾಲಿ ಹುದ್ದೆಗಳ ತುಂಬಬೇಕು ಎಂದೂ ಪ್ರತಿಭಟನಾಕಾರ ಆಗ್ರಹಿಸಿದರು. ಸಂಘಟನೆಯ ಜಿಲ್ಲಾ ಅಧ ಎಂ. ಶ್ರೀನಿವಾಸ್, ಕಾರ್ಯದರ್ಶಿ ಪಿ.ಆ ನಾಗೇಶ್, ರಾಮನಗರ ತಾಲ್ಲೂಕು ಅಧ ಮಹದೇವಯ್ಯ, ಕಾರ್ಯದರ್ಶಿ ಸಂಜೀವ ಮುಂತಾದವರು ಪ್ರತಿಭಟನೆಯ ನೇ ವಹಿಸಿದ್ದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಂಪಾದಕೀಯ

ಒಂದು ಅತ್ಯಾಚಾರ ಮತ್ತು ಕೊಲೆಯ ಸುತ್ತ ......

ರ್ಮಸ್ಥಳದ ಪ್ರಶಾಂತ ಪರಿಸರದಲ್ಲಿ ಯುವತಿಯೊಬ್ಬಳು ಕೊಲೆಯಾಗಿ ಒಂದು ರ್ಷವಾಯಿತು. ಅದು ಕೇವಲ ಕೊಲೆ ಮಾತ್ರ ಆಗಿರಲಿಲ್ಲ. ಅದೊಂದು ಸಾಮೂಹಿಕ ತ್ಯಾಚಾರದ ಪ್ರಕರಣವೂ ಆಗಿತ್ತು. ಅಂದು, ಆ ಕರಾಳ ರಾತ್ರಿ ಆ ಮುಗ್ಧ ಬಾಲೆ ಶಾಚಿ ಮಂಡರ ಕೈಗಳಿಂದ ಬಿಡಿಸಿಕೊಳ್ಳಲು ಎಷ್ಟು ಒದ್ದಾಡಿರಬಹುದು! ಸಹಾಯಕ್ಕಾಗಿ ೂಗಿ ಕರೆಯಲು ಎಷ್ಟೊಂದು ಸಂಕಟಪಟ್ಟಿರಬಹುದು! ಆದರೆ ಪರಿಸರದ ಪ್ರಶಾಂತತೆ ಷ್ಟೊಂದು ಮಡುಗಟ್ಟಿದ್ದು ಆ ಅಮಾಯಕಿಯ ಆಕ್ರಂದನ ದೇವರುಗಳ ಕಿವಿಗಳಿಗೂ ಮುಟ್ಟಲಿಲ್ಲ, ಮಾನವರ ಕಿವಿಗಳಂತೂ ಮುಟ್ಟಲೇ ಇಲ್ಲ.

ದೇವರುಗಳು ನೆಲೆಸಿರುವ ಸ್ಥಳದಲ್ಲಿ ದಾನವರು ನಡೆಸಿದ ದುಷ್ಕೃತ್ಯಕ್ಕೆ ಇದುವರೆಗೂ ಕ್ಷೆಯಾಗಲಿಲ್ಲ. ಇಲ್ಲಿ ಸುಳ್ಳು ಹೇಳಿದರೆ, ಇಲ್ಲಿ ಕಳುವು ಮಾಡಿದರೆ, ಅಂತವರು ಕ್ತಕಾರಿ ಸಾಯುತ್ತಾರೆ ಎಂಬ ಪ್ರತೀತಿ ಇದೆ. ಆದರೆ ಇಲ್ಲೊಂದು ಸಾಮೂಹಿಕ ತ್ಯಾಚಾರ ಹಾಗೂ ಬರ್ಬರ ಕೊಲೆ ನಡೆದಿದ್ದರೂ ಅತ್ಯಾಚಾರಿ ಕೊಲೆಗಡುಕರು ಲೆಮರೆಸಿಕೊಂಡು ಆರಾಮವಾಗಿ ಇದ್ದಾರಲ್ಲಾ ಎಂಬ ಗೊಂದಲ ಭಕ್ತರನ್ನೂ, ಕ್ತರಲ್ಲದವರನ್ನು ಕಾಡುತ್ತಿದೆ.

ಧರ್ಮವೇ ರಾರಾಜಿಸಬೇಕಾದ ಈ ನೆಲದಲ್ಲಿ ನಡೆದ ಈ ದುಷ್ಕೃತ್ಯ ಇದೇ ೊದಲನೆಯದಲ್ಲ, ಸುಮಾರು 15ವರ್ಷಗಳ ಹಿಂದೆ ಇದೇ ರೀತಿ. ಇನ್ನೊಬ್ಬ ರ್ಥಿನಿ ಇದೇ ರೀತಿಯಲ್ಲಿ ಅತ್ಯಾಚಾರಕ್ಕೊಳಗಾಗಿ ಕೊಲೆಗೀಡಾಗಿದ್ದಳು. ನಿಖೆ ಏನೋ ನಡೆಯಿತು. ದುಷ್ಕರ್ಮಿಗಳು ಮಾತ್ರ ಪತ್ತೆಯಾಗಲಿಲ್ಲ. ದುಷ್ಟರನ್ನು ಕ್ಷಿಸಲು ದೇವರು ಇಳಿದು ಬರಲಿಲ್ಲ. ದೇವರ ಹೆಸರಿನಲ್ಲಿ ಪ್ರತಿಜ್ಞೆಮಾಡಿ ಅಧಿಕಾರದ ದ್ದುಗೆಯನ್ನು ಅಲಂಕರಿಸಿದವರೂ ನೇತ್ರಾವತಿ ನೀರಿನಲ್ಲಿ ಕೈತೊಳೆದುಕೊಂಡರು. ಲ್ಲಿ ಏನು ಮಾಡಿದರೂ ಏನೂ ಆಗುವುದಿಲ್ಲ ಎಂಬುದನ್ನು ಖಚಿತ ಪಡಿಸಿಕೊಂಡ ಮಾಜಘಾತುಕರು ತಮಗೊಂದು ಸುರಕ್ಷಿತ ನೆಲೆಯನ್ನು ಕಂಡುಕೊಳ್ಳುವಂತಾಯಿತು. ಲ್ಲಿ ಕಳೆದ ಎರಡು ದಶಕಗಳಲ್ಲಿ ನಡೆದ ನೂರಾರು ಆತ್ಮಹತ್ಯೆಗಳು, ಕೊಲೆಗಳು, ಸಹಜ ಸಾವುಗಳಲ್ಲಿ ಮಹಿಳೆಯರ ಅಸಹಜ ಸಾವುಗಳೇ ಹೆಚ್ಚು.

ಇಂದು ಸರ್ಕಾರ ಸರ್ಕಾರ, ಕ್ಷೇತ್ರಾಡಳಿತ ಟೀಕೆಗೆ ಒಳಗಾಗಿದೆ. ಪ್ರಕರಣವನ್ನು ಓಡಿ ತನಿಖೆಗೆ ಒಪ್ಪಿಸಿ ತನ್ನ ಜವಾಬ್ದಾರಿ ಮುಗಿಯಿತು ಎಂದುಕೊಂಡ ಸರ್ಕಾರದ ವಧಿಯೂ ಮುಗಿಯಿತು. ಈಗ ಹೊಸ ಸರ್ಕಾರ, ಮುಂಬರುವ ಚುನಾವಣೆಗಳನ್ನೇ ಮನದಲ್ಲಿಟ್ಟುಕೊಂಡು ಹೆಜ್ಜೆ ಇಡುತ್ತಿರುವ ಸರ್ಕಾರ! ಟೀಕೆಗಳಿಂದ ಕ್ಷೇತ್ರಾಡಳಿತಕ್ಕೆ ೋವಾಗಿದೆ. ಸಹಜ. ಆದರೆ ತಮ್ಮ ಮುದ್ದು ಮಗಳನ್ನು ಮಾನವ ರೂಪಿ ಕ್ರೂರ ಶುಗಳು ಹರಿದು ತಿಂದು ಹಾಕಿವೆ ಎಂದು ರೋಧಿಸುತ್ತಿರುವ ಆ ಬಾಲೆಯ ಹೆತ್ತವರ ೋವಿನ ಮುಂದೆ ಈ ಟೀಕೆಯಿಂದ ಆಗಬಹುದಾದ ನೋವು ಯಾವ ಲೆಕ್ಕಕ್ಕೂ ಾರದು. ನಾವೂ ಹೆಣ್ಣು ಮಕ್ಕಳನ್ನು ಹೆತ್ತಿರುತ್ತೇವೆ. ನೀವೂ ಹೆಣ್ಣು ಮಕ್ಕಳನ್ನು ಹೆತ್ತಿರುತ್ತೀರಿ. ನಮ್ಮ-ನಿಮ್ಮ ಮಗಳಿಗೂ ಇದೇ ರೀತಿಯಾದರೆ ನಮ್ಮ ವರ್ತನೆ ಹೇಗಾಗಿರಲಿಕ್ಕಿಲ್ಲ?

ಜವಾಬ್ದಾರಿ ಸ್ಥಾನದಲ್ಲಿ ಇದ್ದವರಿಗೆ ಟೀಕೆ ಬಂದೇ ಬರುತ್ತದೆ. ಟೀಕೆಯಿಂದ ನನಗೆ ವಾಯಿತು ಎನ್ನುವುದು ತೀರಾ ಸಣ್ಣತನ. ನನಗಾದ ನೋವಿಗಿಂತ ಮಗಳನ್ನು ಳೆದುಕೊಂಡ ಆ ತಾಯಿ-ತಂದೆಯರ ನೋವೇ ಹೆಚ್ಚು. ನಾನು ಆ ನೋವನ್ನು ಳಿಸಲು ಬದ್ಧನಾಗುತ್ತೇನೆ. ದುಷ್ಕರ್ಮಿಗಳು ಯಾರೇ ಇರಲಿ, ಅವರನ್ನು ಪತ್ತೆ ಹಚ್ಚಿ ಕ್ಷಿಸುವವರೆಗೂ ವಿಶ್ರಮಿಸುವುದಿಲ್ಲ ಎಂಬ ಮಾತು ಮೂಡಿ ಬರಬೇಕಾಗಿತ್ತು.

ಲೆಕ್ಕವಿಲ್ಲದಷ್ಟು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಚಟುವಟಿಕೆಗಳು ನಡೆಯುತ್ತಿರುವ ಕ್ಷೇತ್ರದ ಮುಖ್ಯಸ್ಥರ ಜವಾಬ್ದಾರಿಯೂ ಅಷ್ಟೇ ದೊಡ್ಡದಾಗಿರುತ್ತದೆ. ಕ್ಷಾಂತರ ಸಂಖ್ಯೆಯಲ್ಲಿ ಬರುತ್ತಿರುವ ಮುಗ್ಧ ಭಕ್ತರಿಗೆ ಅಗತ್ಯ ರಕ್ಷಣಾ ವ್ಯವಸ್ಥೆ ಇದೆಯಾ? ಕ್ಷೇತ್ರದ ಅಧಿಕಾರಿ ವರ್ಗದ ಸದಸ್ಯರು, ಅವರ ಕುಟುಂಬದ ಸದಸ್ಯರ ಲನವಲನಗಳ ಬಗ್ಗೆ ಕಣ್ಣಿಡುವ ವ್ಯವಸ್ಥೆ ಇದೆಯಾ? ದಟ್ಟ ಅರಣ್ಯ, ಬಹುತೇಕವಾಗಿ ತುಂಬಿ ಹರಿಯುತ್ತಿರುವ ನೇತ್ರಾವತಿ, ನಿತ್ಯವೂ ತಪ್ಪದ ಜನಸಂದಣಿ, ಇವೆಲ್ಲವೂ ದುಷ್ಕೃತ್ಯಗಳಿಗೆ ಹೇಳಿ ಮಾಡಿಸಿದ ಸ್ಥಳದಂತಿದೆ. ಇಲ್ಲಿಯ ಜನದಟ್ಟನೆಯ ಪರಿಣಾಮ ಅಕ್ಕಪಕ್ಕದ ಗ್ರಾಮಗಳ ಜನಜೀವನದ ಮೇಲೆಯೂ ಆಗುತ್ತಿರುತ್ತದೆ. ಇದು ಕೇವಲ ಪೊಲೀಸರ ಜವಾಬ್ದಾರಿ ಎಂದುಕೊಂಡರೆ ತಪ್ಪಾಗುತ್ತದೆ.

ಸಾರ್ವಜನಿಕ ಟೀಕೆಗೆ ಕ್ಷೇತ್ರದ ದೇವರೇ ಉತ್ತರ ಕೊಡುತ್ತಾನೆ ಎಂಬ ಬೆದರಿಕೆ-ಯ ಮಾತುಗಳನ್ನು ಆಡುವ ಬದಲು ಟೀಕೆ ಮಾಡುತ್ತಿರುವವರನ್ನು ಮುಕ್ತ ಚರ್ಚೆಗೆ ಆಹ್ವಾನಿಸಿ ಒಂದು ಸೌಹಾರ್ದ ವಾತಾವರಣದಲ್ಲಿ ಅವರ ಅನುಮಾನಗಳಿಗೆ ಉತ್ತರ ಲು ಕ್ಷೇತ್ರಾಡಳಿತ ಮುಂದಾಗಬೇಕು. ಎಲ್ಲಕ್ಕೂ ಮುಖ್ಯವಾಗಿ ಅಲ್ಲಿ ನಡೆದ ಅತ್ಯಾಚಾರ ಹಾಗೂ ಕೊಲೆ ಪ್ರಕರಣದ ನೈಜ ಅಪರಾಧಿಗಳನ್ನು ಪತ್ತೆಹಚ್ಚಲು ಕ್ಷೇತ್ರಾಡಳಿತ ಎಲ್ಲ ಸಹಕಾರವನ್ನು ನೀಡಬೇಕು.

ಕಾಂಗ್ರೆಸ್‌ನಲ್ಲಿಯ ' ಈ' ಸಮನ್ವಯ ಅದೆಷ್ಟು ದಿನ?

ಕಾಂಗ್ರೆಸ್‌ನಲ್ಲೀಗ ಸದ್ದು ಗದ್ದಲ ಕೇಳಿಸುತ್ತಿಲ್ಲ! ಹಾಗಂತ ಸದ್ದು-ಗದ್ದಲವೇ ಇಲ್ಲವೆಂದೇನಲ್ಲ! ಅದು ಹೊರಗೆ ಕೇಳಿಸುತ್ತಿಲ್ಲ ಎಂಬುದಷ್ಟೇ ಈಗಿನ ಸಂಗತಿ.

ದಸರಾ ಮುಗಿಸಿಕೊಂಡ ಸರಕಾರ ಯಥಾಸ್ಥಿತಿಯಲ್ಲೇ ಸಾಗುತ್ತಿರುವಂತೇನೋ ತೋರಿಸುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಲಗಾಮು ಹಾಕಲು ಸಮನ್ವಯ ಸಮಿತಿ ರಚಿಸಿ ಅದ-ಕ್ಕೆ ಕೆಪಿಸಿಸಿ ಅದ್ಯಕ್ಷ ಡಾ.ಪರಮೇಶ್ವರರನ್ನು ಸಂಚಾಲಕರನ್ನಾಗಿಸಿದ ಬಳಿಕ ಅದನ್ನೇ ಮತ್ತೊಂದು ಶಕ್ತಿ ಕೇಂದ್ರವಾಗಿಸುವ ಸೂಚನೆ ಹೊರಟಿತ್ತು. ಅದಕ್ಕನುಗುಣವಾಗಿಯೇ ಅದ-ಕ್ಷರು ಸಹ ಗುಡುಗ ತೊಡಗಿದ್ದರು. ಮಾತ್ರವಲ್ಲ, ಸಾರ್ವಜನಿಕವಾಗಿಯೇ ತಮ್ಮ ಅತೃಪ್ತಿಯನ್ನು ಹೊರ ಹಾಕಿ ತಮ್ಮದೇ ಪಕ್ಷದ ಸರಕಾರವನ್ನು ಹಿಗ್ಗಾಮುಗ್ಗ ಟೀಕಿಸುವದರಲ್ಲಿ, ಸರಕಾರದ ಸಚಿವರಿಗೆ ಎಚ್ಚರಿಕೆಗಳನ್ನು ಕೊಡುತ್ತಾ ಅಖಾಡಕ್ಕೆ ಇಳಿದೇ ಬಿಟ್ಟಿದ್ದರು. ಕೆಲ ಸಂದರ್ಭಗಳಲ್ಲಂತೂ ಸಮಚಿತ್ತ ಕಳೆದುಕೊಂಡೂ ಇದ್ದರು. ಅಲ್ಪಸಂಖ್ಯಾತರಿಗಾಗಿ ಏರ್ಪಡಿಸಿದ್ದ ಶಿಬಿರದಲ್ಲಿ ಸಚಿವ ಖಮರುಲ್ಲರನ್ನು ಸ್ಪಾಟ್‌ನಲ್ಲೇ ತರಾ-ಟೆಗೆ ತೆಗೆದುಕೊಂಡು ಇರಿಸು ಮುರಿಸು ಸೃಷ್ಟಿಸಿ, ಅವರಿಂದಲೂ ಉಲ್ಟಾ ಉಪದೇಶ ಪಡೆದದ್ದು, ಕೊಟ್ಟ ಸಾಲ ಕೊಡಬೇಕೇನಿಲ್ಲ ಎಂಬರ್ಥದ 'ಟೋಪಿ ಹಾಕುವ' ಹೇಳಿಕೆ ವಿಚಿತ್ರ ವಿನ್ಯಾಸ ಪಡೆದದ್ದು ಇನ್ನೂ ಆಸಕ್ತರ ಬಾಯಲ್ಲಿ ರಸಗವಳವೇ. ಹೀಗೆ ಕಾಂಗ್ರೆಸ್‌ನೊಳಗೆ ಅಧಿಕಾರ ಕೇಂದ್ರವಾಗುವ ಗುದ್ದಾಟವೊಂದು ಸಾರ್ವಜನಿಕವಾಗಿಯೇ ನಡೆದು ವಿಚಿತ್ರ ಸ್ವರೂಪ ಪಡೆದುಕೊಳ್ಳತೊಡಗಿತ್ತು.


ಕಾಂಗ್ರೆಸ್‌ನಲ್ಲಿ ಭಿನ್ನಮತ, ಗುಂಪುಗಾರಿಕೆ-ಕಿತ್ತಾಟ ಹೊಸದೇನಲ್ಲ. ಯಾವುದೇ ಸಾರ್ವಜನಿಕ ಹಿತಾಸಕ್ತಿಯಿಲ್ಲದೇ ಕೇವಲ ಅಧಿಕಾರ, ಸಂಪತ್ತಿನ ಲೂಟಿಯೇ ಪ್ರಮುಖವಾಗಿರುವ ಇಂತಹುಗಳಿಗೆ ಬಿಜೆಪಿಯೂ ಸೇರಿದಂತೆ ಬಲಪಂಥೀಯ ಪಕ್ಷಗಳು ಅವನ್ನು 'ಕ್ರಿಯಾಶೀಲ ಪ್ರಜಾಪ್ರಭುತ್ವ'ವೆಂದು ಕ-ರೆದುಕೊಂಡು ಸಮರ್ಥನೆಯ ಸಮಜಾಯಿಷಿ ನೀಡುತ್ತವೆ. ಸ್ವತಂತ್ರ, ಬಲಿಷ್ಟ ನಾಯಕರು-ನಾಯಕತ್ವ ಬೆಳೆಯುವುದನ್ನು ಒಪ್ಪದ ಕಾಂಗ್ರೆಸ್ ಪಕ್ಷವೂ ಸಹ ನಾಯಕರ ನೆತ್ತಿಯ ಮೇಲೆ ಮೊಳೆ ಹೊಡೆಯುವುದಕ್ಕೆ ಹೈಕಮಾಂಡ್ ತಡ ಮಾಡುವುದಿಲ್ಲ. ಇಲ್ಲೂ ಮಾಡಿಲ್ಲ.

ಆದರೆ, ಸರಕಾರ ಅಧಿಕಾರಕ್ಕೆ ಬಂದ ಹೊಸದರಲ್ಲೇ ಸಿ.ಎಂ.ನ್ನು ನಿಯಂತ್ರಿಸಲು ಸ್ವಪಕ್ಷೀಯರ 'ಪಕ್ಷೇತರ' ಚಟುವಟಿಕೆಗಳಿಗೆ ಇಂಬು ನೀಡಿದರೆ ಒಡಕು ಹೆಚ್ಚಾಗಿ ಬಿಜೆಪಿಯ ಆಕ್ರಮಣಕಾರೀ ನಡೆಯ ಮುಂದೆ ಮುಂಬರುವ ಪಾರ್ಲಿಮೆಂಟ್ ಚುನಾವಣೆಯಲ್ಲಿ ಪೆಟ್ಟು ತಿನ್ನಬೇಕಾಗುವ ಆತಂಕ ಕಾಡಿರುವುದೇ ಕದನ ವಿರಾಮ ಘೋಷಣೆಗೆ ಕಾರಣವಿದೆ. ಆದ್ದರಿಂದಲೇ ಒಳ ಹೊಡೆತಕ್ಕೆ ಕುಮ್ಮಕ್ಕು ನೀಡುತ್ತಿದ್ದ ಹೈಕಮಾಂಡ್ ತನ್ನ ವೇಗವನ್ನು ಕಡಿತಗೊಳಿಸಿದೆ. ಹೀಗಾಗಿಯೇ ಪಕ್ಷದಲ್ಲಿ ಒಗ್ಗಟ್ಟು ಕಾಪಾಡಿಕೊಂಡು ಮುಂದಿನ ಚುನಾವಣೆಯಲ್ಲಿ ಹೆಚ್ಚು ಸ್ಥಾನಗಳಿಸಿಕೊಡಬೇಕೆಂಬ ಸೂಚನೆಯನ್ನು ಅದು ರವಾನಿಸಿತು. ಆ ಬಳಿಕವೇ ಡಾ.ಪರಮೇಶ್ವರ್ ತಮ್ಮಲ್ಲಿ ಯಾವುದೇ ಒಡಕು ಇಲ್ಲವೆಂದೂ, ಸರಕಾರ, ಸಿ.ಎಂ.ಕಾರ್ಯವೈಖರಿ ಬಗ್ಗೆ ಅತೃಪ್ತಿ ಯಾರಲ್ಲೂ ಇಲ್ಲವೆಂದೂ, ಹೈಕಮಾಂಡ್‌ಗೆ 21 ಶಾಸಕರು ದೂರು ನೀಡಿದ್ದಾರೆಂಬುದು ಸುಳ್ಳು ಎಂದೂ ಹೇಳಿರುವುದು!

ಹೀಗಂದ ಮಾತ್ರಕ್ಕೆ ಪರಮೇಶ್ವರರಿಗಾಗಲೀ, ಎಸ್.ಎಂ.ಕೃಷ್ಣ-ಡಿ.ಕೆ.ಶಿ ಯವರ ಟೋಳಿಗಾಗಲೀ ಸಿದ್ಧರಾಮಯ್ಯನವರೊಂದಿಗೆ ರಾಜಿ ಅಥವಾ ಸಹಮತ, ಸಮಾಧಾನವಿದೆಯೆಂದರ್ಥವೇನಲ್ಲ. ಕೇವಲ ಸಮಯಕ್ಕಾಗಿ ಕಾಯುವುದಷ್ಟೇ. ಸದ್ಯಕ್ಕಂತೂ ಈ ಒತ್ತಡದಲ್ಲಿ ತಮಗೆ ಬೇಕಾದ ಹಾಗೆ ಸರಕಾರ ನಡೆದುಕೊಳ್ಳುವಂತೆ ನೋಡುವುದು, ಜೊತೆ ಜೊತೆಗೆ ನೌಕರರ ವರ್ಗಾವಣೆ ದಂಧೆ, ಅವರವರ ಕ್ಷೇತ್ರಗಳಲ್ಲಿ 'ಸ್ವೇಚ್ಛಾಧಿಕಾರ' ಅನುಭವಿಸುವಲ್ಲಿನ ತಡೆಯಿಂದ ಹುಟ್ಟುವ ಅತೃಪ್ತಿಯನ್ನು ತಮ್ಮತ್ತ ಕ್ರೋಢೀಕರಿಸುವ ಪ್ರಯತ್ನವನ್ನಂತೂ ಅತೀ ಎಚ್ಚರದಿಂದಲೇ ಮಾಡುತ್ತಿದ್ದಾರೆ.

ಈ ಒಟ್ಟು ಪ್ರಸಂಗದಲ್ಲಿ ತಮಗನ್ನಿಸಿದಂತೆ ನಡೆಯಬೇಕೆಂಬ ಸಿ.ಎಂ. ನಡೆಗೆ ಕೊಂಚ ನಿಯಂತ್ರಣವಿದೆ ನಿಜ. ಆದರೆ ಅದೇ ಹೊತ್ತಿನಲ್ಲಿ ಆಡಳಿತದ ಮೇಲೆ ಸಾಧಿಸಬೇಕಾದ ನಿಯಂತ್ರಣ ಸಾಧ್ಯವಾಗುತ್ತಿಲ್ಲ ಎಂಬುದೂ ಅಷ್ಟೇ ನಿಜ. ತಮ್ಮೊಳಗಿನ ಒಡಕಿನಿಂದಾಗಿ ಪೋಲೀಸ್ ಇಲಾಖೆಯಲ್ಲಿ ಅಧಿಕಾರಿಗಳ ವರ್ಗಾವಣೆ ವಿಚಾರದಲ್ಲಂತೂ ಹೊರಡಲಿದ್ದ ಆದೇಶವನ್ನೇ ಶಾಸಕರ ಒತ್ತಡದಿಂದಾಗಿ ಸಿ.ಎಂ. ತಡೆದು ತಿದ್ದಿ ಪ್ರಕಟಿಸಿದ್ದು ತೀವ್ರ ಸಾರ್ವಜನಿಕ ಟೀಕೆಗೂ ಗು-ರಿಯಾಗಿತ್ತು, ಸಿ.ಎಂ.ಹಿಡಿತ, ವರ್ಚಸ್ಸು ಕುಸಿದಿತ್ತು. ಮುಖ್ಯವಾಗಿ ಆಡಳಿತ ಯಂತ್ರದಲ್ಲಿ ಸನ್ನಿವೇಶದ ದುರ್ಲಾಭ ಹೊಡೆಯಲು ಅವಕಾಶವನ್ನು ನಿರ್ಮಿಸಿತು. ವಿಶೇಷವಾಗಿ ಸಾಮಾನ್ಯ ಜನ, ಬಡವರು, ದುಡಿಯುವ ಸಮೂಹಗಳ ಹಿತ ಕಾಯುವಲ್ಲಿ ಅದೇ ನಿರ್ಲಕ್ಷ ಮುಂದುವರಿಯಿತು. ಹೀಗಾಗಿ ಈಗಲೂ ಬರ, ನೆರೆ ಪರಿಹಾರದತ್ತ ಸಮರ್ಥ ಕ್ರಮಗಳಿಲ್ಲ. ಹೋಗಲಿ, ದೊಡ್ಡ ಗಂಟಲಿನಲ್ಲಿ ಕೂಗುತ್ತಿರುವ ಒಂದು ರೂಪಾಯಿ ರೇಷನ್, ರೇಷನ್ ಕಾರ್ಡ್ ಅವ್ಯವಸ್ಥೆ ಸರಿಪಡಿಸಲೂ ಸಾಧ್ಯವಾಗಿಲ್ಲ. ಆಹಾರ ಭದ್ರತೆ-ಗಾಗಿ ಸೋನಿಯಾ-ರಾಹುಲಗಾಂಧಿಯಂತಹ ಮಹಾನಾಯಕರು ಕಣ್ಣೀರು ಸುರಿಸುವುದೂ ನಿಂತಿಲ್ಲ. ಆದರೆ ವಿಶ್ವ ಬಂಡವಾಳಗಾರರು, ಉದ್ಯಮಿಗಳು, ಶ್ರೀಮಂತರ ಪಾಲಿಗೆ ಈ ಪ್ರಶ್ನೆ ಉದ್ಭವವೇ ಆಗದು ಅಲ್ಲವೇ? ಏನಿದ್ದರೂ ಅವರ ಬಗ್ಗೆ ಅಧಿಕಾರಶಾಹಿ ಚುರುಕಾಗಿಯೇ ವರ್ತಿಸುತ್ತದೆ.

ಇವಕ್ಕೆಲ್ಲಾ ಸುಲಭದಲ್ಲಿ ಪರಿಹಾರ ಸಿಗುವುದು ಸಾಧ್ಯವೇ? ಈಗ ಕಾಣುವ ಸಮನ್ವಯದಿಂದ ಏನಾದರೂ ಜಾದೂ ಆದೀತೆ? ಹಾಗೆಂದು ಭಾವಿಸುವುದು ಸಾಧುವೇ? ಇದು ಕಾಂಗ್ರೆಸ್ ಸರಕಾರವೇ ಅಲ್ಲವೇ?



ಡಿಸೆಂಬರ್‌ನಲ್ಲಿ "ಬೆಂಗಳೂರು ಚಲೋ" ಸಮಸ್ಯೆಗಳೆದುರು ಹೋರಾಡಲು ಅಕ್ಷರ ದಾಸೋಹ ನೌಕರರಿಗೆ ಕರೆ.

ಗೈಬು ಎಂ. ಜೈನೆಖಾನ

ಬೆಳಗಾವಿ, ಹತ್ತು ವರ್ಷಗಳಿಂದ ಪ್ರಾಥಮಿಕ/ಪ್ರೌಢಶಾಲೆಗಳಲ್ಲಿ ಬಿಸಿ ಊಟದ ಯೋಜನೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ರಾಜ್ಯದ 1,20,000 ಬಡ, ವಿಧವಾ ಹೆಣ್ಣು ಮಕ್ಕಳನ್ನು ಕೇವಲ ರೂ. 1000/- ವೇತನದಲ್ಲಿ ಗುಲಾಮರಂತೆ ದುಡಿಸಿಕೊಳ್ಳುತ್ತಿರುವ ಸರಕಾರದ ನೀತಿ ಖಂಡನೀಯ ಎಂದು ಅಕ್ಷರ ದಾಸೋಹ ನೌಕರರ ಸಂಘದ ರಾಜ್ಯ ಉಪಾಧ್ಯಕ್ಷರಾದ ಶ್ರೀಮತಿ ಮಹಾದೇವಮ್ಮರವರು ಧರ್ಮನಾಥ ಭವನದಲ್ಲಿ ನಡೆದ ಅಕ್ಷರ ದಾಸೋಹ ನೌಕರರ ಸಂಘದ ಬೆಳಗಾವಿ ಜಿಲ್ಲಾ ದ್ವಿತೀಯ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು.



ರಾಯಚೂರು ಜಿಲ್ಲೆಯ ಅರಕೇರಾ ಎಂಬ ಗ್ರಾಮದಲ್ಲಿ ಪ್ರಾರಂಭವಾದ ಬಿಸಿ ಊಟದ ಯೋಜನೆ ನಂತರದಲ್ಲಿ ಇಡೀ ರಾಜ್ಯದಲ್ಲಿ ವಿಸ್ತರಿಸಲಾಯಿತು. ಇದ-ಕ್ಕೆ ಕಾರಣ ಬಿಸಿ ಊಟದ ನೌಕರರ



ಪ್ರಾಮಾಣಿಕ ಕೆಲಸದಿಂದಲೇ ಎಂಬುದನ್ನು ಸರಕಾರ ಮರೆಯಬಾರದೆಂದು ಹೇಳಿದರು. ಮುಂದುವರೆದು ಅವರು ಕನಿಷ್ಠ ವೇತನಕ್ಕಾಗಿ, ಕೆಲಸದ ಭದ್ರತೆಗಾಗಿ ಡಿಸೆಂಬರ್ 2 ರಂದು ಅಡುಗೆ ಕೆಲಸ ಬಂದ ಮಾಡಿ "ಬೆಂಗಳೂರು ಚಲೋ" ಕಾರ್ಯಕ್ರಮಕ್ಕೆ ಹೊರಡಲು ಬಿಸಿ ಊಟದ ನೌಕರರು ತಯಾರಾಗಬೇಕೆಂದು ಕರೆಕೊಟ್ಟರು.

ಹತ್ತು ತಿಂಗಳಿನ ಒಪ್ಪಂದದ ಮೇಲೆ ಕೆಲಸ ನಿರ್ವಹಿಸುತ್ತಿರುವ ಬಿಸಿ ಊಟದ ನೌಕರರನ್ನು ಹತ್ತು ತಿಂಗಳದ ನಂತರ ಅವರನ್ನೇ ಕೆಲಸದಲ್ಲಿ ಮುಂದುವರೆಸಬೇಕೆಂದು ಹೋರಾಟ ಮಾಡಿದ್ದರ ಫಲವಾಗಿ ಇವತ್ತು 10-11 ವರ್ಷಗಳಿಂದ ಶಾಲೆಗಳಲ್ಲಿ ಬಿಸಿ ಊಟದ ನೌಕರರು ಸತತವಾಗಿ ಕೆಲಸ ಮಾಡುತ್ತಿರುವುದು ಸಂಘಟನೆಯ ಸಾಧನೆಯಾಗಿದೆ ಎಂದು ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ ಹಿರಿಯ ಕಾರ್ಮಿಕ ಮುಖಂಡರಾದ ವ್ಹಿ. ಪಿ ಕುಲಕರ್ಣಿರವರು ಹೇಳಿದರು.

ಇವತ್ತು ದಿನದಿಂದ ದಿನಕ್ಕೆ ಅಹಾರದ ಬೆಲೆ, ತರಕಾರಿ ಬೆಲೆ, ಹಾಲಿನ ದರ ಏಣಿಯಂತೆ ಏರುತ್ತಲೇ ಇವೆ. ಆದರೆ ನಮ್ಮ ವೇತನ ಮಾತ್ರ ಏರುತ್ತಿಲ್ಲ. ಈ ಬೆಲೆ ಏರಿಕೆ-ಯ ಹಾಗೂ ಸರಕಾರದ ನೀತಿಯ ವಿರುದ್ಧ ಬಿಸಿ ಊಟದ ನೌಕರರು ನಿರಂತರವಾಗಿ ಹೋರಾಟ ಮಾಡಬೇಕೆಂದು ಜೀವ ವಿಮಾ ನೌಕರರ ಸಂಘದ ಮುಖಂಡರಾದ ಶ್ರೀ ಜಿ.ವಿ. ಕುಲಕರ್ಣಿ ರವರು ಸಮ್ಮೇಳನಕ್ಕೆ ಶುಭ ಕೋರಿ ಮಾತನಾಡಿದರು.

ಅಂಗನವಾಡಿ ನೌಕರರ ಸಂಘದ, ಜಿಲ್ಲಾ ಅಧ್ಯಕ್ಷರಾದ ಶ್ರೀಮತಿ ದೊಡ್ಡವ್ವ ಪೂಜಾರಿ, ಕಟ್ಟಡ ಕಾರ್ಮಿಕರ ಸಂಘದ ಶ್ರೀ ನಾಗಪ್ಪ ಸಂಗೊಳ್ಳಿ, ಪಂಚಾಯತ ನೌಕರರ ಸಂಘದ ಶ್ರೀ ಟಿ.ಎ.ಬಾಬಾಗೌಡ, ಮನೆ ಕೆಲಸಗಾರರ ಸಂಘದ ಶ್ರೀ ಶಂಕರಗೌಡ ದೇಸಾಯಿ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದರು. ಕಾರ್ಮಿಕರ ಮುಖಂಡರಾದ ಎಲ್.ಎಸ್. ನಾಯಕರವರು ಸಮ್ಮೇಳನಕ್ಕೆ ಬಂದ ಎಲ್ಲ ಪ್ರತಿನಿಧಿಗಳನ್ನು ಸ್ವಾಗತಿಸಿ ಕೊನೆಯಲ್ಲಿ ವಂದಿಸಿದರು.

ಮಧ್ಯಾಹ್ನದ ನಂತರ 2 ನೇ ಅಧಿವೇಶನದಲ್ಲಿ ಜಿಲ್ಲಾ ಕಾರ್ಯದರ್ಶಿ ಗೈಬು ಜೈನೆಖಾನರವರು ವರದಿಯನ್ನು ಮಂಡಿಸಿದರು. ವರದಿಯ ಮೇಲೆ 11 ಜನ ಅಕ್ಷರ ದಾಸೋಹ ನೌಕರರು ಮಾತನಾಡಿದರು.

ನಾವು ಹತ್ತು ವರ್ಷದಿಂದ ರೂ. 600-1000 ಪಗಾರದಾಗ ದುಡಕೋತ ಬಂದೇವಿ. ನಮಗ ತಿಳಿಲಾರ್ದಂಗ ನಮ್ಮ ಊರಾಗಿನ ಎಸ್.ಡಿ.ಎಂ.ಸಿ.ಯವರು ಹಾಗೂ ಊರಿನ ಹಿರ್‍ಯಾರು ಕೂಡಿಕೊಂಡು ಹುಕ್ಕೇರಿಯ (ಚಂದ್ರಶೇಖರ ಸ್ವಾಮಿ) ಮಠಕ್ಕ ನಮ್ಮ ಬಿಸಿ ಅಡುಗೆ ಬರೆದುಕೊಟ್ಟಾರ! ಮೂರು ತಿಂಗಳಾತ್ರಿ ನಮಗ ಕೆಲಸದಿಂದ ತೇ-ಗೆದಾರ. ನಾವು ಬಡುವರು ಇದರ ಮ್ಯಾಗ ಭರವಸೆ ಇಟ್ಟಕೊಂಡು ಕೆಲ್ಸಾ ಮಾಡತಿದ್ವಿ, ಈಗ ದಿಢೀರಾಗಿ ಕೆಲಸದಿಂದ ತಗೆದು ನಮ್ಮೂರಾಗಿನ ಮಂದಿ ನಮಗ ಹೊಟ್ಟಿಮ್ಯಾಗ ಹೊಡದಾರ್ರಿ, ನೀವ ಏನರ ಮಾಡಬೇಕು ನಮಗ ಕೆಲ್ಸಾ ಕೊಡಸಬೇಕ್ರಿ ಅಂತಾ ಚಿಕ್ಕೋಡಿ ತಾಲೂಕಿನ ನಾಗರಮುನವಳ್ಳಿ ಗ್ರಾಮದ ದಲಿತ ಮಹಿಳೆ ವಿಮಲ ಕಾಂಬ್ಳೆ ರವರು ಅಳುತ್ತಲೇ ಹೇಳುವುದು ನೋಡಿ ಇಡೀ ಸಮ್ಮೇಳನದಲ್ಲಿ ಭಾಗವಹಿಸಿದ ಮಹಿಳೆಯರ ಕಣ್ಣು ತೇವಗೊಂಡವು.

ಮೊದಲು ನಾವು ಸಮತಾ ಸೈನಿಕ ದಳ ಎಂಬ ಸಂಘಟನೆಯಲ್ಲಿ ಇದ್ದೆವು. ಅವರು ಯಾವುದೇ ರೀತಿಯಿಂದ ಅಡುಗೆಯವರ ಬಗ್ಗೆ ಕೆಲ್ಸಾ ಮಾಡಲಿಲ್ಲ. ನಂತರ ನಾವು ಸಿಐಟಿಯು ಸಂಘದವರಿಗೆ ತಿಳಿಸಿದೆವು. ಅವರು ಬಂದು ಸಭೆ ಮಾಡಿ ನಮಗ ವಿಷಯ ತಿಳಿಸಿದರು. ನಮಗ ಪಗಾರ ಹೆಚ್ಚಾದಾಗ ಎಲ್ಲಾ ಕಡೆ ಬಾಕಿ ಪಗಾರ ಕೊಟ್ಟಾರ್ರಿ, ನಮ್ ತಾಲೂಕಾನ್ಯಾಗ ಇನ್ನೂವರೆಗೆ ಕೊಟ್ಟಿಲ್ಲ. ನಮಗ ಅರಿಯರ್ಸ್ ಕೊಡಸಬೇಕ್ರಿ ಅಂತಾ ನಾವು ಹೇಳಿದ ಮ್ಯಾಗ ಒಂದು ವಾರದಲ್ಲಿ ತಾಲೂಕಾ ಪಂಚಾಯತಿ ಕಚೇರಿ ಮುಂದ ನಮಗೆಲ್ಲರಿಗೂ ಸೇ[...] ಒಂದು ದಿನಾ ಧರಣಿ ಮಾಡಿಸಿ ಅರಿಯ[...] ಕೊಡಿಸಿದ್ರು, ನಮಗ ಸಿಐಟಿಯು ಸಂಘ[...] ಮೇಲೆ ಬಾಳ ಭರವಸೆ ಬಂತ್ರಿ, [...] ಸಿಐಟಿಯು ಸಂಘಟನೆ ಹೇಳಿದಂಗ ಕೆ[...] ಮಾಡ್ತಿವಿ ಈ ಸಲ ಮೆಂಬರ್‌ಶೀಪ್‌ನು [...] ಮಾಡ್ತಿವಿ ಅಂತಾ ರಾಯಭಾಗ ತಾಲೂ[...] ಹಾರೂಗೇರಿ ಗ್ರಾಮದ ಭಾರತಿ ಜೋಗನ್ನ[...] ಮಾತನಾಡಿದರು. ಕೊನೆಯಲ್ಲಿ ಜಿ[...] ಸಮಿತಿಯನ್ನು ರಚಿಸಲಾಯಿತು.

ಅಧ್ಯಕ್ಷರು : ಎಲ್. ಎಸ್. ನಾಯಕ
ಉಪಾಧ್ಯಕ್ಷರು : ಶಾಂತಾ ಗೊರವನಕೊ[...]
ಸುಮತಿ ಕೊಲ್ಲಾಪುರ[...]
ವೆಂಕವ್ವ ಕಾನಟ್ಟಿ
ಭಾರತಿ ಜೋಗನ್ನವ[...]
ಕಾರ್ಯದರ್ಶಿ : ಗೈಬು ಎಂ. ಜೈನೆಖಾ[...]
ಸಹ ಕಾರ್ಯದರ್ಶಿಗಳು : ಶಕುಂತಲಾ ಉರಣೆ
ರಾಜಶ್ರೀ ಕವಳಿಕಟ್ಟಿ
ಸುವರ್ಣಾ ಆವಟೆ
ಲಕ್ಷ್ಮೀ ಪಾಟೀಲ
ಖಜಾಂಚಿ : ತುಳಸಾ ಮಾಳದ[...]

ಹೀಗೆ 11 ಜನರ ಪದಾಧಿಕಾರಿಗಳ ಹಾ[...] 18 ಜನ ಕಾರ್ಯಕಾರಿ ಸಮಿತಿ ಸದಸ್ಯ[...] ಆಯ್ಕೆ ಮಾಡಿ ಜಿಲ್ಲಾ ಸಮಿತಿ ರಚಿಸಲಾಯಿ[...] ಕೊನೆಯಲ್ಲಿ ಕಾರ್ಯದರ್ಶಿಯಾದ ಗೈ[...] ಎಂ. ಜೈನೆಖಾನರವರು ನೂತನವಾ[...] ಆಯ್ಕೆಯಾದ ಸದಸ್ಯರಿಗೆ ಅಭಿನಂ[...] ಬೆಂಗಳೂರು ಚಲೋ ಕಾರ್ಯಕ್ರಮ[...] ತಯಾರಿ ನಡೆಸಬೇಕೆಂದು ನೆನ[...] ಎಲ್ಲರಿಗೂ ವಂದಿಸಿ ಕಾರ್ಯಕ್ರಮ ಮುಕ್ತಾ[...] ಮಾಡಿದರು.

ಉಪ್ಪುಂದ : ಕಟ್ಟಡ ಕಾರ್ಮಿಕ ಕುಟುಂಬಕ್ಕೆ 1 ಲಕ್ಷ ರೂ. ವೈದ್ಯಕೀಯ ಧನ ಸಹಾಯ:-

ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಢರೇಷನ್(ರಿ)ಗೆ ಸಂಯೋಜಿಸಲ್ಪಟ್ಟ ಕುಂದಾಪುರ ತಾಲೂಕು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘ (ಸಿಐಟಿಯು)ದ ಉಪ್ಪುಂದ ಘಟಕದ ಸದಸ್ಯ ಕಟ್ಟಡ ಕಾರ್ಮಿಕ, ರಂಗ ದೇವಾಡಿಗ ಚಿಕ್ಕಬೆಟ್ಟು ಮೊಗೇರಿ ಹೊಸ್ಕೋಟೆ ಇವರ ಕ್ಯಾನ್ಸರ್ ಚಿಕಿತ್ಸೆಗೆ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಬೆಂಗಳೂರಿನಿಂದ ರೂಪಾಯಿ ಒಂದು ಲಕ್ಷದ ನಾಲ್ಕು ಸಾವಿರ ಧನ ಸಹಾಯ ಮಂಜೂರು ಮಾಡಲಾಗಿದೆ. ಕಟ್ಟಡ ಕಾರ್ಮಿಕರ ಸಂಘದ ಉಪ್ಪುಂದ ಘಟಕದ ಸರ್ವ ಸದಸ್ಯರ ಸಭೆಯಲ್ಲಿ - ಸಂಘದ ಅಧ್ಯಕ್ಷರೂ, ಸ್ಥಳೀಯ ಪಂಚಾಯತ್ ಸದಸ್ಯರೂ ಆಗಿರುವ ಮಾಧವ ದೇವಾಡಿಗರು [...] ಸಹಾಯ ಮಂಜೂರಾದ ಆದೇಶ ಪತ್ರವ[...] ಫಲಾನುಭವಿಯ ಪತ್ನಿ ಲಕ್ಷ್ಮಿ ದೇವಾಡಿಗ[...] ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಕ[...] ಕಾರ್ಮಿಕರ ಸಂಘದ ತಾಲೂಕು ಅ[...] ಯು.ದಾಸ ಭಂಡಾರಿ, ಉಪಾಧ್ಯಕ್ಷ ಗ[...] ತೊಂಡೆಮಕ್ಕಿ, ಕಾರ್ಯದರ್ಶಿ ವೆಂಕ[...] ಕೋಣಿ, ಶ್ರೀಧರ, ಭಾಸ್ಕರ, ಹೇಮ[...] ಮಾಧವ ಉಪಸ್ಥಿತರಿದ್ದರು.




ಕಟ್ಟಡ ಕಾರ್ಮಿಕರ ಕಲ್[...] ಮಂಡಳಿಯಲ್ಲಿ ಜಮಾಗೊಂಡಿರುವ ಕಲ್[...] ಮಂಡಳಿ ನಿಧಿ ಕಟ್ಟಡ ಕಾರ್ಮಿಕರ ವಿ[...] ಸೌಲಭ್ಯಗಳ ಹಣವನ್ನು ಹೆಚ್ಚಿ[...] ಮಾತ್ರ ಉಪಯೋಗಿಸಬೇ[...] ಯಾವುದೇ ಕಾರಣಕ್ಕೂ ಕಲ್[...] ಮಂಟಪದಂತಹ ನಿರ್ಮಾ[...] ಕಾಮಗಾರಿಗಳಿಗೆ ಈ ಹಣವ[...] ಬಳಸಬಾರದು. ಒಂದು [...] ಕಲ್ಯಾಣ ಮಂಟಪವ[...] ನಿರ್ಮಿಸುವುದಾದರೆ ಸರಕಾ[...] ಅನುದಾನದಡಿ ನಿರ್ಮಿಸಬೇ[...] ಎಂದು ಸರ್ವ ಸದ[...] ಸಭೆಯಲ್ಲಿ ಸರಕಾರ[...] ಒತ್ತಾಯಿಸಲಾಯಿತು. ವೆಂಕಟೇಶ ಕೋ[...] ಕಾರ್ಯಕ್ರಮವನ್ನು ನಿರೂಪಿಸಿದರು.

ವರದಿ - ವೆಂಕಟೇಶ ಕೋ[...]

ಜನಶಕ್ತಿ
ಕನ್ನಡ ವಾರಪತ್ರಿಕೆ

ಮೂಢನಂಬಿಕೆ ನಿಯಂತ್ರಣ ಕಾಯ್ದೆ : ಮೊದಲು ಇವರ ವಿರುದ್ಧ ಬಳಕೆಯಾಗಲಿ

ಹಾರಾಷ್ಟ್ರದಲ್ಲಿ ಮೌಢ್ಯದ ವಿರುದ್ಧ ೀರಾಡಿ ದಾಭೋಲ್ಕರ್ ಹುತಾತ್ಮರಾದ, ಿಕ ಒಮ್ಮಿಂದೊಮ್ಮೆಲೇ ಎಚ್ಚೆತ್ತುಕೊಂಡ ಲ್ಲಿನ ಸರ್ಕಾರ ಮೂಢನಂಬಿಕೆ ಮತ್ತು ಮಾಚಾರದ ವಿರುದ್ಧ ಕಾಯ್ದೆಯನ್ನು ರಿಗೊಳಿಸಲು ಮಹತ್ವದ ಹೆಜ್ಜೆಯನ್ನಿಟ್ಟಿತು. ೀ ದೇಶದಲ್ಲಿ ಈ ಕುರಿತಂತೆ ಗಂಭೀರವಾಗಿ ೋಚಿಸುವುದಕ್ಕೆ ಆರಂಭವಾಯಿತು. ಇದ- ಮೂರಕವಾಗಿ, ಇದೀಗ ಕರ್ನಾಟಕವೂ ೂಢನಂಬಿಕೆ ನಿಯಂತ್ರಣ ಕಾಯ್ದೆಯನ್ನು ರಿಗೆ ತರಲು ಇಚ್ಛಿಸಿರುವುದು ಭಿನಂದನಾರ್ಹವಾಗಿದೆ. "ನಾಗರಿಕರ ಜ್ಞಾನ, ಅನಕ್ಷರತೆಯನ್ನೇ ಬಂಡವಾಳ ಾಡಿಕೊಂಡು ಮಾಟ-ಮಂತ್ರದ ಹೆಸರಿನಲ್ಲಿ ವರನ್ನು ಮಾನಸಿಕವಾಗಿ, ದೈಹಿಕವಾಗಿ ಮಾಡುತ್ತಿರುವವರನ್ನು ನಿಯಂತ್ರಿಸಿ, ವರ ವಿರುದ್ಧ ಕಟ್ಟು ನಿಟ್ಟಿನ ಕ್ರಮ ೊಳ್ಳಲು ಪರಿಣಾಮಕಾರಿ ಕಾನೂನನ್ನು ರಿಗೆ ತರಲು ಸರ್ಕಾರ ಯೋಚಿಸಿದೆ" ಂದು ಕಾನೂನು ಸಚಿವ ಟಿ.ಬಿ. ಜಯಚಂದ್ರ ೇಳಿದ್ದಾರೆ. ವಾಮಾಚಾರದ ತಳಹದಿಯಲ್ಲೇ ಮ್ಮ ರಾಜಕೀಯ ನಡೆಗಳನ್ನು ಾಪಿಸುವ ರಾಜಕಾರಣಿಗಳ ದಂಡೇ ರ್ನಾಟಕದಲ್ಲಿದೆ. ಪ್ರತಿಯೊಬ್ಬ ನಾಯಕನೂ ನ್ನದೇ ಆದ ಒಬ್ಬ ಮಂತ್ರವಾದಿಯನ್ನು, ೂಜಾರಿಯನ್ನು ಹೊಂದಿದ್ದಾನೆ. ಧಾನಸೌಧವೇ ವಾಮಾಚಾರದ ಸರಿನಲ್ಲಿ ಸುದ್ದಿಯಾಗಿದ್ದುದನ್ನು ಕಳೆದ ರ್ಕಾರದ ಅವಧಿಯಲ್ಲಿ ನೋಡಿದ್ದೇವೆ. ನಸಾಮಾನ್ಯರಿಗಿಂತ ರಾಜಕೀಯ ನಾಯಕ- ವಾಮಾಚಾರದಲ್ಲಿ ನಂಬಿಕೆಯನ್ನು ೊಂದಿದ್ದಾರೆ. ಇಂತಹ ವಾತಾವರಣದಲ್ಲಿ ವರನ್ನು ಸುಧಾರಿಸುವುದು ವಿಜ್ಞಾನದಿಂದ, ವೈಚಾರಿಕತೆಯಿಂದ ಸಾಧ್ಯವಿಲ್ಲ. ಬಲವಾದ ಕಾನೂನೊಂದೆ ಇವರ ಮನಸ್ಥಿತಿಯನ್ನು ತಿದ್ದೀತಷ್ಟೇ. ಆದುದರಿಂದ ಮೌಢ್ಯ ವಿರುದ್ಧ ಸರ್ಕಾರ ಕಾನೂನೊಂದನ್ನು ತರಲು ಹೊರಟಿರುವುದು ಶ್ಲಾಘನೀಯವಾಗಿದೆ.



ಆದರೆ, ಈ ಕಾನೂನನ್ನು ಜಾರಿಗೊಳಿಸುವುದು ಹೇಳಿದಷ್ಟು, ಯೋಚಿಸಿದಷ್ಟು ಸುಲಭವಲ್ಲ. ಯಾವುದು ಮೌಢ್ಯವಲ್ಲ ಎನ್ನುವುದನ್ನು ತೀರ್ಮಾನಿಸುವುದೂ ಅಷ್ಟು ಸುಲಭವಿಲ್ಲ. ಸುಬ್ರಹ್ಮಣ್ಯದಲ್ಲಿ ಮಲೆಕುಡಿಯರನ್ನು ಸಂಪ್ರದಾಯದ ಹೆಸರಿನಲ್ಲಿ ಎಂಜಲೆಲೆಯ ಮೇಲೆ ಉರುಳಿಸುತ್ತಾರೆ. ಮೌಢ್ಯದ ಕಾನೂನಿನ ಅಡಿಯಲ್ಲಿ ಈ ಮಡೆಸ್ನಾನ ಬರುತ್ತದೆಯೇ ಎಂಬ ಪ್ರಶ್ನೆ ತಲೆಯೆತ್ತುತ್ತದೆ. ಇದನ್ನು ಸಂಪ್ರದಾಯ, ನಂಬಿಕೆಯ ಭಾಗ ಎಂದು ಸಮರ್ಥಿಸುವವರಿದ್ದಾರೆ. ಇಂತಹ ಸಂಪ್ರದಾಯಗಳು ಹತ್ತು ಹಲವು ಇವೆ. ಉಡುಪಿಯ ಕೃಷ್ಣ ಮಠದಲ್ಲಿ ಜಾತಿಯ ಹೆಸರಿನಲ್ಲಿ ಪಂಕ್ತಿ ಭೇದ ಮಾಡಲಾಗುತ್ತದೆ. ವೈಜ್ಞಾನಿಕವಾಗಿ ನೋಡಿದರೆ ಇದು ಮೌಢ್ಯಗಳಲ್ಲಿ ಒಂದು. ಅಷ್ಟೇ ಅಲ್ಲ, ಅಸ್ಪೃಶತೆಯ ಇನ್ನೊಂದು ಬಗೆಯ ಆಚರಣೆ. ಒಂದು ರೀತಿಯಲ್ಲಿ ಜಾತಿ ನಿಂದನೆಯೂ ಕೂಡ. ಆದರೆ ಇದನ್ನು ಪ್ರಶ್ನಿಸುವ ಧೈರ್ಯ ನಮ್ಮ ಕಾನೂನಿಗೆ ಇಲ್ಲವಾಗಿದೆ. ವಾಸ್ತು, ಭವಿಷ್ಯ ಇತ್ಯಾದಿಗಳ ಹೆಸರಿನಲ್ಲಿ ಜನರನ್ನು ಶೋಷಿಸುವ ದಾರಿಗಳಂತೂ ನೂರಾರು. ಇವುಗಳಿಗೆಲ್ಲ ಕಡಿವಾಣ ಹಾಕುವುದೆಂದರೆ ಸಣ್ಣ ವಿಷಯವಂತೂ ಅಲ್ಲ. ಸರ್ಕಾರ-ಕ್ಕೆ ತಾನೇನನ್ನು ಎದುರಿಸಲು ಹೊರಟಿದ್ದೇನೆ ಎನ್ನುವುದರ ಸ್ಪಷ್ಟ ಕಲ್ಪನೆ ಇದ್ದ ಹಾಗಿಲ್ಲ.


ಜನ ಸಾಮಾನ್ಯರ ವಿಷಯ ಪಕ್ಕಕ್ಕಿಡೋಣ. ಮಾಧ್ಯಮಗಳು, ಅದರಲ್ಲೂ ಟಿ.ವಿ. ಮಾಧ್ಯಮಗಳೇ ಮೌಢ್ಯದ ಬಹುದೊಡ್ಡ ಸಂರಕ್ಷಕನಾಗಿ, ಪೋಷಕನಾಗಿ ನಮ್ಮ ಮುಂದೆ ಬೆಳೆದು ನಿಂತಿದೆ. ಯಾವುದೇ ಟಿವಿ ಚಾನಲನ್ನು ತೆಗೆದು ನೋಡಿ. ವಿಜ್ಞಾನಕ್ಕೆ, ವೈಚಾರಿಕತೆಗೆ ಸಂಬಂಧಪಟ್ಟ ಯಾವ ವಿಶೇಷ ಕಾರ್ಯಕ್ರಮಗಳೂ ನಮ್ಮ ಚಾನೆಲ್‌ಗಳಿಂದ ಪ್ರಸಾರವಾಗುತ್ತಿಲ್ಲ. ಆದರೆ ವಾರ ಭವಿಷ್ಯ, ವಾಸ್ತು, ಪುನರ್ಜನ್ಮ, ಆತ್ಮ, ಪ್ರೇತಾತ್ಮ ಇತ್ಯಾದಿ ಕಾರ್ಯಕ್ರಮಗಳಿಗೆ ಪ್ರತಿದಿನ ಕನಿಷ್ಠ ಒಂದೆ-ರಡು ಗಂಟೆಗಳನ್ನಾದರೂ ಚಾನೆಲ್‌ಗಳು ವ್ಯಯ ಮಾಡುತ್ತವೆ. ಹೇಗೆ ಮಂತ್ರವಾದಿಗಳು ಹಣ ಬಾಚಿಕೊಳ್ಳುತ್ತಾರೆಯೋ ಹಾಗೆಯೇ ಈ ವಾಸ್ತು ಇತ್ಯಾದಿ ಕಾರ್ಯಕ್ರಮಗಳ ಮೂಲಕ ಟಿವಿ ಚಾನೆಲ್‌ಗಳೂ ಹಣ ಬಾಚಿಕೊಳ್ಳುತ್ತವೆ. ವಾಸ್ತು, ನವಗ್ರಹ, ಇದ-ರಿಂದ ಬರುವ ಅಪಾಯ, ಅದಕ್ಕೆ ಪರಿಹಾರ ಇತ್ಯಾದಿಗಳನ್ನೆಲ್ಲ ಟಿವಿ ಚಾನೆಲ್‌ಗಳ ಸ್ವಾಮೀಜಿಗಳು, ಜ್ಯೋತಿಷಿಗಳು ನೀಡುತ್ತಾರೆ. ಅಷ್ಟೇ ಏಕೆ? ಹಿಂದಿನ ಜನ್ಮಕ್ಕೆ ಕೊಂಡೊಯ್ದು ಅಲ್ಲಿ ಏನೇನು ನಡೆಯಿತು ಎನ್ನುವುದನ್ನೂ ಕೆಲವು ಬಾಬಾಗಳು, ಸ್ವಾಮೀಜಿಗಳು ಟಿವಿಗಳ ಮೂಲಕ ಹೇಳುತ್ತಾರೆ. ಇದೆಲ್ಲವೂ ಮೂಢನಂಬಿಕೆಗಳಲ್ಲವೇ? ಇದನ್ನು ಹೊಸ ಕಾನೂನು ಹೇಗೆ ಸ್ವೀಕರಿಸುತ್ತದೆ? ಇಂತಹ ಕಾರ್ಯಕ್ರಮಗಳನ್ನು ನಿಲ್ಲಿಸುವುದಕ್ಕೆ ಸರ್ಕಾರ ಆದೇಶ ನೀಡುತ್ತದೆಯೇ? ನೂತನವಾಗಿ ಜಾರಿಗೊಳ್ಳುತ್ತಿರುವ ಕಾನೂನಿಗೆ ಇದು ಸಾಧ್ಯವಾಗದೆ ಇದ್ದ-ರೆ, ಇಡೀ ಕಾನೂನೇ ಅಸಂಬದ್ಧವಾಗುತ್ತದೆ.

ಯಾಕೆಂದರೆ ಟಿವಿಯಲ್ಲಿ ಪ್ರಸಾರವಾಗುವ ಇಂತಹ ಕಾರ್ಯಕ್ರಮಗಳೇ ಇಂದು ಮೌಢ್ಯವನ್ನು ಹರಡುವಲ್ಲಿ ಭಾರೀ ಪಾತ್ರವನ್ನು ವಹಿಸಿವೆ. ಈ ಟಿವಿ ಕಾರ್ಯಕ್ರಮವನ್ನು ನಂಬಿ, ಸ್ವಾಮೀಜಿಗಳಿಗೆ ಲಕ್ಷಾಂತರ ರೂ.ಗಳನ್ನು ತೆ-ತ್ತು ಬೀದಿಪಾಲಾದವರೂ, ಮಾನಸಿಕವಾಗಿ ಅಸ್ವಸ್ಥರಾದವರು ಇದ್ದಾರೆ. ವಾಸ್ತುವನ್ನು ನಂಬಿ, ತಮ್ಮ ಮನೆ ಗೋಡೆಗಳನ್ನು ಕೆಡವಿ ಸರ್ವನಾಶವಾದವರಿದ್ದಾರೆ. ಯಾವುದೇ ಬೀದಿ ಬದಿಯ ಜ್ಯೋತಿಷಿಗಿಂತ, ಈ ಜ್ಯೋತಿಷ್ಯ, ವಾಮಾಚಾರ, ಮಾಟಮಂತ್ರ, ವಾಸ್ತು, ನವಗ್ರಹಗಳಿಗೆ ಪ್ರಚಾರ ನೀಡುವ ಟಿವಿ ಕಾರ್ಯಕ್ರಮಗಳೇ ಹೆಚ್ಚು ಅಪಾಯಕಾರಿ. ಆದುದ್ದರಿಂದ, ಕಾನೂನು ಮೊತ್ತಮೊದಲು ಜಾರಿಯಾಗಬೇಕಾದುದು ಇಂತಹ ಟಿ.ವಿ. ಚಾನೆಲ್‌ಗಳ ವಿರುದ್ಧ. ಅದರ ಬಳಿಕ, ಉಳಿದ ಬೀದಿ ಬದಿಯ ಜೋತಿಷಿಗಳು, ಮಂತ್ರವಾದಿಗಳ, ವಾಮಾಚಾರಿಗಳ ವಿರುದ್ಧ ಈ ಕಾನೂನು ಬಳಕೆಯಾಗಬೇಕಾಗಿದೆ.

ಕೃಪೆ
– 'ವಾರ್ತಾ ಭಾರತಿ'

ಮಂಡ್ಯ : ಕೃಷಿ ಕೂಲಿಕಾರರಿಂದ ಡಿ.ಸಿ. ಕಛೇರಿಗೆ ಮುತ್ತಿಗೆ

ನೆ ನಿವೇಶನ, ಹಕ್ಕುಪತ್ರ, ಬಗರ್‌ಹುಕುಂ ತ್ತು ಅರಣ್ಯ ಭೂಮಿ ಸಾಗುವಳಿ ಸಕ್ರಮಕ್ಕಾಗಿ ಾಗೂ ಮಂಡ್ಯ ಕೆರೆಯಂಗಳದ ೇಡಿ ಕಾಲೋನಿಗೆ ಮೂಲಭೂತ ೌಕರ್ಯ ಕಲ್ಪಿಸಲು ಒತ್ತಾಯಿಸಿ ರ್ನಾಟಕ ಪ್ರಾಂತ ಕೃಷಿ ೂಲಿಕಾರ ಸಂಘ ಮಂಡ್ಯ ಿಲ್ಲಾ ಸಮಿತಿಯು ಮತ್ತು ಎಲ್ಲಾ ಾಲ್ಲೂಕು ಸಮಿತಿಗಳು ಕಳೆದ ೂರು ವರ್ಷಗಳಿಂದಲೂ ್ರಾಮ ಪಂಚಾಯ್ತಿ ಕಛೇರಿ, ಾಲೂಕು ಪಂಚಾಯತಿ ಛೇರಿಗಳ ಮುಂದೆ ಸಾಕಷ್ಟು ೋರಾಟಗಳನ್ನು ಮಾಡುತ್ತಾ ುಸುತ್ತಿದ್ದರೂ ಸಮಸ್ಯೆ ಗೆಹರಿಯದೇ ಇದ್ದ ಸಂದರ್ಭದಲ್ಲಿ ಿಲ್ಲಾ ಕಛೇರಿ ಮುಂದೆ 14.10.2011 ರಂದು ಸಾವಿರಾರು ಕೃಷಿ ಕೂಲಿಕಾರರನ್ನು ಸಂಘಟಿಸಿ ಹೋರಾಟವನ್ನು ಮಾಡಲಾಗಿತ್ತು.



ಅಂದಿನ ಜಿಲ್ಲಾಧಿಕಾರಿ ಪಿ.ಸಿ. ಜಾಫರ್ ಮನವಿ ಸ್ವೀಕರಿಸಿ ನಂತರ ಸಭೆ ಕರೆದು ಬೇಡಿಕೆಗಳನ್ನು ಈಡೇರಿಸುವುದಾಗಿ ಅಶ್ವಾಸನೆ ನೀಡಿದರು. ಆದರೆ ಯಾವುದೇ ಸಮಸ್ಯೆ ಪರಿಹಾರವಾಗಲಿಲ್ಲ. ಜಿಲ್ಲಾ ಸಮಿತಿಯು 05.11.2012 ರಂದು ಮತ್ತೊಮ್ಮೆ ಸಾವಿರಾರು ಕೃಷಿ ಕೂಲಿಕಾರರನ್ನು ಸೇರಿಸಿ ಡಿ.ಸಿ. ಕಛೇರಿ ಮುಂದೆ ಹೋರಾಟ ಮಾಡಿ ಜಿಲ್ಲಾಧಿಕಾರಿ ಕೃಷ್ಣಯ್ಯರವರಿಗೂ ಮನವಿ ಸಲ್ಲಿಸಿತು. ಎಷ್ಟು ಭಾರಿ ಹೋರಾಟ ಮಾಡಿದರೂ ಹಾಗೂ ಮನವಿ ಕೊಟ್ಟರೂ ಜಿಲ್ಲಾಡಳಿತ ಕೃಷಿಕೂಲಿಕಾರರ ಸಮಸ್ಯೆ ಬಗ್ಗೆ ಸರಿಯಾಗಿ ಸ್ಪಂಧಿಸದಿದ್ದಾಗ, ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಕೇಂದ್ರ ಮತ್ತು ರಾಜ್ಯ ಸಮಿತಿಯ ಕರೆಯಂತೆ 01.10.2013 ರಂದು ಎಲ್ಲಾ ತಾಲೂಕುಗಳ ಸಾವಿರಾರು ಕೃಷಿ ಕೂಲಿಕಾರರು ಮಂಡ್ಯದ ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಿಂದ ಮೆರವಣಿಗೆ ಮೂಲಕ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರದ ಜನ ವಿರೋಧಿ ನೀತಿಗಳ ವಿರುದ್ಧ ಘೋಷಣೆ ಕೂಗುತ್ತ ಜಿಲ್ಲಾಧಿಕಾರಿ ಕಛೇರಿ ಮುಂದೆ ತೆರಳಿ ಧರಣಿಯನ್ನು ಪ್ರಾರಂಭಿಸಿದರು. ಧರಣಿಯನ್ನು ಉದ್ದೇಶಿಸಿ ಸಂಘಟನೆಯ ರಾಜ್ಯ ಉಪಾಧ್ಯಕ್ಷ ಜಿ.ಎನ್. ನಾಗರಾಜ ಮಾತನಾಡುತ್ತ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಇಂದಿರಾ ಅವಾಸ್, ಬಸವ ಯೋಜನೆ, ರಾಜೀವ ಗಾಂಧಿ ಯೋಜನೆ ಇತರೆ ಯೋಜನೆಗಳ ಅಡಿಯಲ್ಲಿ ಬಡವರಿಗೆ ಮನೆ ಕಟ್ಟಿಕೊಳ್ಳಲು ನೀಡುತ್ತಿರುವ ಅನುದಾನ ಸಾಲದು. ಗ್ರಾಮ ಪಂಚಾಯತಿಗೆ ಮನೆ ನಿರ್ಮಾಣಕ್ಕೆ ಹೆಚ್ಚು ಹಣ ಕೊಡುತ್ತೇವೆ ಎಂದು ಘೋಷಣೆ ಮಾಡುತ್ತ ಜನರ ಕಣ್ಣಿಗೆ ಮಣ್ಣು ಎರಚುತ್ತಾ ಬಡವರು ಮನೆ

ಪುಟ 15 ಕ್ಕೆ

ಬಸ್ ಸಂಪರ್ಕಕ್ಕಾಗಿ ಒತ್ತಾಯಿಸಿ ರಸ್ತೆ ತಡೆ.

ಸಿಂಧನೂರಿನಿಂದ ಸಾಲಗುಂದಾಕ್ಕೆ ಓಡಾಡುವ ಬಸ್ಸನ್ನು ಕೆಂಗಲ್ ಗ್ರಾಮದ ಮೂಲಕ ಹಾದು ಧಡೇಸ್ಗೂರಿನಿಂದ ಸಿರುಗುಪ್ಪಕ್ಕೆ ಓಡಾಡುವಂತೆ ಮಾಡಬೇಕೆಂದು ಕೋರಿ ಸುಮಾರು ನಾಲ್ಕು ವರ್ಷಗಳಿಂದ ಇಲ್ಲಿಯ ಹಮಾಲಿ ಕಾರ್ಮಿಕರ ಫೆಡರೇಶನ್ ಮತ್ತು ಕೃಷಿಕೂಲಿ ಕಾರ್ಮಿಕರ ಸಂಘಟನೆಗಳು ಜಂಟಿಯಾಗಿ ಹೋರಾಟ ಮಾಡುತ್ತಾ ಬಂದಿವೆ. ಹೋರಾಟ ಮಾಡಿದಾಗಲೊಮ್ಮೆ ರಸ್ತೆ ಸರಿಯಾಗಿಲ್ಲ ಎಂಬ ನೆಪವನ್ನೇ ಕೆ.ಎಸ್.ಆರ್.ಟಿ.ಸಿ. ಅಧಿಕಾರಿಗಳು ಮತ್ತು ಆಡಳಿತಾರೂಢ ರಾಜಕಾರಣಿಗಳು ಹೇಳುತ್ತಾ ಬಂದಿದ್ದರು.

ಅದ್ಹೇಗೋ ಈ ರಸ್ತೆ ಅದ್ಯಾರ ಲಾಭಕ್ಕಾಗಿ ಡಾಂಬರೀಕರಣಗೊಂಡಿತು. ತಕ್ಷಣವೇ ಜಾಗೃತಗೊಂಡ ವಿದ್ಯಾರ್ಥಿ ಫೆಡರೇಶನ್ ಎಸ್.ಎಫ್.ಐ. ಕೆಂಗಲ್ ಗ್ರಾಮ ಘಟಕ ಮತ್ತು ಹಮಾಲಿ ಕಾರ್ಮಿಕರ ಫೆಡರೇಶನ್ ಗ್ರಾಮ ಘಟಕಗಳು ಜಂಟಿಯಾಗಿ ಇತ್ತೀಚೆಗೆ ಗುಲ್ಬರ್ಗಾ-ಬೆಂಗಳೂರು ಹೆದ್ದಾರಿಯ ಕೆಂಗಲ್ ಕ್ರಾಸ್ ಬಳಿ ರಸ್ತೆ ಚಳುವಳಿ ನಡೆಸಲಾಯಿತು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ಮತ್ತು ಹಮಾಲಿ ಕಾರ್ಮಿಕರು ಹಾಗೂ ಗ್ರಾಮಸ್ಥರು ಸೇರಿ 300 ಜನ ಈ ಚಳುವಳಿಯಲ್ಲಿ ಭಾಗವಹಿಸಿದ್ದರು. ಸುಮಾರು ಅರ್ಧ ತಾಸಿನವರೆಗೂ ರಸ್ತೆ ತಡೆ ನಡೆಸಿ ಹೋರಾಟ ಮಾಡಲಾಯಿತು.

ಕೆ.ಎಸ್.ಆರ್.ಟಿ.ಸಿ. ಡಿಪೋ ಮ್ಯಾನೇಜರ್‌ರವರು ಒಂದು ತಿಂಗಳ ಒಳಗೆ ಕೆಂಗಲ್-ಸಾಲಗುಂದಾಗಳಿಗೆ ಸಿರುಗುಪ್ಪ ಮತ್ತು ಸಿಂಧನೂರು ತಾಲೂಕಾ ಕೇಂದ್ರಗಳಿಂದ ಬಸ್ ಸಂಪರ್ಕ ಒದಗಿಸುವುದಾಗಿ ಮತ್ತು ಈ ಭರವಸೆಯನ್ನು ಲಿಖಿತವಾಗಿ ಕೊಡುವುದಾಗಿ ಹೇಳಿದ ಮೇಲೆ ರಸ್ತೆ ತಡೆ ಚಳುವಳಿಯನ್ನು ಹಿಂಪಡೆಯಲಾಯಿತು. ಇದಕ್ಕೂ ಮುನ್ನ ಚಳುವಳಿಗಾರನ್ನು ಉದ್ದೇಶಿಸಿ ನರಸಿಂಹಪ್ಪ ಮತ್ತು ಅಪ್ಪಣ್ಣ ಕಾಂಬ್ಳೆ ಮಾತನಾಡಿದರು.

ಚಳುವಳಿಯ ಮುಖಂಡತ್ವವನ್ನು ಯಂಕಪ್ಪ ಕೆಂಗಲ್ ಜಿಲ್ಲಾಧ್ಯಕ್ಷರು ಹಮಾಲಿ ಕಾರ್ಮಿಕರ ಫೆಡರೇಶನ್‌ಇವರು ವಹಿಸಿದ್ದರು. ಹನುಮಂತಪ್ಪ ಬಾದರ್ಲಿ ತಾಲೂಕಾ ಕಾರ್ಯದರ್ಶಿಯವರು ಹಮಾಲಿ ಕಾರ್ಮಿಕರ ಫೆಡರೇಶನ್ ಇವರು ವಂದನಾರ್ಪಣೆ ಮಾಡಿದರು. ಹುಸೇನಪ್ಪ, ಶರಣಪ್ಪ, ಪೀರಸಾಬ, ಯಮನಪ್ಪ, ಶಂಕ್ರಪ್ಪ, ಈರಪ್ಪ ನಾಯಕ್, ಎಸ್.ಎಫ್.ಐ. ಮುಖಂಡರಾದ ರವಿಚಂದ್ರ, ಸಿದ್ರಾಮ, ಮೌನೇಶ, ಗಂಗಮ್ಮ, ಕನಕಮ್ಮ, ಶಿಲ್ಪಾ, ಸುಜಾತಾ, ಗೌತಮಿ, ಮೇಘ ಇನ್ನಿತರರು ಚಳುವಳಿಯಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಿದರು.

ವರದಿ – ಹನುಮಂತ ಬಾದರ್ಲಿ

ನೀರಿನ ದರ ಏರಿಕೆ ವಿರುದ್ಧ ಮುಂದುವರಿದ ಡಿ.ವೈ.ಎಫ್.ಐ. ಹೋರಾಟ ಸಹಿ ಸಂಗ್ರಹ ಆಂದೋಲನಕ್ಕೆ ಚಾಲನೆ

ಕುಂದಾಪುರ ಪುರಸಭಾ ವ್ಯಾಪ್ತಿಯಲ್ಲಿ ಕಳೆದ ಐದು ತಿಂಗಳುಗಳಿಂದ ಸಾರ್ವಜನಿಕ ನೀರಿನ ತಿಂಗಳ ಬಿಲ್ಲನ್ನು ಬರೋಬ್ಬರಿ ಮೂರು ಪಟ್ಟು ಹೆಚ್ಚಿಸಲಾಗಿದ್ದು, ಡಿ.ವೈ.ಎಫ್.ಐ. ಸಂಘಟನೆ ಹಾಗೂ ಸಾರ್ವಜನಿಕರ ತೀವ್ರ ವಿರೋಧದ ನಡುವೆಯೂ ಅದೇ ದುಬಾರಿ ದರವನ್ನೇ ಮುಂದುವರೆಸಲಾಗಿದೆ. ಕಳೆದ ಜುಲೈ 29ರಂದು ಡಿ.ವೈ.ಎಫ್.ಐ. ನೇತೃತ್ವದಲ್ಲಿ ಕುಂದಾಪುರದ ಸಾರ್ವಜನಿಕರು ಪುರಸಭಾ ಕಚೇರಿ ಎದುರು ಬೃಹತ್ ಸಂಖ್ಯೆಯಲ್ಲಿ ನೆರೆದು, ನೀರಿನ ದರ ಏರಿಕೆಯ ವಿರುದ್ಧ ತಮ್ಮ ಅಸಹನೆಯನ್ನು ವ್ಯಕ್ತಪಡಿಸಿದ್ದರು. ಡಿ.ವೈ.ಎಫ್.ಐ. ಸಂಘಟನೆಯು ಅಲ್ಲಿಂದ ಮುಂದೆ ನಿರಂತರವಾಗಿ ದರ ಏರಿಕೆಯ ವಿರುದ್ಧ ಹೋರಾಟವನ್ನು ಮುಂದುವರೆಸಿಕೊಂಡು ಬಂದಿತ್ತು.

ಚುನಾಯಿತ ಆಡಳಿತ ಮಂಡಳಿಯು ಅಸ್ತಿತ್ವಕ್ಕೆ ಬಾರದ ಸಂದರ್ಭವನ್ನೇ ಉಪಯೋಗಿಸಿಕೊಂಡು, ಪುರಸಭಾ ಅಧಿಕಾರಿ ವರ್ಗ ಸರ್ವಾಧಿಕಾರದಿಂದ ಈ ರೀತಿಯ ದರ ಏರಿಕೆ ಮಾಡಿರುವುದನ್ನು ಕ ಹಂತವಾಗಿ ಡಿ.ವೈ.ಎಫ್.ಐ. ಖಂಡಿಸ ಬಂದಿದೆ. ಪ್ರಸ್ತುತ ರಾಜ್ಯದಿಂದ ಸ್ಥಳೀ ಸಂಸ್ಥೆಗಳ ಆಡಳಿತಕ್ಕೆ ಸಂಬಂಧ ಮೀಸಲಾತಿ ಪ್ರಕಟಗೊಂಡು ಪರಿಣಾಮವಾಗಿ ಕುಂದಾಪುರ ಪುರಸಭ ನೂತನ ಆಡಳಿತ ಮಂಡಳಿ ಅ ಬಂದಿದ್ದು, ಈ ಆಡಳಿತ ಮಂಡಳಿಯಾದ ಸಾರ್ವಜನಿಕ ನೀರು ಬಳಕೆದಾರರ ನೆರ ಬರಬಹುದು ಎಂಬ ನಿರೀಕ್ಷೆ ಕುಂದಾಪು ಸಾರ್ವಜನಿಕರದ್ದಾಗಿದೆ.

ಈ ಹಿನ್ನೆಲೆಯಲ್ಲಿ ನೂತನ ಆಡ ಮಂಡಳಿಯ ಗಮನವನ್ನು ಈ ಗಂಭ ವಿಷಯದೆಡೆಗೆ ಸೆಳೆಯುವ ಉದ್ದೇಶದ ಡಿ.ವೈ.ಎಫ್.ಐ. ಸಂಘಟನೆಯ ನೇ ಪುರಸಭಾ ವ್ಯಾಪ್ತಿಯ ಸಾರ್ವಜನಿಕ ಸಂಗ್ರಹದೊಂದಿಗೆ ನೂತನ ಅಧ್ಯಕ್ಷ ಮನವಿ ಸಲ್ಲಿಸಲು ಡಿ.ವೈ.ಎಫ್.ಐ. ತಾಲ ಸಂಚಾಲನಾ ಸಭೆಯಲ್ಲಿ ನಿರ್ಣಯಿಸಲಾ

ವಿಶ್ವ ಕಾರ್ಮಿಕ ಸಂಘಟನೆ ಕರೆ – ಸಿಐಟಿಯು ಆಚರಣೆ "ಆಹಾರ, ನೀರು, ಆರೋಗ್ಯ, ಶಿಕ್ಷಣ, ವಸತಿಗೆ ಆಗ್ರಹ"

ಎಲ್ಲರಿಗೂ ಆಹಾರ, ನೀರು, ಆರೋಗ್ಯ, ಶಿಕ್ಷಣ, ವಸತಿ, ಮೂಲಭೂತ ಅಗತ್ಯವಾಗಿದ್ದು, ಇದನ್ನು ಪೂರೈಸುವಲ್ಲಿ ಸರ್ಕಾರಗಳು ವಿಫಲವಾಗಿದೆ ಎಂದು ಆರೋಪಿಸಿ ವಿಶ್ವ ಕಾರ್ಮಿಕ ಸಂಘಟನೆಗಳ ಒಕ್ಕೂಟದ [ಡಬ್ಲ್ಯು.ಎಫ್.ಟಿ.ಯು] ಕರೆಯಂತೆ ವಿಶ್ವ ಕಾರ್ಯಾಚರಣೆ ದಿನದ ಭಾಗವಾಗಿ ಸಿಐಟಿಯು ಜಿಲ್ಲಾ ಸಮಿತಿಯು ದಿನಾಂಕ 3-10-2013 ಮಧ್ಯಾಹ್ನ 4-00 ಗಂಟೆಗೆ ತುಮಕೂರಿನ ಬಿ.ಎಸ್.ಎನ್.ಎಲ್. ಕಛೇರಿ ಎದುರು ಪ್ರತಿಭಟನೆ ನಡೆಸಿತು.

ಪ್ರತಿಭಟನೆಯನ್ನು ಉದ್ದೇಶಿಸಿ ಸಿಐಟಿಯು ಜಿಲ್ಲಾಧ್ಯಕ್ಷರಾದ ಸೈಯದ್ ಮುಜೀಬ್ ರವರು ಮಾತನಾಡಿ 35 ಗಂಟೆಗಳ ಕೆಲಸದೊಂದಿಗೆ 5 ದಿನಗಳ ಜೀವನ ಯೋಗ್ಯ ಕೂಲಿಗಾಗಿ ಎಂಬ ಘೋಷಣೆಯಡಿಯಲ್ಲಿ ಮೂಲಭೂತ ಅಗ್ಯತಗಳಾದ ಆಹಾರ, ನೀರು, ಆರೋಗ್ಯ, ಶಿಕ್ಷಣ ಮತ್ತು ವಸತಿ ಮೊದಲಾದ ಬೇಡಿಕೆಗಳ ಆಧಾರದಲ್ಲಿ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದರು.

ಆಹಾರ :- 850 ಮಿಲಿಯನ್ ಜನತೆ ಇಂದು ಅಪೌಷ್ಠಿಕತೆಯಿಂದ ಬಳಲುತ್ತಿದ್ದಾರೆ. ಜಗತ್ತಿನ ಆಹಾರ ವಲಯದ ಹಿಡಿತ ಬಹುರಾಷ್ಟ್ರೀಯ ಕಂಪನಿಗಳ ಕೈಯಲಿದೆ. ಭಾರತದಲ್ಲಿ ಸಹ ಕೃಷಿ ಕ್ಷೇತ್ರವನ್ನು ಕಂಪನೀಕರಣಗೊಳಿಸಲಾಗುತ್ತಿದೆ. ಆಹಾರ ಭದ್ರತೆ ಎಂಬುದು ಮರಿಚಿಕೆ ಆಗಲಿದೆ, ಸರ್ಕಾರಗಳು ಪಡಿತರ ವ್ಯವಸ್ಥೆಯ ಸಾರ್ವತ್ರಿಕರಣಕ್ಕೆ ಸಿದ್ದರಿಲ್ಲ.

ಅಪೌಷ್ಠಿಕತೆ ಹಾಗೂ ಅನಾರೋಗ್ಯದ ಮಕ್ಕಳವಿಷಯದಲ್ಲಿಭಾರತ ಮುಂದಿದೆ. ಮಕ್ಕಳು ಕಡಿಮೆ ತೂಕ, ರಕ್ತಹಿನತೆಯ ತೊಂದರೆಗಳು ಪೌಷ್ಠಿಕ ಹಾಗೂ ಸಮತೋಲನ ಆಹಾರದ ಕೊರತೆಯಿಂದ ಉಂಟಾಗಿದೆ. ಜಗತ್ತಿನಲ್ಲಿ ಅತೀ ಹೆಚ್ಚು ಮಕ್ಕಳನ್ನು ಹೊಂದಿರುವ ಭಾರತ ಅದರಲ್ಲಿ 40% ಅಪೌಷ್ಠಿಕತೆಯಿಂದ ಬಳಲುತ್ತಿವೆ.

ಬಡತನ ಇಳಿಮುಖವಾಗುತ್ತಿದೆ. ಎಂದು ಸರ್ಕಾರಗಳು ಹೇಳುತ್ತಿವೆ, ಆದಾಗ್ಯು ಅಪೌಷ್ಠಿಕತೆ ಬಡತನ ಹೆಚ್ಚುತ್ತಿರುವುದು ಖಚಿತ.

ಎಲ್ಲರಿಗೂ ಉತ್ತಮ ಆರೋಗ್ಯಕರ ಆಹಾರ ಲಭಿಸುವಂತೆ ಮಾಡಬೇಕೆಂದು WFTU ಒತ್ತಯಿಸುತ್ತದೆ.

ನೀರು :- ನೀರಿಗಾಗಿ 3ನೇ ಮಹಾಯುದ್ಧ ನಡೆಯಲಿದೆ ಎಂದು ಹೇಳಲಾಗುತ್ತದೆ. ಭಾರತದಲ್ಲಿ ಎಲ್ಲರಿಗೂ ಶುದ್ಧ ಕುಡಿಯುವ ನೀರಿನ ಲಭ್ಯತೆ ಕನಸಾಗಿಯೇ ಉಳಿದಿದೆ, ನಮ್ಮ ದೇಶದ ಜಲ ನೀತಿಯು ನೈಸರ್ಗಿಕ ಸಂಪನ್ಮೂಲವಾದ ನೀರನ್ನು ಖಾಸಗಿ ಒಡೆತನಕ್ಕೆ ಒಪ್ಪಿಸಿ ದಿನ ಬಳಕೆಗೆ ಅಲ್ಲದೆ, ಕೃಷಿಗೂ ಅದನ್ನೆ ಆಶ್ರಯಿಸುವಂತೆ ಮಾಡುತ್ತಿದೆ.

ಅಂತರಾಷ್ಟ್ರೀಯವಾಗಿ ನೀರು ಬಹುರಾಷ್ಟ್ರೀಯ ಕಂಪನಿಗಳ ಹಿಡಿತ-ಕ್ಕೆ ಒಳಪಟ್ಟು ಅತೀಹೆಚ್ಚು ಮಾರಾಟವಾಗುವ ಸರಕಾಗಿದೆ. WHO ಪ್ರಕಾರ ಪ್ರತಿ ವರ್ಷ 5 ವರ್ಷ ಒಳಗಿನ 1.5 ಮಿಲಿಯನ್ ಮಕ್ಕಳು ಶುದ್ಧ ನೀರು ಸಿಗದೆ ಮರಣ ಹೊಂದುತ್ತಿವೆ. WFTU ಎಲ್ಲಾರಿಗೂ ಶುದ್ಧ ಕುಡಿಯುವ ನೀರು ಸಿಗುವಂತೆ ಮಾಡಬೇಕೆಂದು ಆಗ್ರಹಿಸುತ್ತದೆ.

ಶಿಕ್ಷಣ:- "ಸರ್ವರಿಗೂ ಶಿಕ್ಷಣ" ಎಂಬ ಘೋಷಣೆ ಜಗತ್ತಿನಾದ್ಯಂತ ಮೊಳಗುತ್ತಿದೆ. ನವ ಉದಾರೀಕರಣ ನೀತಿಗಳಿಂದಾಗಿ ಬಹುತೇಕ ದೇಶಗಳಲ್ಲಿ ಶಿಕ್ಷಣ ಅತೀ ಹೆಚ್ಚು ವಾಣಿಜ್ಯಕರ ಚಟುವಟಿಕೆಯಾಗಿದೆ. ಎಲ್ಲರು ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ನಿರ್ಮೂಲನೆ ಮಾಡಲಾಗುತ್ತಿದೆ. ಸಣ್ಣ ಮಕ್ಕಳಿಗೆ ಅವರ ಶಿಕ್ಷಣದ ಮೂಲಭೂತ ಹಕ್ಕಿನಿಂದ ವಂಚಿಸಲಾಗುತ್ತಿದೆ.

ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆಗಳು ವೇಗವಾಗಿ ನಡೆಯುತ್ತಿವೆ. ಭಾರತದಲ್ಲಿ ಶಿಕ್ಷಣದ ಹಕ್ಕು ಮೂಲಭೂತ ಹಕ್ಕು ಸರ್ಕಾರದ ಘೋಷಣೆ, ಇದಕ್ಕೆ ಅಗತ್ಯ ಮೂಲಭೂತ ಅಗತ್ಯತೆಗಳನ್ನು ಕಲ್ಪಿಸಿಲ್ಲ, ಶಿಕ್ಷಣ ವ್ಯವಸ್ಥೆ ವರ್ಗಾಧಾರಿತವಾಗಿದೆ, ಉಳ್ಳವರು ತಮ್ಮ ಸಾಮರ್ಥ್ಯಾನುಸಾರ ಹಣ ನೀಡಿ ಶಿಕ್ಷಣ ಪಡೆಯುತ್ತಿದ್ದಾರೆ. ವೈಜ್ಞಾನಿಕ ಮನೋಭಾವನೆ ಹೆಚ್ಚಿಸುವ ಶಿಕ್ಷಣ ಸರ್ವರಿಗೂ ಸಿಗಬೇಕೆಂಬ ಬೇಡಿಕೆ WFTU ನದು.

ಆರೋಗ್ಯ:- "ಆರೋಗ್ಯ ವ್ಯಾಪಾರವಲ್ಲ" ಎಂದು ಹೇಳಲಾಗುತ್ತಿದೆ. ಆದರೆ ಇಂದು ಆರೋಗ್ಯ ಬಹುರಾಷ್ಟ್ರೀಯ ಕಂಪನಿಗಳ ವ್ಯಾಪಾರ ವಸ್ತುವಾಗಿದೆ, ಇಂದು ಆರೋಗ್ಯ ಸೇವೆ ಮುಖ್ಯವಾಗಿ ಖಾಸಗಿ ಒಡೆತನದಲ್ಲಿ ಇದ್ದು ಜನರು ತಮ್ಮ ಅತ್ಯಲ್ಪ ಆಧಾಯದ ನಡುವೆ ಸಾಲ-ಸೋಲ ಮಾಡಿ ಅತೀ ಹೆಚ್ಚು ಹಣವನ್ನು ಆರೋಗ್ಯಕ್ಕಾಗಿ ವೆಚ್ಚಮಾಡುವಂತಾಗಿದೆ. ಜೀವ ರಕ್ಷಣೆಯ ಔಷಧಿಗಳನ್ನು ಬಹುರಾಷ್ಟ್ರೀ ಕಂಪನಿಗಳು ನಿಯಂತ್ರಿಸುತ್ತಿವೆ. ಭಾ ಸರ್ಕಾರ ಜಾರಿಗೊಳಿಸಿರುವ ಔಷಧಿ ಬೆಲ ನಿಯಂತ್ರಣ"

ಹೇಲ್ತ್ ಮಿಷಿನ್ ಯೋಜನ ಫಲಪ್ರದಾವಾಗಿಲ್ಲ.

ದುಡಿಯುತ್ತಿರುವ ಎಲ್ಲರ ಹಾ ದುಡಿಮೆಯಿಂದ ನಿವೃತ್ತ ಹೊಂದಿದ ಆರೋಗ್ಯದ ಬಗ್ಗೆ ಕಾಳಜಿ ವಹಿಸುವ ವ್ಯವಸ್ಥೆಗೆ WFTU ಒತ್ತಾಯಿಸುತ್ತದೆ.

ವಸತಿ:- ನಾಗಾಲೋಟದ ನಗರೀಕ ಆಕಾಶ ಮುಟ್ಟುವ ಬೆಲೆಗಳಿಂ ಭಾರತದಲ್ಲಿ ಜನರಿಗೆ ವಸತಿ ಸಮಸ್ಯೆ ಗಂಭೀರವಾಗಿದೆ, ದೇಶದ ಬ ಜನರು ಅಮಾನವೀಯ ಪರಿಸ್ಥಿತಿ ಕೊಳಗೇರಿಗಳಲ್ಲಿ ಬದುಕುವಂತಾ ಇದರಲ್ಲಿ ದೊಡ್ಡ ವಿಭಾಗವು ಮನೆ ಇ ಬದುಕುತ್ತಿದ್ದಾರೆ.

ಶಾಂತಿ ನೆಮ್ಮದಿಯ ಬದುಕು ಸಾಧಿ ಸುರಕ್ಷಿತ ಸೂರೊಂದನ್ನು ಎಲ್ಲಾರಿಗೂ ಕೆಂದು WFTU ಬೇಡಿಕೆ ಇಟ್ಟಿದೆ.

ಪ್ರತಿಭಟನೆಯಲ್ಲಿ ಸಿಐಟಿಯುನ ಉಪಾಧ್ಯಕ್ಷರಾದ ಲೋಕೇಶ್, ಸಿಐಟಿ ಜಿಲ್ಲಾ ಕಾರ್ಯದರ್ಶಿ ಎನ್.ಕೆ.ಸುಬ್ರ ಸಿಐಟಿಯು ತಾಲ್ಲೂಕು ಅಧ್ಯಕ್ಷ ಟ್ವೇಗೌಡ ಮುಂತಾದವರು ಮಾತನಾಡಿ ಪ್ರತಿಭಟನೆಯ ನೇತೃತ್ವವನ್ನು ಕರನ್ ಲೇ ಯೂನಿಯನ್‌ನ ರಾಘವೇಂದ್ರ, ಸ ಕಾಳೇಶ್ವರಿ ವರ್ಕರ್ಸ್ ಯೂನಿಯ ಮುತ್ತುರಾಜ್, ಕಟ್ಟಡ ಕಾರ್ಮಿಕ ಸಂಘಟನ ಗೋವಿಂದರಾಜು, ಶ್ರೀಧರ್, ರಾ ಮುಂತಾದವರು ವಹಿಸಿದ್ದರು.

ವರದಿ : ಎನ್. ಕೆ. ಸುಬ್ರಮ

ಳೆದ ವಾರದ ಎರಡು ಘಟನೆಗಳು ಎರಡು ವಿಭಿನ್ನ ಚಿತ್ರಗಳನ್ನು ನಮ್ಮ ಮುಂದಿಟ್ಟಿವೆ. ಫೈಲಿನ್ ಚಂಡಮಾರುತದ ನೈಸರ್ಗಿಕ ವಿಪತ್ತನ್ನು ಮತ್ತು ರತನ್‌ಗಡ್ ದೇವಸ್ಥಾನದ ನೂಕುನುಗ್ಗಲಿನ ಮಾನವ-ನಿರ್ಮಿತ ದುರಂತವನ್ನು ಎದುರಿಸಿದ ರೀತಿಗಳು. ಪ್ರಭುತ್ವಯಂತ್ರ ಮತ್ತು ಆಡಳಿತ ಹೇಗೆ ತಮ್ಮಿಂದ ನಿರೀಕ್ಷಿಸುವ ಕೆಲಸವನ್ನು ಪೂರೈಸಬಹುದು ಎಂದು ಮೊದಲಿನದು ತೋರಿಸಿದರೆ, ಹೇಗೆ ಅದನ್ನು ನಿರುಪಯುಕ್ತಗೊಳಿಸಬಹುದು, ಅಸಹಾಯಕಗೊಳಿಸಬಹುದು ಮತ್ತು ಕ್ರಿಮಿನಲ್ ಎನ್ನಬಹುದಾದಷ್ಟು ಭ್ರಷ್ಟಗೊಳಿಸಬಹುದು ಎಂಬುದನ್ನು ಎರಡನೆಯದು ತೋರಿಸುತ್ತದೆ.





ಎರಡು ವಿಪತ್ತುಗಳು ತದ್ವಿರುದ್ಧ ಪ್ರತಿಕ್ರಿಯೆಗಳು

ಸೀತಾರಾಮ್ ಯೆಚೂರಿ

ಎಷ್ಟೊಂದು ತೀಕ್ಷ್ಣವಾದ ವ್ಯತ್ಯಾಸ ! ಫೈಲಿನ್ ಚಂಡಮಾರುತದ ವಿನಾಶಲೀಲೆಯಲ್ಲಿ ಸರಿಯಾದ ಸಮಯದಲ್ಲಿ ಮಧ್ಯಪ್ರವೇಶ, ಕರಾರುವಾಕ್ಕಾದ ಮುನ್ಸೂಚನೆ ಮತ್ತು ಸಮರೂಪದ ಆಡಳಿತ ದಕ್ಷತೆಯಿಂದಾಗಿ ಸಾವಿರಾರು ಜೀವಗಳನ್ನು ಉಳಿಸಲು ಸಾಧ್ಯವಾಗಿದೆ. ಈ ಚಂಡಮಾರುತ 1999ರಲ್ಲಿ ಒಡಿಶಾವನ್ನು ಅಪ್ಪಳಿಸಿದ್ದ ಚಂಡಮಾರುತಕ್ಕಿಂತ ಎಷ್ಟೋ ಹೆಚ್ಚು ಶಕ್ತಿಶಾಲಿಯಾಗಿತ್ತು. ಅದರಿಂದಾಗಿ ಅಪಾರ ವಿನಾಶಲೀಲೆ ನಡೆಸುವ ಸಾಮರ್ಥ್ಯ ಹೊಂದಿತ್ತು. ಆಗ 10,000ಕ್ಕೂ ಹೆಚ್ಚು ಮಂದಿ ಪ್ರಾಣ ಕಳಕೊಂಡರು. ಈ ಬಾರಿ ಚಂಡಮಾರುತಕ್ಕೆ ಬಲಿಯಾದವರ ಸಂಖ್ಯೆ 21, ನಂತರ ಬಂದ ಪ್ರವಾಹಕ್ಕೆ ನಾಲ್ಕು ಮಂದಿ ಒಟ್ಟಾಗಿ ಅದು 25ಕ್ಕೆ ಏರಿತು.

ಈ ಚಂಡಮಾರುತ ತಂದ ಈ ನೈಸರ್ಗಿಕ ವಿಪತ್ತಿಗೆ ತದ್ವಿರುದ್ಧವಾಗಿ ಮಧ್ಯಪ್ರದೇಶದ ದತಿಯಾದಲ್ಲಿ ಸಂಭವಿಸಿದ ರತನ್‌ಗಡ್ ದೇವಸ್ಥಾನದ ನೂಕುನುಗ್ಗಲಿನ ಮಾನವ-ನಿರ್ಮಿತ ವಿಪತ್ತಿನಲ್ಲಿ ಕನಿಷ್ಟ 115 ಮಂದಿ ಸತ್ತಿದ್ದಾರೆ. ದೇವಸ್ಥಾನದ ಕಡೆಗೆ ಹೋಗುವ ಸಿಂಧ್ ನದಿಯ ಮೇಲಿನ ಸೇತುವೆ ಮುರಿದಿದೆ ಎಂಬ ಸುಳ್ಳುಸುದ್ದಿ ಹರಡಿ ಆ ವೇಳೆಗೆ ಸೇತುವೆಯನ್ನು ದಾಟುತ್ತಿದ್ದ 25000 ಕ್ಕೂ ಮಂದಿಯಲ್ಲಿ ಭೀತಿ ಉಂಟಾಗಿ ಭೀಕರ ನೂಕುನುಗ್ಗಲು ನಡೆಯಿತು. ಇದೊಂದು ಸಂಪೂರ್ಣವಾಗಿ ತಪ್ಪಿಸಬಹುದಾಗಿದ್ದ ಸನ್ನಿವೇಶ,

ಮೊದಲಿನ ಘಟನೆ ಪ್ರಭುತ್ವಯಂತ್ರ ಮತ್ತು ಆಡಳಿತ ಹೇಗೆ ಅಗತ್ಯ ಕೆಲಸವನ್ನು ಪೂರೈಸಬಹುದು ಎಂದು ತೋರಿಸಿದರೆ, ಎರಡನೇ ಘಟನೆ ಹೇಗೆ ಅದನ್ನು ನಿರುಪಯುಕ್ತಗೊಳಿಸಬಹುದು, ಅಸಹಾಯಕಗೊಳಿಸಬಹುದು ಮತ್ತು ಕ್ರಿಮಿನಲ್ ಎನ್ನಬಹುದಾದಷ್ಟು ಭ್ರಷ್ಟಗೊಳಿಸಬಹುದು ಎಂಬುದನ್ನು ತೋರಿಸುತ್ತದೆ.

'ಉಕ್ಕಿನ ಚೌಕಟ್ಟು' ಇನ್ನೂ ಇದೆ

ಸರ್ದಾರ್ ಪಟೇಲ್ ಒಮ್ಮೆ ಭಾರತೀಯ ಆಡಳಿತ ರಚನೆಗಳನ್ನು 'ಉಕ್ಕಿನ ಚೌಕಟ್ಟು' ಎಂದು ವರ್ಣಿಸಿದ್ದರು. ಅದು ದೇಶವನ್ನು ಒಂದಾಗಿ ಇಟ್ಟು, ಕಾರ್ಯನಿರ್ವಹಿಸುವಂತೆ ಮಾಡಿತಲ್ಲದೆ, ತನ್ನ ಕೆಲಸವನ್ನೂ ಪೂರೈಸುವ ರಚನೆಯಾಗಿತ್ತು. ಆದರೆ ಇತ್ತೀಚೆಗೆ ಬಹಳಷ್ಟು ಮಂದಿ ಈ 'ಉಕ್ಕಿನ ಚೌಕಟ್ಟಿ'ಗೆ ಕಿಲುಬು ಹತ್ತಿದೆ ಎಂದು ಭಾವಿಸುವಂತಾಗಿದೆ. ಎಷ್ಟೊಂದು ಕಿಲುಬು ಎಂದರೆ ಅದು ಟೊಳ್ಳಾಗಿ ಬಿಟ್ಟಿದೆ. ಅದರೆ ಚಂಡಮಾರುತ ಉಂಟು ಮಾಡಬಹುದಾಗಿದ್ದ ವಿನಾಶವನ್ನು ಎದುರಿಸುವಲ್ಲಿ ಕೇಂದ್ರ ಸರಕಾರ ಮತ್ತು ಆಂಧ್ರಪ್ರದೇಶ ಹಾಗೂ ಒಡಿಶಾ ರಾಜ್ಯ ಸರಕಾರಗಳು ಕೆಲಸ ಮಾಡಿದ ರೀತಿ, ಕೇಂದ್ರೀಯ ಸಂಸ್ಥೆಗಳು ಹಾಗೂ ರಾಜ್ಯದ ಆಡಳಿತ ಯಂತ್ರಗಳ ನಡುವಿನ ಸಮನ್ವಯ ಈ 'ಉಕ್ಕಿನ ಚೌಕಟ್ಟು' ಇನ್ನೂ ಸಂಪೂರ್ಣವಾಗಿ ಕೊರೆದು ಹೋಗಿಲ್ಲ ಎಂಬುದನ್ನು ತೋರಿಸುತ್ತದೆ.

ಭಾರತೀಯ ಹವಾಮಾನ ಇಲಾಖೆ ಇತ್ತೀಚಿನ ವರ್ಷಗಳಲ್ಲಿ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡಿದ್ದು, ಸಾಕಷ್ಟು ಕರಾರುವಾಕ್ಕಾಗಿ ಚಂಡಮಾರುತದ ಚಲನೆಯ ಮತ್ತು ಅದು ತಲುಪುವ ಸ್ಥಳಗಳ ಬಗ್ಗೆ ಮುನ್ಸೂಚನೆ ಒದಗಿಸಿತು. ಇದು ಸುಮಾರು ಹತ್ತುಲಕ್ಷ ಮಂದಿಯನ್ನು ಅಪಾಯದ ವಲಯದಿಂದ ಬೇರೆಡೆಗೆ ಸ್ಥಳಾಂತರಿಸುವ ಅಗಾಧ ಪ್ರಮಾಣದ ಪ್ರಯತ್ನವನ್ನು ಕೈಗೊಳ್ಳಲು ನೆರವಾಯಿತು. ಆಮೂಲಕ ಸಾವಿರಾರು ಅಮೂಲ್ಯ ಪ್ರಾಣಗಳನ್ನು ರಕ್ಷಿಸಲು ಸಾಧ್ಯವಾಯಿತು.

ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ(ಎನ್‌ಡಿಎಂಎ)ದಂತಹ ಕೇಂದ್ರೀಯ ಸಂಸ್ಥೆಗಳು, ಅಂತಹ ರಾಜ್ಯಮಟ್ಟದ ಸಂಸ್ಥೆಗಳು ಮತ್ತು ರಾಷ್ಟ್ರೀಯ ವಿಪತ್ತು ತ್ವರಿತ ಕಾರ್ಯಾಚರಣೆ ಪಡೆ(ಎನ್‌ಡಿಆರ್‌ಎಫ್) ಹಾಗೂ ರಾಜ್ಯ ಆಡಳಿತ ನಿಕಟ ಸಂಯೋಜನೆಯೊಂದಿಗೆ ಕೆಲಸ ಮಾಡಿ ಈ ಬೃಹತ್ ಮಾನವ ಕಸರತ್ತು ಯಶಸ್ವಿಯಾಗುವಂತಾಗಿದೆ. ಅಂದರೆ ಈ 'ಉಕ್ಕಿನ ಚೌಕಟ್ಟು' ಅದರಿಂದ ನಿರೀಕ್ಷಿಸುವ ಕೆಲಸ ಮಾಡಲು ಸಾಧ್ಯವಾಗಬೇಕಾದರೆ ಬೇಕಾಗಿರುವುದು ಸಮಯಕ್ಕೆ ಸರಿಯಾಗಿ ಮಹತ್ವದ ರಾಜಕೀಯ ನಿರ್ಣಯಗಳನ್ನು ಕೈಗೊಂಡು ಆಡಳಿತ ಯಂತ್ರ ಅವನ್ನು ಈಡೇರಿಸುವಂತೆ ಮಾಡಬಲ್ಲ ಒಂದು ಕರುಣಾಳು ರಾಜಕೀಯ ಮುಖಂಡತ್ವ ಎಂಬುದನ್ನು ಇದು ತೋರಿಸುತ್ತದೆ.

ಮಾರಕ ರಾಜಕೀಯದ ಫಲ

ತದ್ವಿರುದ್ಧವಾಗಿ, ಒಂದು ಮಾರಕ ರಾಜಕೀಯ ನಿರ್ದೇಶನ ಮತ್ತು ಧೋರಣೆಗಳನ್ನು ಕುರಿತಂತೆ ಗೊಂದಲಪೂರ್ಣ ನಿರ್ಣಯಗಳು ನಿಷ್ಕ್ರಿಯತೆಗೆ ಹಾದಿ ಮಾಡಿಕೊಡುತ್ತವಷ್ಟೇ ಅಲ್ಲ, ಒಂದು ವ್ಯವಸ್ಥೆ ಅವನತಿಗೊಂಡು ವ್ಯಾಪಕ ಭ್ರಷ್ಟಾಚಾರದ ಕಿಲುಬು ಹತ್ತಿಕೊಳ್ಳುವಂತಹ ಸನ್ನಿವೇಶವನ್ನು ನಿರ್ಮಿಸಬಹುದು. ಮಧ್ಯಪ್ರದೇಶದ ದೇವಸ್ಥಾನದಲ್ಲಿ ಉಂಟಾದ ನೂಕುನುಗ್ಗಲಿನಲ್ಲಿ ಇದು ಎದ್ದು ಕಾಣುತ್ತದೆ. ಗೊಂದಲಭರಿತ ರಾಜಕೀಯ ನಿರ್ದೇಶನಗಳು ಮತ್ತು ನೀತಿ- ನಿರ್ಧಾರಗಳು ಅಸಮರ್ಥತೆಯಿಂದ ಮಾತ್ರವೇ ಮೂಡಿ ಬರುವುದಿಲ್ಲ. ಅವು ಉದ್ದೇಶಪೂರ್ವಕವಾದ ಇಬ್ಬಂದಿ ಮಾತುಗಳ ಧೋರಣೆಯ ಸಹಜ ಫಲಿತಾಂಶ ಕೂಡ. ಮಧ್ಯಪ್ರದೇಶದ ಬಿಜೆಪಿ ರಾಜ್ಯ ಸರಕಾರ ಆರೆಸ್ಸೆಸ್ ಕಣ್ಣೋಟದ 'ಹಿಂದೂರಾಷ್ಟ್ರ'ವನ್ನು ನಿರ್ಮಿಸುವ ಅಜೆಂಡಾವನ್ನು ಈಡೇರಿಸುವ ಮೂಲ ಉದ್ದೇಶವನ್ನು ಅನುಸರಿಸುತ್ತಲೇ, ತನ್ನದು 'ಉತ್ತಮ ಆಳ್ವಿಕೆ'ಯ ಮತ್ತು 'ಅಭಿವೃದ್ಧಿ' ತರುವ ಒಂದು ಸರಕಾರ ಎಂದು ಬಿಂಬಿಸುತ್ತ ತಿರುಗಾಡುತ್ತಿದೆ.


ಪ್ರಸಕ್ತ ಬಿಜೆಪಿ ಮುಖ್ಯಮಂತ್ರಿಯ ಅಡಿಯಲ್ಲಿ ಮಧ್ಯಪ್ರದೇಶ ಸದ್ಯದ ಪ್ರಧಾನಿ ಪಟ್ಟದ ಆಕಾಂಕ್ಷಿಯ ನೇತೃತ್ವದ ಸರಕಾರ ಹೊಂದಿರುವ ಗುಜರಾತಿಗೆ ಒಂದು ಒಳ್ಳೆಯ ಸ್ಪರ್ಧೆ ಕೊಡುತ್ತಿದೆ ಎನ್ನಲಾಗುತ್ತಿದೆ. ಆದರೆ ರಿಝರ್ವ್ ಬ್ಯಾಂಕ್ ಗವರ್ನರ್ ಅಧ್ಯಕ್ಷತೆಯ ಒಂದು ಸಮಿತಿ ಇತ್ತೀಚೆಗೆ ತಯಾರಿಸಿರುವ ರಾಜ್ಯಗಳ 'ಹಿಂದುಳಿಕೆ'ಯ ಸೂಚ್ಯಂಕವೂ ಸೇರಿದಂತೆ ವಿವಿಧ ಸಂಸ್ಥೆಗಳು ಕಲೆಹಾಕಿರುವ ಅಂಕಿ-ಅಂಶಗಳ ಪ್ರಕಾರ ಗುಜರಾತ ಮತ್ತು ಮಧ್ಯಪ್ರದೇಶ ಇವೆರಡೂ ರಾಜ್ಯಗಳು ಅಭಿವೃದ್ಧಿಯ ಪ್ರಮಾಣದಲ್ಲಿ ಅಖಿಲ ಭಾರತ ಪಟ್ಟಿಯಲ್ಲಿ ಅತ್ಯಂತ ಕೆಳಗಣ ಕಾಲುಭಾಗದಲ್ಲಿ ಬರುತ್ತವೆ.

ನವ-ಉದಾರವಾದಿ ಆರ್ಥಿಕ ಸುಧಾರಣೆಗಳ ಮತ್ತು ಅದರ ದೇವತೆಯಾದ 'ಮಾರುಕಟ್ಟೆ'ಯ ಬಗ್ಗೆ ಮಹಾಭಕ್ತಿ ಹೊಂದಿರುವ ಬಿಜೆಪಿ ರಾಜಕೀಯವನ್ನು ಒಬ್ಬ ಮಾರಾಟಗಾರನ ಕ್ರಿಯೆಯ ಮಟ್ಟಕ್ಕೆ ಇಳಿಸಿದೆ. ಮೊದಲು ಜಾಹೀರಾತುಗಳ ಮಿಂಚು ಹರಿಸಿ ಜನಗಳನ್ನು ಸೆಳೆಯುವುದು, ನಂತರ ಬಣ್ಣ-ಬಣ್ಣದ ರಟ್ಟುಗಳನ್ನು ಹೊದಿಸಿದ ಕಟ್ಟುಗಳನ್ನು ಹಂಚುವುದು, ಆಮೂಲಕ ವೋಟುಗಳನ್ನು ಆಕರ್ಷಿಸುವುದು. ಆದರೆ ತಾನು ಕೊಡುವುದಾಗಿ ವಚನವಿತ್ತ ಉತ್ಪಾದನೆಯನ್ನು ಎಂದೂ ಅದು ಒದಗಿಸುವುದಿಲ್ಲ. 'ಉತ್ತಮ ಆಳ್ವಿಕೆ'ಯನ್ನು, 'ಅಭಿವೃದ್ಧಿ'ಯನ್ನು ಕೊಡುವ ಹೆಸರಿನಲ್ಲಿ

ಪುಟ 15 ಕ್ಕೆ



ಸಾವು 'ಫೇಲಾ'ಗಲೇಬೇಕೆಂದೇನಿಲ್ಲ
ಕೃಪೆ:ಉನ್ನಿ, ಇಂಡಿಯನ್ ಎಕ್ಸ್‌ಪ್ರೆಸ್



ಮಾನವ-ನಿರ್ಮಿತ ವಿಪತ್ತುಗಳಿಗೆ ಯಾವುದಾದರೂ ಮುನ್ನೆಚ್ಚರಿಕೆಯ ವ್ಯವಸ್ಥೆ ಇದೆಯೇ?

ಕೃಪೆ: ಜಯಂತೊ, ಹಿಂದುಸ್ತಾನ್ ಟೈಮ್ಸ್

ಹೊಸ ಕೃಷಿ ಮಾರುಕಟ್ಟೆ ನೀತಿ ಯಾರಿಗಾಗಿ?

ಸಾಮಾನ್ಯ ರೈತನಿಗಾಗಿಯೋ? ಕಾರ್ಪೋರೇಟ್ ಕಂಪನಿಗಳಿಗಾಗಿಯೋ?

ಕೃಷಿ ಅಭಿವೃದ್ಧಿ ಹೆಸರಿನಲ್ಲಿ ಸರ್ಕಾರಗಳು ತರುತ್ತಿರುವ ಹೊಸ ಕೃಷಿ ಮಾರುಕಟ್ಟೆ ನೀತಿ ಯಾರ ಹಿತವನ್ನು ಕಾಯಲಿದೆ. ಈ ಕುರಿತು ವಿಶ್ಲೇಷಣೆ ಇಲ್ಲಿ ಓದಿ.

ಯು. ಬಸವರಾಜು

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕೃಷಿ ಅಭಿವೃದ್ಧಿ ಪಡಿಸಲು ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಅವಕಾಶ ನೀಡುವ ಮೂಲಕ ರೈತರ ಹಾಗೂ ಕೃಷಿಯ ಹಿತರಕ್ಷಣೆ ಮಾಡಲಾಗುವುದೆಂದು ಬೊಬ್ಬಿಡುತ್ತಿವೆ. ಕೃಷಿ ರಂಗ ಬಿಕ್ಕಟ್ಟಿನಲ್ಲಿದೆ. ರೈತರು ಸಾಲಗಾರರಾಗಿ ಆತ್ಮಹತ್ಯೆಗಳಿಗೆ ಇಳಿದಿದ್ದಾರೆ. ವಿಶ್ವದ ಕೃಷಿ ಉತ್ಪನ್ನಗಳ ಜೊತೆಗೆ ಸ್ಪರ್ಧಿಸಲು ಆಗುತ್ತಿಲ್ಲವಾದ್ದರಿಂದ ಲಾಭದಾಯಕ ಬೆಲೆ ಅವರ ಬೆಳೆಗಳಿಗೆ ಸಿಗುತ್ತಿಲ್ಲ. ಈ ರೀತಿ ಕೃಷಿ ಲಾಭದಾಯಕವಾಗದಿರುವುದಕ್ಕೆ ಉನ್ನತ ತಂತ್ರಜ್ಞಾನ ಬಳಸಿ ಅತಿ ಹೆಚ್ಚು ಇಳುವರಿ ಪಡೆಯಲು ಸಾಧ್ಯವಾಗದೇ ಇರುವುದು ಮತ್ತು ಕೃಷಿ ಹಾಗೂ ಕೃಷಿಯೇತರ ಉತ್ಪನ್ನಗಳಿಗೆ ಮೂಲ ಸೌಕರ್ಯ ಒದಗಿಸಲಾಗದಿರುವುದು ಕಾರಣವೆಂದು ಬಹುರಾಷ್ಟ್ರೀಯ ಸಂಸ್ಥೆಗಳ ಬಾಲಬಡುಕ ಆಳುವ ಪಕ್ಷಗಳು ವಾದಿಸುತ್ತಿವೆ. ಇದು ಹೇಗಿದೆಯೆಂದರೆ, ಕುರಿಗಾವಲಿಗೆ ಹಲವು ಪ್ರಬಲ ತೋಳಗಳೇ ಅಲ್ಲ, ಚಿರತೆ ಹುಲಿ ಸಿಂಹಗಳೇ ಬೇಕೆಂದಂತಿದೆ. ಈ ನೆಲೆಯಲ್ಲಿ ಕರ್ನಾಟಕದ ಕೃಷಿಯಲ್ಲಿ ಬಂಡವಾಳ ಹೂಡಿಕೆದಾರರ ವಿಶ್ವ ಸಮಾವೇಶಗಳನ್ನು ಗಮನಿಸ ಬೇಕಿದೆ.

ರೈತರು ಕೇಳುವುದೇನು?

ಈಗಲೂ ಕೃಷಿಯನ್ನಾಧರಿಸಿದ ಜನಸಂಖ್ಯೆ, ಒಟ್ಟು ಜನಸಂಖ್ಯೆಯ ಶೇ.61 ಕ್ಕಿಂತಲೂ ಹೆಚ್ಚಾಗಿದೆ. ಇದರಲ್ಲಿ ಅರ್ಧದಷ್ಟು ಅಂದರೇ, ಶೇ.31 ರಷ್ಟು ಕೃಷಿ ಕೂಲಿಕಾರರು ಹಾಗೂ ಕಸಬುದಾರರಾಗಿದ್ದಾರೆ. ಉಳಿದರ್ಧದಲ್ಲಿ ರೈತರು-ಹಿಡುವಳಿದಾರರಿದ್ದಾರೆ.

ಕರ್ನಾಟಕದ ಒಟ್ಟು ಹಿಡುವಳಿಗಳು 2005-06 ರಂತೆ 75.81 ಲಕ್ಷಗಳಾಗಿವೆ. ಇದರಲ್ಲಿ ಸಣ್ಣ-ಅತಿಸಣ್ಣ ಹಿಡುವಳಿದಾರರ ಸಂಖ್ಯೆ ಶೇ.81 ಕ್ಕೂ ಅಧಿಕವಾಗಿದ್ದು, 56 ಲಕ್ಷವಾಗಿದ್ದಾರೆ. ಇವರು ಹೊಂದಿದ ತಲಾವಾರು ಸರಾಸರಿ ಜಮೀನು 1.5 ಎಕರೆಗೂ ಕಡಿಮೆಯಾಗಿದೆ. ಕೃಷಿ ರಂಗವನ್ನಾಧರಿಸಿದವರ ಸಂಖ್ಯೆ ಸರಿಸುಮಾರು 1.32 ಕೋಟಿಯಷ್ಟಾಗಿ, ಶೇ.54 ಕೃಷಿ ಅವಲಂಬಿತರ ಭಾಗವಾಗಿದ್ದಾರೆ. ಒಟ್ಟು ಮಾರುಕಟ್ಟೆಯ ಅರ್ಧಭಾಗವಾಗಿದ್ದಾರೆ.

ಕೃಷಿ ಕೂಲಿಕಾರರು ವಾಸ್ತವಿಕವಾಗಿ, ಮಾಜಿ ಗೇಣಿದಾರರು ಮತ್ತು ಸಣ್ಣ, ಅತಿಸಣ್ಣ ಹಿಡುವಳಿದಾರರು, ಉದ್ಯೋಗ ಕಳೆದುಕೊಂಡ ಕೈಕಸುಬುದಾರರೂ ಆಗಿದ್ದಾರೆ. ಇವರು ಕನಿಷ್ಠ ಕೂಲಿ - ವರ್ಷವಿಡೀ ಕೂಲಿ ಕೆಲಸ ಹಾಗೂ ಕಳೆದುಕೊಂಡ ಭೂಮಿ ಮತ್ತು ಮನೆಗಾಗಿ ಹಂಬಲಿಸುತ್ತಿರುವಾಗಲೇ, ಎಲ್ಲಾ ಶೇ.54 ಜನರು ಕೇಳುವ ಬೇಡಿಕೆಯನ್ನು ಇವರು ಕೂಡ ಬಯಸಿದ್ದಾರೆ. ಈ ಹಿಂದೆ ಅವುಗಳನ್ನೇ ಅವರು ಪ್ರಧಾನವಾಗಿ ಕೇಳಿದ್ದಾರೆ. ಹೋಗಲಿ, ಈ ಎಲ್ಲರೂ ಕೂಡಾ ಈ ಹಿಂದಿನಿಂದಲೂ ಮತ್ತು ಈಗಲೂ ಕೇಳುತ್ತಿರುವುದಾದರೂ ಏನನ್ನ? ಹೊಟ್ಟೆ ತುಂಬುವಷ್ಟು ಕೂಲಿ-ವರ್ಷವಿಡೀ ಕೂಲಿ ಕೆಲಸ - ಉಳುವವನನ್ನೇ ನೆಲದೊಡೆಯನನ್ನಾಗಿಸಿ, ಗೇಣಿ ಸಂರಕ್ಷಿಸಿ. ನ್ಯಾಯ ಗೇಣಿ ನಿಗದಿಸಿ. ದುಬಾರಿ ಬಡ್ಡಿಯ ಲೇವಾದೇವಿಗಾರರ ಸಾಲದಿಂದ ಮುಕ್ತಿಗೊಳಿಸಿ, ಬೆಲೆ ಕುಸಿತದಿಂದ ರಕ್ಷಿಸಿ, ನ್ಯಾಯವಾದ ಬೆಲೆಗಳನ್ನು ಬೆಳೆಗಳಿಗೆ ಖಾತ-ರಿಯಾಗಿ ನೀಡಿ. ಉತ್ತಮ ಗುಣಮಟ್ಟದ ಅಧಿಕ ಇಳುವರಿಯ, ಕಡಿಮೆ ಬೆಲೆಯ ಬೀಜ ಗೊಬ್ಬರ, ಕ್ರಿಮಿನಾಶಕ ಹಾಗೂ ಕಡಿಮೆ ಬಡ್ಡಿ ಸಾಲ ಒದಗಿಸಿ ಹಾಗೂ ಅದೇ ರೀತಿ ಮರಳಿ ಅವರು ಗ್ರಾಹಕರಾಗಿ ಆಹಾರ ಧ್ಯಾನ್ಯ ಮತ್ತಿತರೇ, ವಸ್ತು ಖರೀದಿಸುವಾಗ ನಿಯಂತ್ರಿತ ಬೆಲೆಗೆ ಮತ್ತು ಸಬ್‌ಸಿಡಿಯಲ್ಲಿ ಒದಗಿಸಿ. ಒಟ್ಟಾರೇ, ಅವರು ಕೇಳುತ್ತಿರುವುದು, ಭೂಮಾಲಕರು-ಲೇವಾದೇವಿಗಾರರ ಹಾಗೂ ಮಾರುಕಟ್ಟೆ ಶಕ್ತಿಗಳ ಬೆಲೆಗಳ ಏರಿಳಿತದ ಶೋಷಣೆಯಿಂದ ಅವರ ರಕ್ಷಣೆಯಾಗಿದೆ.

ಈ ಕೇಳಿಕೆಗಳಲ್ಲಿ ಹೊಸದೇನು ಇಲ್ಲ. ಇವು ಸ್ವಾತಂತ್ರ ಹೋರಾಟ ಕಾಲದಿಂದಲೂ ಕೇಳುತ್ತಾ ಬಂದಾ ಕೇಳಿಕೆಗಳೇ ಆಗಿವೆ. ಅಂ-ದರೇ, ಇದುವರೆಗಿನ ಕೇಂದ್ರ ಸರ್ಕಾರಗಳೇ ಆಗಲೀ, ಕರ್ನಾಟಕದಲ್ಲಿ ರಾಜ್ಯ ಸರ್ಕಾರಗಳೇ ಆಗಲಿ, ಇವುಗಳನ್ನ ಉಪೇಕ್ಷೆ ಮಾಡುತ್ತಾ ಮತ್ತು ಬಡವರನ್ನ ದಿವಾಳಿ ಎಬ್ಬಿಸುವ ನೀತಿಗಳನ್ನ ಅನುಸರಿಸುತ್ತಾ ಬಂದಿವೆ. ಈಗಲೂ ಆವುಗಳನ್ನು ರಾಜ್ಯದ ಕಾಂಗ್ರೆಸ್ ಸರ್ಕಾರವಾಗಲೀ ಅಥವಾ ಕಾಂಗ್ರೆಸ್ ನೇತೃತ್ವದ ಕೇಂದ್ರ ಸರ್ಕಾರವಾಗಲಿ ಸಕಾರಾತ್ಮಕವಾಗಿ ಪರಿಗಣಿಸುತ್ತಿಲ್ಲ. ಬದಲಿಗೆ ವ್ಯವಸಾಯವನ್ನು ರೈತರ ಕೈಯಿಂದ ಬಹುರಾಷ್ಟ್ರೀಯ ಕಂಪನಿಗಳ ಕೈಗೆ ವರ್ಗಾಯಿಸುವಲ್ಲಿ ನಿರತವಾಗಿವೆ.

ಬಂಡವಾಳಶಾಹಿ ಭೂ ಮಾಲಕ ಕೃಷಿ ನೀತಿ. ಮಾರುಕಟ್ಟೆ ಶಕ್ತಿಗಳ ಕೊಳ್ಳೆ ನೀತಿ.



ಮಾರುಕಟ್ಟೆ ನೀತಿಗಳು ಆಳುವ ಜನರ ಕೃಷಿ ನೀತಿಗಳ ಭಾಗವಾಗಿಯೇ ರೂಪುಗೊಂಡಿವೆ. ಸ್ವಾತಂತ್ರ್ಯ ನಂತರ, ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ಅಧಿಕಾರ ಹಿಡಿದ ಕಾಂಗ್ರೆಸ್ ಪಕ್ಷ ಉಳುವವನನ್ನೆ ಹೊಲದೊಡೆಯನನ್ನಾಗಿಸುವ ಮತ್ತು ಅವನನ್ನು ಸಂರಕ್ಷಿಸಿ ಬೆಳೆಸುವ ಕೃಷಿ ನೀತಿಯನ್ನ ಅನುಸರಿಸಲಿಲ್ಲ. ಬದಲಿಗೆ ಉಳುವವನ್ನ ಒಕ್ಕಲೆಬ್ಬಿಸಿ, ಬೀದಿಗೆ ತಳ್ಳಿ, ಪಾಳೇಗಾರಿ ಭೂ ಮಾಲಕನನ್ನ, ಬಂಡವಾಳಶಾಹಿ ಭೂಮಾಲಕನನ್ನಾಗಿಸುವ, ಬಂಡವಾಳಶಾಹಿ ಕೃಷಿ ನೀತಿಗಳನ್ನು ಹೇರಿದೆ. ಪರಿಣಾಮವಾಗಿ, ಈ ಹೊಸ ಭೂಮಾಲಕನನ್ನ ಅಲ್ಲಿಂದ ಜಾಗತೀಕರಣದ ಪ್ರಕ್ರಿಯೆಯವರೆಗೆ ಸಂರಕ್ಷಿಸುವ ಮಾರುಕಟ್ಟೆಯ ನೀತಿಗಳನ್ನ ಅನುಸರಿಸಿತೇ ಹೊರತು, ಬಹುಸಂಖ್ಯಾತ ದಲಿತರು, ಹಿಂದುಳಿದ ಜಾತಿಗಳ ಮತ್ತು ಮುಂದುವರೆದ ಜಾತಿಗಳ ಬಡವರೇ ಆಗಿರುವ ಸಣ್ಣ, ಅತಿಸಣ್ಣ ಹಾಗೂ ಮದ್ಯಮ ರೈತರನ್ನ ಮತ್ತು ಗೇಣಿದಾರರನ್ನು ಸಂರಕ್ಷಿಸುವ ನೀತಿಯನ್ನಲ್ಲಾ.

ಕೃಷಿ ವ್ಯಾಪಾರಿಗಳು ಹಾಗೂ ಉದ್ದಿಮೆದಾರರು ತಮಗೆ ಆಹಾರ ಧಾನ್ಯಗಳು ಮತ್ತು ಇತರೆ ಕೃಷಿ ಉತ್ಪನ್ನಗಳು ಹೆಚ್ಚು-ಹೆಚ್ಚು ಬೇಕೆಂದೆನಿಸಿದಾಗ ಕೃತಕವಾಗಿ ಬೆಲೆಗಳನ್ನ ಏರಿಸುತ್ತಾರೆ. ಮತ್ತು ಆ ಮೂಲಕ ಆ ಹೆಚ್ಚಿದ

ಬೆಲೆಗೆ ಉತ್ಪನ್ನಗಳು ಇನ್ನಷ್ಟು ವ್ಯಾಪಕವ
ಪ್ರದೇಶದಲ್ಲಿ ಉತ್ಪಾದನೆ ಮಾಡಿದಾ
ವ್ಯಾಪಾರಿಗಳು ಸುಗ್ಗಿಯ ಆರಂಭದ
ಕೃತಕವಾಗಿ ಬೆಲೆ ಕುಸಿಯುವಂತೆ ಮಾ
ಒಟ್ಟು ಉತ್ಪನ್ನವನ್ನ ಕೊಳ್ಳೆ ಹೊಡೆಯುತ್ತಾ
ಹೀಗೆ ತಮ್ಮ ಬತ್ತಳಿಕೆಯಲ್ಲಿರುವ ಬೆಲೆ
ಏರಿಳಿತದ ಅಸ್ತ್ರಗಳನ್ನು ಬಳಸಿ, ಭಾ
ಲಾಭದಲ್ಲಿ ತೊಡಗುವುದು ಕೃಷಿಯ ದೊ
ವ್ಯಾಪಾರಿಗಳು ಹಾಗು ಉದ್ದಿಮೆದಾರ
ಬಹುದೊಡ್ಡ ತಂತ್ರವಾಗಿದೆ. ಇಂತ
ಬೆಲೆಗಳ ಏರಿಳಿಕೆಯ ತಂತ್ರಗಳ
ಸೋಲಿಸಲೆಂದೇ ರೈತರ ಭಾ
ಹೋರಾಟದ ಪರಿಣಾಮವಾಗಿಯೇ, ಕೃ
ಉತ್ಪನ್ನಗಳ ಬೆಳೆ ಸಂರಕ್ಷಣೆಯ ಕ್ರಮಗಳನ
ಕೇಂದ್ರ-ರಾಜ್ಯಸರ್ಕಾರಗಳು ಆ ನಂತ
ಜಾರಿಗೆ ತಂದವು.

ಆದರೇ ಕೇಂದ್ರ ಮ
ರಾಜ್ಯದಲ್ಲಿ ರಚಿಸಿದ ಕೃ
ಉತ್ಪನ್ನಗಳ ಬೆಳೆ ಸಂರಕ್ಷಣೆ
ಯ ಕ್ರಮಗಳು, ಸಗಟ
ವರ್ತಕರು ಹಾಗೂ
ಕೃಷಿ ವ್ಯಾಪಾರಿಗಳು ಬೆಲೆಗಳನ
ಸುಗ್ಗಿಯ ಸಮಯದ
ಕೃತಕವಾಗಿ ಕುಸಿಯುವಂ
ಮಾಡಿ. ಕೃಷಿ ಉತ್ಪನ್ನಗಳನ
ಕೊಳ್ಳೆ ಹೊಡೆಯುವಂ
ಮಾಡುತ್ತಿದ್ದ ಕ್ರಮಗಳಿಂ
ಭೂಮಾಲಕರು ಮತ್ತು ಶ್ರೀಮಂ
ರೈತರ ಹಿತ ರಕ್ಷಿಸುವಂತಿದ್ದವ
ಹೊರತು ಗೇಣಿ ಹಾಗೂ ಬ
ಕೆಳಮಧ್ಯಮ ರೈತರನ್ನಲ್ಲಾ.

ಭಾರತದಲ್ಲಿ ಆಹಾ
ಸ್ವಾವಲಂಬನೆಯನ್ನ
ಸಾಧಿಸುವುದು ಮತ್ತು ಕಡಿಮೆ ಬೆಲೆಯ
ಕೈಗಾರಿಕಾ ರಂಗಕ್ಕೆ ಆಹಾರ ಒದಗಿಸುವುದು
ಬಂಡವಾಳಶಾಹಿ ಬೆಳವಣಿಗೆಯ ದೃಷ್ಟಿಯಿಂ
ಅಂದಿನ ಆಳುವ ವರ್ಗಗಳಿಗೆ ಆದ್ಯತೆಯಾಗಿ
ತ್ತು. ಹೀಗಾಗಿ ಇದರ ಹೊಣೆಗಾರಿಕೆಯನ್ನು
ಬಂಡವಾಳಶಾಹಿ ಭೂಮಾಲಿಕರಿಗೆ ವಹಿ
ನೆರವು ನೀಡಲಾಯಿತು. ಆಗ ಬಂ
ಹಸಿರು ಕ್ರಾಂತಿ ಯೋಜನೆಯಾಗಿದೆ. ಅಂ
ದುಕೊಂಡಂತೆ ಯೋಜನೆಯ ಸಿಂಹಪಾಲ
ಭೂಮಾಲಿಕರು ಹಾಗೂ ಶ್ರೀಮಂ
ರೈತರಿಗೆ ಅಧುನಿಕ ತಂತ್ರಜ್ಞಾನ ಹಾಗು
ಅಧುನಿಕ ಯಂತ್ರೋಪಕರಣಗಳು ಮತ
ಆಧುನಿಕ ಸಬ್ಸಿಡಿಯ ಬೀಜ, ಗೊಬ್ಬರ-
ಕ್ರಿಮಿನಾಶಕ ಮತ್ತು ಕಡಿಮೆ ಬಡ್ಡಿಯ
ಸಾರ್ವಜನಿಕ ಸಂಸ್ಥೆಗಳ ಸಾಲ ದೊರೆಯಿತು
ಅದರ ಒಂದು ಸಣ್ಣ ಪಾಲು ಮಾತ್ರವೇ
ಸಬ್‌ಸಿಡಿ ರೂಪದ ಬೀಜ, ಗೊಬ್ಬರ
ಕ್ರಿಮಿನಾಶಕಗಳು ಬಡ ಮತ್ತು ಮದ್ಯಮ
ರೈತರಿಗೆ ದೊರೆಯುವಂತಾಯಿತು.
ಮೂಲಕ ಅವುಗಳ ಉತ್ಪಾದಕ ಕಂಪನಿಗ
ಬೆಳವಣಿಗೆಗೆ ನೆರವು ನೀಡಲಾಯಿತೆಂಬುದನ್ನ
ಗಮನಿಸಬೇಕು. ಅದರೇ, ಅದೇ
ಸಂದರ್ಭದಲ್ಲಿ ಮುಖ್ಯವಾಗಿ ಸಣ್ಣ
ಅತಿಸಣ್ಣ ರೈತರು, ಗೇಣಿದಾರರು ದೊಡ
ಪ್ರಮಾಣದಲ್ಲಿ ಬಹುತೇಕ ಖಾಸಗಿ
ಸಾಲದ ಮೇಲೆ ಅವಲಂಬಿಸಿದ್ದರಿಂದ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಾಲಗಾರರ ಒತ್ತಡದಿಂದ ಮತ್ತು ಅವರ ಸಣ್ಣ ಹಿಡುವಳಿಗಳ ಮತ್ತು ಬಡತನದ ಕಾರಣಗಳಿಂದ ಅವರು ತಮ್ಮ ಕೃಷಿ ಉತ್ಪನ್ನಗಳನ್ನು ಸಂಗ್ರಹಿಸಿಡುವಂತಹ ಸ್ಥಿತಿಯಲ್ಲಿ ಇರಲಿಲ್ಲ. ಹೀಗಾಗಿ, ಬೆಳೆ ಬಂದ ಕೂಡಲೇ ಮಾರಾಟ ಮಾಡುವ ಒತ್ತಾಯ-ಕ್ಕೆ ಒಳಗಾಗುತ್ತಿದ್ದರು. ಸಾಧಾರಣವಾಗಿ ಆಗ ಕುಸಿದ ಬೆಲೆಗಳು ಮಾರುಕಟ್ಟೆಯಲ್ಲಿ ಇವರನ್ನ ಅಣಕಿಸುತ್ತಿದ್ದವು.


ಆಹಾರ ಉತ್ಪಾದನೆಯ ಜವಾಬ್ದಾರಿಯನ್ನ ಹೆಗಲಿಗೇರಿಸಿಕೊಂಡಿದ್ದ ಹೊಸ ಭೂಮಾಲಕ – ಶ್ರೀಮಂತ ರೈತರು ಅದನ್ನ ನಡು ನೀರಿನಲ್ಲಿ ಕೈಬಿಟ್ಟು, ಲಾಭಕ್ಕಾಗಿ. ವಾಣಿಜ್ಯ ಬೆಳೆಗಳ ಕಡೆ ಸಾಗಿದ್ದರೇ, ವಾಸ್ತವವಾಗಿ ಸಣ್ಣ, ಅತಿಸಣ್ಣ ಹಾಗೂ ಕೆಳಮಧ್ಯಮ ರೈತರು ಮಾತ್ರವೇ. ಆಹಾರದ ಬೆಳೆಯ ನಿಜ ಆಧಾರವಾಗಿದ್ದರು.

ಆದರೇ, ಆಹಾರದ ಬೆಳೆಗಳಿಂದ ಸಣ್ಣ ಮತ್ತು ಮುಖ್ಯವಾಗಿ ಮಧ್ಯ ರೈತರು ಮಾರುಕಟ್ಟೆಯ ಶಕ್ತಿಗಳ ಯೋಜನೆಯಂತೆ, ಆನಂತರ ವಾಣಿಜ್ಯ ಬೆಳೆಗಳಿಗೆ ನಿಧಾನವಾಗಿ ಬದಲಾಗುತ್ತಾ ಬಂದಿದ್ದಾರೆ. ಹಾಗೆ ಆರಂಭದಲ್ಲಿ ಜೋಳ, ಸಜ್ಜೆ, ರಾಗಿ, ನವಣೆ ಬೆಳೆಯುತ್ತಿದ್ದವರು, ಬೆಂಬಲ ಬೆಲೆಯು ಸಿಗದೇ ಇರುವುದರಿಂದ ತಮ್ಮ ಕುಟುಂಬಗಳ ಹೊಟ್ಟೆ ತುಂಬಿಸಲಾರವೆಂದು ಭಾವಿಸಿ, ದುಬಾರಿ ಬಡ್ಡಿ ಸಾಲದಿಂದಲೇ ಹೂಡಿಕೆಯನ್ನ ತಲಾ ಎಕರೆ ವಾರು ಹೆಚ್ಚಿಸಿಕೊಂಡು ವಾಣಿಜ್ಯ ಬೆಳೆಯಾದ ಹತ್ತಿಗೆ ಬದಲಿಯಾಗಿದ್ದು 1980–90 ರ ದಶಕದಲ್ಲಿ ಕಂಡಿದ್ದೇವೆ. ಆ ಸಂದರ್ಭದಲ್ಲಿ ವರಲಕ್ಷ್ಮಿ–ಜಯದಾರ್ ಮತ್ತು ಡಿಸಿಎಚ್ ಮುಂತಾದ ಹೈಬ್ರೀಡ್ ಹತ್ತಿಯ ತಳಿಗಳಿಗೆ ಉತ್ತರ ಕರ್ನಾಟಕದ ತುಂಗಭದ್ರಾ–ಭೀಮ–ಘಟಪ್ರಭ–ಮಲಪ್ರಭ ಅಚ್ಚುಕಟ್ಟು ಪ್ರದೇಶಗಳ ಬಹುತೇಕ ರೈತರು ಮಾರು ಹೋಗಿದ್ದರು. ಧಾರವಾಡ ರಾಯಚೂರುಗಳು ಪ್ರಸಿದ್ಧ ಮಾರುಕಟ್ಟೆಗಳಾಗಿದ್ದವು. ಆ ದಿನಗಳಲ್ಲಿ ಪ್ರತಿ ಕ್ವಿಂಟಾಲಿಗೆ 700 ರಿಂದ 800 ರೂಪಾಯಿಗಳಿಗೆ ಮಾರಾಟವಾಗಬೇಕಿದ್ದ ಹತ್ತಿಯು, ಕಡಿಮೆ ಬೆಲೆಯ ಆಮದು ಹತ್ತಿಯಿಂದಾಗಿ ದಿಢೀರಣೆ 250–300 ರೂಗಳಿಗೆ ಕುಸಿದು ಹತ್ತಿ ಬೆಳೆಗಾರರನ್ನ ಹೊಸಕಿಹಾಕಿತು. ಕೇಂದ್ರ ಸರ್ಕಾರ 1987–88 ಮತ್ತು 1988–89 ರ ಎರಡು ವರ್ಷಗಳಲ್ಲಿ 5.30 ಲಕ್ಷ ಬೇಲ್ ಹತ್ತಿಯನ್ನ ಆಮದು ಮಾಡಿಕೊಂಡದ್ದನ್ನ ಇಲ್ಲಿ ಸಕಾರಣವಾಗಿ ನೆನಪಿಸಿಕೊಳ್ಳಬಹುದು. ಬಳ್ಳಾರಿಯ ಕೊಟ್ಟೂರು ಎ.ಪಿ.ಎಂ.ಸಿಯಲ್ಲಿ ಹತ್ತಿ ಬೆಲೆ ಕುಸಿತದಿಂದ ಕಂಗಾಲಾದ ರೈತರು ರೊ ಚ್ಚಿಗೆದ್ದು ಪ್ರತಿಭಟಿಸಿದ್ದು ಮತ್ತು ಲಾಠಿ ಚಾರ್ಜ್ ಹಾಗೂ ಗೋಲಿಬಾರ್ ಎದುರಿಸಿದ್ದು ಈಗ ಇತಿಹಾಸ.

ಕೇವಲ ಆಹಾರ ಧಾನ್ಯಮಾತ್ರವೇ ಕಡಿಮೆ ಬೆಲೆಗೆ ಸಿಗಬೇಕು, ಇತರೆ ಕಚ್ಚಾ ವಸ್ತುಗಳು ಮುಖ್ಯವಾಗಿ ಹತ್ತಿ, ರೇಷ್ಮೆ ಮುಂತಾದವು ದುಬಾರಿ ಬೆಲೆಗೆ ಕೊಳ್ಳಬೇಕೆಂದೇನು ಉದ್ದಿಮೆದಾರರು ಮುಖ್ಯವಾಗಿ ಜವಳಿ ಉದ್ದಿಮೆದಾರರು ಬಯಸುತ್ತಿರಲಿಲ್ಲವಲ್ಲಾ! ಪರಿಣಾಮವಾಗಿ ಸುಗ್ಗಿಯ ಸಮಯದ ಆರಂಭಕ್ಕೆ ಸರಿಯಾಗಿ ಕಡಿಮೆ ಬೆಲೆಯ ವಿದೇಶಿ ಹತ್ತಿ ಆಮದು ಮಾಡಿಕೊಳ್ಳುತ್ತಿದ್ದರು. ಸರ್ಕಾರ ಜವಳಿ ಉದ್ದಿಮೆಯ ಜೊತೆ ನಿಲುತ್ತಿತ್ತು.

ಆಗಲೂ ಬೆಲೆ ಕುಸಿಯದಂತೆ ನೋಡಿಕೊಳ್ಳಲು ಕೃಷಿ ಮಾರುಕಟ್ಟೆಗಳು ಮತ್ತು ಎಫ್.ಸಿ.ಐ. ಹಾಗೂ ಸಿ.ಸಿ.ಐ. ಮತ್ತು ನಾಫೆಡ್ ಹಾಗೂ ಮಾರ್ಕೇಟಿಂಗ್ ಫೆಡರೇಷನ್‌ಗಳಂತ ಏಜೆನ್ಸಿಗಳು ಇರುತ್ತಿದ್ದವಾದರೂ, ಕುಸಿದ ಬೆಲೆಯಿಂದ ಈ ರೈತರನ್ನು ಸಂರಕ್ಷಿಸಲು ಮಧ್ಯ ಪ್ರವೇಶಿಸುತ್ತಿರಲಿಲ್ಲ. ಆಗಲೂ ಕೇಂದ್ರ ಸರ್ಕಾರ ಬೆಂಬಲ ಬೆಲೆಯನ್ನ ಸಿ.ಎ.ಸಿ.ಪಿ ಮೂಲಕ ಘೋಷಿಸುತ್ತಿರಲಿಲ್ಲ. ನೂರಾರು ಕೋಟಿ ರೂಪಾಯಿಗಳ ಆವರ್ತ ನಿಧಿ ಇಟ್ಟು ಕೊಂಡಿದ್ದ ರಾಜ್ಯ ಸರ್ಕಾರಗಳು ಖರೀದಿಸಲು ಮುಂದೆ ಬರುತ್ತಿರಲಿಲ್ಲ. ಬದಲಿಗೆ, ಬೆಲೆ ಕುಸಿತಕ್ಕೆ ಕೇಂದ್ರ ಸರ್ಕಾರ ಹೊಣೆಯೆಂದು ರಾಜ್ಯ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳೇ ಕಾರಣವೆಂದು ಕೇಂದ್ರ ಸರ್ಕಾರ ಹೀಗೆ ಪರಸ್ಪರ ದೋಷಾರೋಪದ ರಾಜಕೀಯದಲ್ಲಿ ಮುಳುಗಿರುತ್ತಿದ್ದವು.

ಉದಾಹರಣೆಗೆ, ಕಳೆದ ವರ್ಷ (2010) ಭತ್ತದ ಬೆಲೆಯು ತಲಾ ಕ್ವಿಂಟಾಲಿಗೆ 900 ರೂಗಳಿಂದ 1000 ರೂಗಳಿಗೆ ಕುಸಿದಾಗ ಭತ್ತ ಬೆಳೆಗಾರರು ತೀವ್ರ ಕಂಗಾಲಾಗಿ, ಭಾರಿ ಸಾಲಗಾರರಾಗುವ ಆತಂಕದಿಂದ ಬೆಲೆ ಕಡಿಮೆ ಎಂದು ಬೊಬ್ಬಿಟ್ಟರು, ಚಳುವಳಿ ನಡೆಸಿದರು. ಬೆಂಬಲ ಬೆಲೆ 1500 ರೂಗಳೆಂದು ಕಾಂಗ್ರೆಸ್ ನೇತೃತ್ವದ ಕೇಂದ್ರ ಸರ್ಕಾರ ಘೋಷಿಸಿದ್ದರೂ, ಆವರ್ತ ನಿಧಿಯನ್ನ ಒಂದು ಸಾವಿರ ಕೋಟಿಯಷ್ಟು ಇಟ್ಟು, ರೈತರನ್ನ ಸಂರಕ್ಷಿಸುವೆನೆಂದು ಬಜೆಟ್‌ನಲ್ಲಿ ಬಡಾಯಿ ಕೊಚ್ಚಿಕೊಂಡ ಬಿಜೆಪಿ ರಾಜ್ಯ ಸರ್ಕಾರ, ತೊಂದರೆಗೀಡಾಗಿದ್ದ ರೈತರ ರಕ್ಷಣೆಗೆ ಧಾವಿಸಲಿಲ್ಲ ಮತ್ತು ಖರೀದಿ ಕೇಂದ್ರಗಳನ್ನ ತೆರೆಯಲಿಲ್ಲ. ಬದಲಿಗೆ, ಶೇ.75 ರಷ್ಟು ಇರುವ ಬಡ ಮತ್ತು ಮದ್ಯಮ ರೈತರು ಸಾಲಗಾರರ ಒತ್ತಡಕ್ಕೆ, ತಮ್ಮ ಬೆಳೆಯನ್ನ ಗೋಡೌನುಗಳಲ್ಲಿ ಸಂಗ್ರಹಿಸಿಕೊಂಡಿದ್ದ ಭೂಮಾಲಕರು ಮತ್ತು ಶ್ರೀಮಂತ ರೈತರು ಹಾಗೂ ವರ್ತಕರು ಕಡಿಮೆ ಬೆಲೆಗೆ ಅವರ ಸರಕನ್ನು ಖರೀದಿಸಿದ ನಂತರ, ಖರೀದಿ ಕೇಂದ್ರಗಳನ್ನು ತೆರೆದು ಬೆಂಬಲ ಬೆಲೆಗೆ ಖರೀದಿಸಲು ಮುಂದೆ ಬಂದಿದೆ. ಸರ್ಕಾರ ರಚಿಸಿದ ಈ ಖರೀದಿ ಕೇಂದ್ರಗಳು, ಆಗಲೂ ರೈತರ ದಾಸ್ತಾನನ್ನು, ಅವು ನಿಗದಿತ ನಮೂನೆಗಳಿಗೆ ಅನುಗುಣವಾಗಿಲ್ಲ ಮತ್ತು ಗ್ರೇಡಿಂಗ್ ಇಲ್ಲ ಎಂದು ನಿರಾಕರಿಸಿ ಅಂತಹ ರೈತರನ್ನು ವರ್ತಕರೆಡೆ ತಳ್ಳಿವೆ ಮತ್ತು ಅಂತಹ ದಾಸ್ತಾನನ್ನ ಕಡಿಮೆ ಬೆಲೆಗೆ ವ್ಯಾಪಾರಿಗಳು ಖರೀದಿಸಿದ ನಂತರ, ಆ ಎಲ್ಲವನ್ನೂ ಭೂ ಮಾಲಕರಿಂದ ಮತ್ತು ವರ್ತಕರಿಂದ ಖರೀದಿ ಕೇಂದ್ರಗಳು ಯಾವುದೇ ನಮೂನೆಗಳನ್ನು ಗಮನಿಸಿದೇ ಖರೀದಿಸುತ್ತವೆ.



ಈ ನೀತಿ, ಬಡ ಮತ್ತು ಮದ್ಯಮ ರೈತರಿಗೆ ನಷ್ಟ ಉಂಟು ಮಾಡಿದರೇ, ಭೂ ಮಾಲಿಕರಿಗೆ–ಶ್ರೀಮಂತ ರೈತರಿಗೆ ಮತ್ತು ವರ್ತಕರಿಗೆ ಭಾರಿ ಲಾಭ ಉಂಟು ಮಾಡುತ್ತದೆ. ಹೀಗೆ ಸಾರ್ವಜನಿಕ ಹಣವನ್ನ ಭೂ ಮಾಲಕರು ಮತ್ತು ವರ್ತಕರ ಜೇಬಿಗಿಳಿಸುವ ಸಾಧನಗಳಾಗಿ ಖರೀದಿ ಕೇಂದ್ರಗಳು ಹಾಗೂ ಮಾರುಕಟ್ಟೆ ಏಜೆನ್ಸಿಗಳನ್ನು ದುರ್ಬಳಕೆ ಮಾಡಲಾಗುತ್ತದೆ. ಇದರಲ್ಲಿ ರಾಜ್ಯ ಸರ್ಕಾರ ಮತ್ತು ಉನ್ನತ ಅಧಿಕಾರಿ ವರ್ಗಗಳು ಭೂ ಮಾಲಕ – ವರ್ತಕರೊಂದಿಗೆ ಕೈ ಜೋಡಿಸಿ ಶಾಮೀಲಾಗಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಇಂತಹದ್ದೇ ಪರಿಸ್ಥಿತಿಯನ್ನ ಗುಲ್ಬರ್ಗಾ ಜಿಲ್ಲೆಯ 1.70 ಲಕ್ಷ ಟನ್ ಉತ್ಪಾದಕ ತೊಗರಿ ಬೆಳೆಗಾರರು ಮತ್ತು ಉತ್ತರ ಕರ್ನಾಟಕದ ಹತ್ತಿ ಬೆಳೆಗಾರರು, ಮತ್ತಿತ್ತರರು ಅನುಭವಿಸಿದ್ದನ್ನ ಸಕಾರಣವಾಗಿ ಗಮನಿಸಬಹುದಾಗಿದೆ.

ಈಗಲೂ ಕೂಡ ಮಾರುಕಟ್ಟೆಯ ಶಕ್ತಿಗಳಿಂದ ಎಲ್ಲಾ ರೈತರನ್ನು ಸಂರಕ್ಷಿಸಲು, ಬಿತ್ತುವ ಪೂರ್ವದಲ್ಲಿಯೇ ಬೆಂಬಲ ಬೆಲೆ ಘೋಷಿಸುವುದನ್ನ ಕೇಂದ್ರ ಸರ್ಕಾರ ಮಾಡುತ್ತಿಲ್ಲ. ಅದೇ ರೀತಿ ಬೆಂಬಲ ಬೆಲೆಯನ್ನ ಡಾ॥ ಎಂ.ಎಸ್. ಸ್ವಾಮಿನಾಥನ್ ಆಯೋಗದ ಸಲಹೆಯಂತೆ ಬೆಳೆಯ ಉತ್ಪಾದನಾ ವೆಚ್ಚ ಹಾಗೂ ಶೇ 50 ಲಾಭಾಂಶ ಸೇರಿದಂತೆ ಲೆಕ್ಕ ಹಾಕುವುದಿಲ್ಲ. ಮಾತ್ರವಲ್ಲ, ಸುಗ್ಗಿಯ ಆರಂಭದ ಪೂರ್ವದಿಂದಲೇ ಬೆಂಬಲ ಬೆಲೆಗೆ ಖರೀದಿಸುವಂತೆ ಖರೀದಿ ಏಜೆನ್ಸಿಗಳನ್ನ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮಾರುಕಟ್ಟೆಯಲ್ಲಿ ಸಿದ್ದಗೊಳಿಸಿರುವುದಿಲ್ಲ. ಉದ್ದೇಶ ಪೂರ್ವಕವಾಗಿಯೇ ಮಾರುಕಟ್ಟೆಯ ಶಕ್ತಿಗಳಿಗೆ ಬಡವರನ್ನು ಬಲಿ ಹಾಕುವ ನೀತಿಯನ್ನ ಅನುಸರಿಸಲಾಗುತ್ತಿದೆ.

ಪರಿಣಾಮವಾಗಿ, ಗ್ರಾಮೀಣ ಪ್ರದೇಶದಲ್ಲಿ ಅಸಮಾನತೆ ವ್ಯಾಪಕಗೊಂಡು, ಸಾಮಾಜಿಕ ಆರ್ಥಿಕ ದಬ್ಬಾಳಿಕೆಗಳನ್ನ ಈ ಜನತೆ ಎದುರಿಸುವಂತಾಗಿದೆ. ಹಾಗೆಯೇ, ವ್ಯಾಪಕವಾಗಿ ಬೆಳೆಯುತ್ತಿರುವ ಬಡತನದ ಕಾರಣದಿಂದ ಕೊಂಡುಕೊಳ್ಳುವವರಿಲ್ಲದೇ ಕೈಗಾರಿಕೆಗಳು ಮಾರುಕಟ್ಟೆಯ ಅಭಾವವನ್ನ ಎದುರಿಸಿ ಬಿಕ್ಕಟ್ಟಿಗೊಳಗಾಗಿವೆ. ಇವು ಮರಳಿ ಕೃಷಿಯನ್ನ ಮತ್ತಷ್ಟು ಬಿಕ್ಕಟ್ಟಿಗೀಡು ಮಾಡಿವೆ. ಇದೆಲ್ಲವು ಕೃಷಿಯನ್ನ ಮತ್ತು ರೈತಾಪಿ ಜನತೆಯನ್ನ ದಿವಾಳಿಗೀಡುಮಾಡಿವೆ.



ಎಡಪಕ್ಷಗಳು ಪ್ರತಿಪಾದಿಸುತ್ತಿರುವ, ನವ-ಉದಾರೀಕರಣ ಧೋರಣೆಗಳಿಗೆ ಪರ್ಯಾಯವಾದ ಧೋರಣೆಗಳನ್ನು ದೇಶಬಾಂಧವರಿಗೆ ಮನವರಿಕೆ ಮಾಡಿಕೊಡಲು ಎಡಪಕ್ಷಗಳು ಹಮ್ಮಿಕೊಂಡಿರುವ ಪ್ರಚಾರಾಂದೋಲನದ ಅಂಗವಾಗಿ ಅಕ್ಟೋಬರ್ 8 ರಂದು ಬೆಂಗಳೂರು ಸ್ವಾತಂತ್ರ್ಯ ಉದ್ಯಾನವನದಲ್ಲಿ ಏರ್ಪಡಿಸಲಾಗಿದ್ದ ಬೃಹತ್ ಬಹಿರಂಗ ಸಭೆಯಲ್ಲಿ ರಾಜ್ಯದ ಮೂಲೆ ಮೂಲೆಗಳಿಂದ ಸುಮಾರು 15 ಸಾವಿರ ರೈತರು, ಕಾರ್ಮಿಕರು, ಕೃಷಿಕಾರ್ಮಿಕರು, ವಿದ್ಯಾರ್ಥಿ ಯುವಜನರು ಪಾಲ್ಗೊಂಡಿದ್ದರು. ವಿವರವಾದ ವರದಿ ಕಳೆದ ಸಂಚಿಕೆಯಲ್ಲಿ ಪ್ರಕಟವಾಗಿದೆ. ಮೇಲಿನ ಚಿತ್ರದಲ್ಲಿ ಪಾರ್ವರ್ಡ್ ಬ್ಲಾಕ್ ಪಕ್ಷದ ಮುಖಂಡ ಪಿ.ಬಿ. ಕದಿರವನ್, ಸಿಪಿಐ(ಎಂ) ಪೊಲಿಟ್‌ಬ್ಯೂರೊ ಸದಸ್ಯರಾದ ಬೃಂದಾ ಕಾರಾಟ್ ಮತ್ತು ಸಿಪಿಐ ನಾಯಕ ಡಿ. ರಾಜಾ ಅವರು ಜನರನ್ನು ಅಭಿನಂದಿಸಿ ಕೈಬೀಸುತ್ತಿರುವುದನ್ನು ಕಾಣಬಹುದು.

ವಿಧವೆಯರಿಂದ ಪೂಜೆ ಶ್ಲಾಘನಾರ್ಹ; ಆದರೆ?

ಮಂಗಳೂರಿನ ಕುದ್ರೋಳಿ ಗೋಕರ್ಣನಾಥ ದೇವಾಲಯದಲ್ಲಿ ಕಳೆದ ಸುಮಾರು 10 ವರ್ಷಗಳಿಂದ ನಡೆಯುತ್ತಿರುವ ನವರಾತ್ರಿ ಉತ್ಸವವು ಮಂಗಳೂರು ದಸರಾ ಎಂದೇ ಪ್ರಸಿದ್ಧವಾಗಿದ್ದು, ನಾಡಿನ ಜನರನ್ನು ಆಕರ್ಷಿಸುತ್ತಿದೆ. ಮಾಜಿ ಕೇಂದ್ರ ಸಚಿವರಾಗಿದ್ದ ಬಿ.ಜನಾರ್ಧನ ಪೂಜಾರಿಯವರ ಮುಂದಾಳ್ತನ ಈ ಪ್ರಸಿದ್ಧಿಗೆ ಕಾರಣವಾಗಿದೆ.

ಕಳೆದೆರಡು ವರ್ಷಗಳಿಂದ ಜನಾರ್ಧನ ಪೂಜಾರಿಯವರು ಆ ದೇವಸ್ಥಾನದಲ್ಲಿ ಮಾಡಿಸುತ್ತಿರುವ ಸಾಮಾಜಿಕ ಸುಧಾರಣೆಗಳಿಂದ ಇನ್ನಷ್ಟು ಕುತೂಹಲ ಎಲ್ಲರಿಗೂ ಉಂಟಾಗಿದೆ. ಕಳೆದ ವರ್ಷದ ನವರಾತ್ರಿ ಸಂದರ್ಭದಲ್ಲಿ ವಿಧವಾ ಮಹಿಳೆಯರಿಗೆ ಅರಸಿನ, ಕುಂಕುಮ, ಹೂ, ಬಳೆ, ಸೀರೆ ನೀಡುವ ಕಾರ್ಯಕ್ರಮ ಏರ್ಪಡಿಸಿದಾಗ ಸಾವಿರ ಮೀರಿ ಸಂಖ್ಯೆಯಲ್ಲಿ ವಿಧವೆಯರು ಈ ಕೊಡುಗೆ ಸ್ವೀಕರಿಸಿದರು. ಅಷ್ಟೇ ಅಲ್ಲ ದೇವಸ್ಥಾನದ ಬೆಳ್ಳಿ ರಥವನ್ನು ವಿಧವಾ ಮಹಿಳೆಯರಿಂದಲೇ ಎಳೆಯಿಸಿದರು. ಎಲ್ಲ ಜಾತಿ ಸಮಾಜಗಳಲ್ಲಿ ಇವತ್ತಿಗೂ ಶುಭ ಸಮಾರಂಭಗಳ ಕೇಂದ್ರದಲ್ಲಿ ವಿಧವೆಯರನ್ನು ಹೊರಗೇ ಇರಿಸುತ್ತಿರುವ ಸಂದರ್ಭಗಳ ಹಿನ್ನೆಲೆಯಲ್ಲಿ ವಿಧವಾ ಮಹಿಳೆಯರನ್ನು ಅಮಂಗಳೆಯರೆಂದು ದೂರ ಮಾಡ ಬೇಡಿ ಎಂದು ಅವರಿಗೆ ಶ್ರದ್ಧಾ ಕೇಂದ್ರವಾದ ದೇವಸ್ಥಾನದಲ್ಲಿ ಕುಂಕುಮ ಹೂ ಬಳೆ ನೀಡಿದ್ದು, ಅವರಿಂದಲೇ ದೇವರ ರಥ ಎಳೆಯಿಸಿದ್ದು ನಿಜವಾಗಿಯೂ ಪುರೋಗಾಮಿ ಸಂಗತಿಗಳೇ.



ಕುದ್ರೋಳಿಯ ಗೋಕರ್ಣನಾಥ ದೇವಸ್ಥಾನದ ನಿರ್ಮಾಣಕ್ಕೂ ಒಂದು ಪ್ರಗತಿಪರ ಹಿನ್ನೆಲೆ ಇದೆ. ಕೇರಳದ ಸಮಾಜ ಸುಧಾರಕರಾದ ನಾರಾಯಣ ಗುರುಗಳು 1913 ರಲ್ಲಿ ನಿರ್ಮಾಣ ಮಾಡಿದ ದೇವಸ್ಥಾನವಿದು. ಪ್ರಾಚೀನವೇನೂ ಅಲ್ಲ. ಕಳೆದ ಶತಮಾನದ ಪ್ರಾರಂಭದಲ್ಲಿ ದಲಿತ ಜಾತಿಗಳವರು ಮಾತ್ರವಲ್ಲ ಇತರ ಕೆಲವು ಜಾತಿಗಳವರೂ ದೇವಸ್ಥಾನಗಳ ಮಟ್ಟಿಗೆ ಅಸ್ಪೃಶ್ಯರಾಗಿದ್ದರು. ದಕ್ಷಿಣ ಕನ್ನಡದ ಬಿಲ್ಲವ ಜಾತಿ ಸಮಾಜವೂ ಅಂತಹದರಲ್ಲೊಂದಾಗಿತ್ತು. 'ಒಂದೇ ಜಾತಿ-ಒಂದೇ ಮತ-ಒಂದೇ ದೇವರು' ಎಂಬ ತತ್ವದೊಂದಿಗೆ ನಾರಾಯಣ ಗುರುಗಳು ಕೆಳ ಜಾತಿಯವರಿಗಾಗಿ ಕೇರಳದಲ್ಲಿ ಅಲ್ಲಲ್ಲಿ ದೇವಸ್ಥಾನಗಳನ್ನು ಸ್ಥಾಪಿಸಿದರು ಮತ್ತು ಆ ಜಾತಿಯವರನ್ನೇ ಆ ದೇವಾಲಯಗಳ ಅರ್ಚಕರನ್ನಾಗಿ ನೇಮಿಸಿದರು. ದಕ್ಷಿಣ ಕನ್ನಡಕ್ಕೆ ಭೇಟಿಯಿತ್ತ ಸಂದರ್ಭದಲ್ಲಿ ಇಲ್ಲೂ ಕೆಳ ಜಾತಿ ಬಿಲ್ಲವರಿಗೆ ದೇವಾಲಯಗಳಲ್ಲಿ ಪ್ರವೇಶವಿಲ್ಲದಿರುವುದು ಅವರ ಗಮನಕ್ಕೆ ಬಂತು. ಆಗಿನ ಇಲ್ಲಿನ ಬಿಲ್ಲವ ಮುಖಂಡರನ್ನು ಮುಂದಿಟ್ಟು ಕುದ್ರೋಳಿಯಲ್ಲಿ ಶಿವಲಿಂಗ ಸ್ಥಾಪಿಸಿ ಗೋಕರ್ಣನಾಥ ದೇವಾಲಯವನ್ನು ನಿರ್ಮಾಣ ಮಾಡಿಸಿದ್ದಲ್ಲದೇ, ಬಿಲ್ಲವ ಜಾತಿಯವರನ್ನೇ ಅರ್ಚಕರನ್ನಾಗಿ ನೇಮಿಸಿದರು. ನಾರಾಯಣ ಗುರುಗಳು ಸ್ಥಾಪಿಸಿದ ದೇವಾಲಯಗಳಲ್ಲಿ ಇಂದಿಗೂ ಕೆಳಜಾತಿಗಳವರೇ ಅರ್ಚಕರಾಗಿ ಮುಂದುವರಿಯುತ್ತಿದ್ದಾರೆ.

ಮಂಗಳೂರಿನಲ್ಲಿ ಗೋಕರ್ಣನಾಥ ದೇವಾಲಯವು ಸ್ಥಾಪಿತವಾಗಿ ಇಷ್ಟು ವರ್ಷಗಳಾದರೂ, ಅದನ್ನು ಜನರು ಬಿಲ್ಲವರ ದೇವಸ್ಥಾನವೆಂದೇ ಗುರುತಿಸಿದರೇ ಹೊರತು ಸಾರ್ವಜನಿಕ ದೇವಾಲಯವಾಗಿ ಪರಿಗಣಿಸಿಲ್ಲ. ಅದೇ ರೀತಿ ನಾರಾಯಣ ಗುರುಗಳೂ ಬಿಲ್ಲವರ ಗುರುಗಳೆಂದೇ ಗುರುತಿಸಲ್ಪಟ್ಟಿದ್ದಾರೆಯೇ ಹೊರತು ಲೋಕಗುರುಗಳು ಎಂದಲ್ಲ; ಬಹುಶ: ಗುರು ಜಯಂತಿಯನ್ನು ತಮ್ಮ ಜಾತಿ ಬಾಂಧವರನ್ನು ಮಾತ್ರ ಇಟ್ಟುಕೊಂಡು ಬಿಲ್ಲವರು ಆರಂಭಿಸಿದುದರಿಂದ ಹಾಗೂ ನಡೆಸುತ್ತಿರುವುದರಿಂದ ಹೀಗಾಗಿರಬೇಕು. ವೈದಿಕ ದೇವಾಲಯಗಳಲ್ಲಿ ಪೂಜೆ, ಹೋಮಾದಿ ಕರ್ಮಗಳಲ್ಲಿ ಬಳಸುವ ಸಂಸ್ಕೃತ ಮಂತ್ರಗಳ ಹಾಗೂ ವಿಧಿಗಳ ಅಧ್ಯಯನವನ್ನು ಮಾಡಿದ ಅರ್ಚಕ (ಇವರನ್ನು ಇಲ್ಲಿ ಶಾಂತಿಗಳೆನ್ನುತ್ತಾರೆ.) ರನ್ನು ಇಲ್ಲಿ ನೇಮಿಸಿಕೊಳ್ಳಲಾಗುತ್ತಿದೆ. ಮೊದಲಲ್ಲಿ ಈ ಅರ್ಚಕರ ತರಬೇತಿಯನ್ನು ಕೇರಳದ ಶಿವಗಿರಿಯಲ್ಲಿ ಪಡೆದು ಬರಲಾಗುತ್ತಿತ್ತು. ಈಗ ಕುದ್ರೋಳಿಯಲ್ಲಿ ಅನುಭವ ಪಡೆದು ಶಾಂತಿಗಳು ಮನೆಒಕ್ಕಲು, ಮದುವೆ, ಮರಣ ಸಂದರ್ಭಗಳಲ್ಲಿ ಸಂಸ್ಕೃತ ಮಂತ್ರಗಳನ್ನು ಬಳಸಿ ಕ್ರಿಯಾಕರ್ಮಾಧಿಗಳನ್ನು ನಡೆಸಿಕೊಡುತ್ತಾರೆ. ಬಿಲ್ಲವರಲ್ಲದೆ ಇತರರೂ ತಮ್ಮ ಮನೆ ಕಾರ್ಯಕ್ಕೆ ಇವರನ್ನು ಕರೆಸಿಕೊಳ್ಳುವುದುಂಟು. ಹಾಗಿದ್ದೂ ಮಂಗಳೂರು ದಸರಾ ಹಬ್ಬವನ್ನು ಹಮ್ಮಿಕೊಂಡ ಮೇಲೆ ಈ ದೇವಾಲಯಕ್ಕೆ ಸಾರ್ವಜನಿಕ ದೇವಾಲಯದ ಸ್ವರೂಪ ಬಂದಿದೆ. ಆದರೂ ಜಿಲ್ಲೆಯ ಬ್ರಾಹ್ಮಣರು ನವರಾತ್ರಿಗೆ ಮಂಗಳಾದೇವಿಗೆ ಹೋಗುತ್ತಾರೆಯೇ ಹೊರತು ಕುದ್ರೋಳಿಗಲ್ಲ. ಶೂದ್ರರು ನಡೆಸುವ ಪೂಜೆ ಅವರಿಗೆ ಒಪ್ಪಿತವಲ್ಲ ಎಂದು ಅರ್ಥ ಅಲ್ಲವೇ?

ಜನಾರ್ಧನ ಪೂಜಾರಿಯವರು ಕಳೆದ ವರ್ಷ ವಿಧವೆಯರಿಗೆ ಅರಸಿನ ಕುಂಕುಮ ಕೊಡಿಸಿದಾಗ ಅವರಿಂದಲೇ ರಥ ಎಳೆಸಿದಾಗ ಆ ಬಗ್ಗೆ ಕೊಂಕು ನುಡಿದವರು ಹಲವರಿದ್ದರು.



ವಾ. ಉ.

ಆದರೆ ಬಹಿರಂಗವಾಗಿ ಯಾರೂ ವಿರೋಧಿಸಿಲ್ಲ. ಸಂಪ್ರದಾಯ ಹಾಳಾಗುತ್ತದೆ ಎಂದು ಪತ್ರಿಕೆ ಮಾಧ್ಯಮಗಳಲ್ಲಿ ಅಷ್ಟಿಷ್ಟು ಹಲುಬಿದರು. ಆ ನಿಟ್ಟಿನಲ್ಲಿ ವಿಧವೆಯರಿಗೆ ಜನಾರ್ಧನ ಪೂಜಾರಿಯವರು ಒಂದು ಮಾನ್ಯತೆ ತಂದರೆಂದೇ ಹೇಳಬೇಕು. ಈ ವರ್ಷ ಇನ್ನೂ ಮುಂದಕ್ಕೆ ಹೋಗಿ ನವರಾತ್ರಿಯ ಮುನ್ನಾ ದಿನ ಎರಡು ಮಂದಿ ವಿಧವಾ ಅರ್ಚಕಿಯರನ್ನು ನೇಮಕ ಮಾಡಿದ್ದಾರೆ. ಅವರುಗಳ ದೇವರ ಗರ್ಭಗುಡಿ ಪ್ರವೇಶ ಸಂಭ್ರಮದಿಂದ ನೆರವೇರಿತು. ಅದರ ಜೊತೆಗೆ ಹೊಸತಾಗಿ ನಿರ್ಮಿತವಾಗಿದ್ದ ಶಿರ್ಡಿ ಸಾಯಿ ಬಾಬಾ ಮೂರ್ತಿಯನ್ನು ವಿಧವಾ ಸ್ತ್ರೀಯೊಬ್ಬರು ಅನಾವರಣ ಮಾಡಿದರು. ಬೇರೆ ಯಾವ ದೇವಾಲಯದಲ್ಲೂ ಬಹುಶ: ಸ್ತ್ರೀಯರಿಗೆ ಪ್ರವೇಶವಿಲ್ಲ. (ಕನ್ನಡ ಚಲನಚಿತ್ರ ತಾರೆ ಜಯಮಾಲಾ ಶಬರಿಮಲೆ ದೇವಾಲಯದ ದೇವಿ ವಿಗ್ರಹವನ್ನು ಹತ್ತಿರದಿಂದ ಸ್ಪರ್ಶಿಸಿದ ಬಗ್ಗೆ ಒಂದು ಗಲಾಟೆಯೇ ನಡೆದ ಬಗ್ಗೆ ವರದಿಯಾಗಿದೆಯಷ್ಟೇ.) ಅಂಥದರಲ್ಲಿ ವಿಧವಾ ಸ್ತ್ರೀಯರನ್ನು ದೇವರ ನಿತ್ಯ ಪೂಜೆಗೆ ನೇಮಿಸಿದ್ದು ನಿಜವಾಗಿಯೂ ಕ್ರಾಂತಿಕಾರಿಯಾದ ಸಂಗತಿ. ಅದರಲ್ಲೂ ದೇವಾಲಯದ ಆಡಳಿತ ಮಂಡಳಿಯವರನ್ನೂ ಭಕ್ತವೃಂದದ ಸ್ವಜಾತಿ ಬಿಲ್ಲವರನ್ನು ಒಪ್ಪಿಸಲು ಸಾಧ್ಯವಾದದ್ದು ಅವರ ಹೆಗ್ಗಳಿಕೆ.

ಕುದ್ರೋಳಿ ದೇವಸ್ಥಾನದಲ್ಲಿ ಇನ್ನೂ ಕೆಲವು ಅಚ್ಚರಿಯ ಸಂಗತಿಗಳಿಗೆ ಜನಾರ್ಧನ ಪೂಜಾರಿಯವರು ಎಡೆ ಮಾಡಿ ಕೊಟ್ಟಿದ್ದಾರೆ. ಮುಟ್ಟು, ಮೈಲಿಗೆ ಸೂತಕದ ನಿಷೇಧವಿಲ್ಲದೆ ಮಹಿಳೆಯರಿಗೆ ಈ ದೇವಸ್ಥಾನ ಪ್ರವೇಶ ಮಾಡಬಹುದಾಗಿದೆ. ಮುಂದೆ ದೇವಾಲಯದಲ್ಲಿ ದಲಿತರಿಗೂ ಪೂಜೆಗೆ ಅವಕಾಶ ಮಾಡಿಕೊಡುವುದಾಗಿ ಅವರು ಹೇಳಿದ್ದಾರೆ. ಮಾನವರಲ್ಲಿ ಮೇಲು-ಕೀಳು, ಮಡಿ-ಮೈಲಿಗೆ ಎಂಬುದಿಲ್ಲ ಎಂಬ ನಾರಾಯಣ ಗುರುಗಳ ತತ್ವವನ್ನು ಆಚರಣೆಗೆ ತರಲು ಕುದ್ರೋಳಿ ದೇವಸ್ಥಾನದಲ್ಲಿ ಪ್ರಯತ್ನಿಸಲಾಗಿದೆ.


ಕಾಂಗ್ರೆಸ್ ಪಕ್ಷದ ರಾಜಕಾರಣದಲ್ಲಿ ಸಕ್ರಿಯರಾಗಿರುವ ಬಿ.ಜನಾರ್ಧನ ಪೂಜಾರಿಯವರು ತಮ್ಮ ಚಿತ್ರ ವಿಚಿತ್ರ ನಡವಳಿಕೆಗಳಿಗೆ ಹೆಸರಾದವರು. ಇಷ್ಟು ವರ್ಷಗಳ ರಾಜಕಾರಣ ಮಾಡಿಯೂ ಅವರು ದುಡ್ಡು ಮಾಡಿಕೊಂಡರೆಂಬ ದೂರು ಕೇಳಿ ಬಂದಿಲ್ಲ. ಕಾಂಗ್ರೆಸ್ ಪಕ್ಷಕ್ಕೆ ಮಾತ್ರವಲ್ಲ, ಇಂದಿರಾಗಾಂಧಿ ಕುಟುಂಬಕ್ಕೇ ಅವರದು ವಿಶೇಷ ನಿಷ್ಠೆ. ಕರಾವಳಿಯಲ್ಲಿ ಕಾಂಗ್ರೆಸಿಗೆ ನಿಜವಾದ ವಿರೋಧಿಗಳಾದ ಆರೆಸ್ಸೆಸ್ಸನ್ನು ತೀವ್ರವಾಗಿ ವಿರೋಧಿಸುವವರು. ಮುಸ್ಲಿಂ ಸಮುದಾಯದೊಂದಿಗೆ ಹೆಚ್ಚಿನ ಕಾಂಗ್ರೆಸಿಗರಿಗಿಂತ ಹೆಚ್ಚಿಗೆ ಒಡನಾಟ ಇಟ್ಟುಕೊಂಡವರು. ಆಗೀಗ ಉಳ್ಳಾಲದ ಮಸೀದಿಗೆ ಭೇಟಿ ನೀಡಿ ಪ್ರಚಾರ ಪಡೆಯುವವರು. ಮಂಗಳೂರಿನಲ್ಲಿ ಎಲ್ಲ ಧಾರ್ಮಿಕ ಹಾಗೂ ದೇವಾಲಯದ ಉತ್ಸವಗಳಲ್ಲಿ ಕೇಸರಿ ಬಾವುಟಗಳೇ ಹಾರಾಡುತ್ತಿದ್ದರೆ, ಮಂಗಳೂರಿ[illegible] ನಡೆಯುತ್ತಿರುವ ಮಂಗಳೂರು ದಸರಾ ಅಲಂಕಾರಗಳಲ್ಲಿ ತಪ್ಪಿಯೂ ಕೇಸರಿ ಬಾವುಟ ಹಾರಕೂಡದೆಂದು ಎಚ್ಚರ ವಹಿಸಿ ಹಳದಿ ಬಾವುಟಗಳನ್ನೇ ಹಾರಿಸುವವರು. ಕುದ್ರೋಳಿ ದೇವಾಲಯದ ಉತ್ಸವವೊಂದಕ್ಕೆ ಕ್ರೈಸ್ತರಾದ ಸೋನಿಯಾ ಗಾಂಧಿಯನ್ನೇ ಅತಿಥಿಯಾಗಿ ಆಹ್ವಾನಿಸಿದವರು.

ಇಷ್ಟಾಗಿಯೂ ಅವರಲ್ಲಿ ಕೆಲವು ತಾತ್ವಿಕ ಗೊಂದಲಗಳಿವೆ. ಬಹುಶ: ಹಾಗಾಗಿಯೇ ಅವು ಕಾರ್ಯ ರೂಪದಲ್ಲಿ ಬಂದಾಗ, ಅದರಲ್ಲಿ ದ್ವಿಮುಖತೆ ಕಾಣುತ್ತದೆ. ಕುದ್ರೋಳಿಯಲ್ಲಿ ಇವತ್ತಿಗೂ ಶೂದ್ರ ಅರ್ಚಕರನ್ನೇ ಇಟ್ಟುಕೊಂಡಿದ್ದರೂ ನವೀಕೃತ ಗೋಕರ್ಣನಾಥ ದೇವಸ್ಥಾನದ ಪುನರ್ಪ್ರತಿಷ್ಠೆ ನಡೆಸಿದಾಗ, ಶೃಂಗೇರಿ ಶಂಕರ ಪೀಠದ ಸ್ವಾಮಿಗಳವರನ್ನು ಪ್ರತಿಷ್ಠಾ ಕಾರ್ಯ ನೆರವೇರಿಸಲು ಆಹ್ವಾನಿಸಿದ್ದರು. ಅದು ಅವರು ಎತ್ತಿ ಹೇಳುವ ನಾರಾಯಣ ಗುರುಗಳ ತತ್ವಗಳಿಗೂ ವಿರುದ್ಧವಾಗಿತ್ತು. ಧರ್ಮಸ್ಥಳದಲ್ಲಿ ಸೌಜನ್ಯಾ ಎ[illegible] ಬಡ ಕುಟುಂಬದ ವಿದ್ಯಾರ್ಥಿನಿ ಅಲ್ಲಿನ ಕ್ಷೇತ್ರಾಧಿಕಾರಿಗಳ ಸಮೀಪಸ್ಥರಿಂದ ಅತ್ಯಾಚಾರ ಹಾಗೂ ಕೊಲೆಗೆ ಈಡಾಗಿದ್ದಾರೆಂದು ಪ್ರಗತಿಪರ ಸಂಘಟನೆಗಳು ಪ್ರತಿಭಟನೆಗಳನ್ನು ತೀವ್ರವಾಗಿ ನಡೆಸುತ್ತಿರುವ ಸಂದರ್ಭದಲ್ಲೇ, ಜನಾರ್ಧನ ಪೂಜಾರಿಯವರು ಅವರನ್ನು ನವರಾತ್ರಿ ಹಬ್ಬಕ್ಕೆ ಆಹ್ವಾನಿಸಿ ಗೌರವಿಸಿದ್ದರು. ಅವರನ್ನು ನಡೆದಾಡುವ ದೇವರೆಂದು ಹೊಗಳಿದರು. ಜೈನ ಸಮುದಾಯದ ಧನಂಜಯ ಕುಮಾರ್ ಅವರು ಪ್ರಥಮ ಬಾರಿ ಬಿಜೆಪಿ ಅಭ್ಯರ್ಥಿಯಾಗಿ ಜನಾರ್ಧನ ಪೂಜಾರಿಯವರ ವಿರುದ್ಧ ಮಂಗಳೂರು ಲೋಕಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿದಾಗ ಪೂಜಾರಿಯವರು ಶ್ರೀ ಕ್ಷೇತ್ರ ಧರ್ಮಸ್ಥಳದ ವಿರುದ್ಧ ಕೆಟ್ಟದಾಗಿ ಮಾತನಾಡಿದ್ದಾರೆ ಎಂದು ಇದೇ ಧರ್ಮಸ್ಥಳದವರು ಹುಯಿಲೆ[illegible] ಪೂಜಾರಿ ಸೋಲುವಂತೆ ಮಾಡಿ ಜೈನರಾದ ಧನಂಜಯ ಕುಮಾರ್‌ರನ್ನು ಗೆಲ್ಲಿಸಿದ್ದರು.

ಬದುಕುವ ಹಕ್ಕಿಗಾಗಿ ಆದಿವಾಸಿಗಳ ರಾಜ್ಯ ಸಮಾವೇಶ : ಸ್ವಾಗತ ಸಮಿತಿ ರಚನೆ


ಕರ್ನಾಟಕದಲ್ಲಿಯ ಆದಿವಾಸಿ-ಬುಡಕಟ್ಟು ಜನರನ್ನು ಸಂಘಟಿಸುವ ದಿಸೆಯಲ್ಲಿ ರಾಜ್ಯ ಸಮಾವೇಶವನ್ನು ನಡೆಸಲು ಸಿದ್ಧತೆಗಳು ಆರಂಭಗೊಂಡಿವೆ. ಇತ್ತೀಚೆಗಿನ ಕೆಲವು ವರುಷಗಳಿಂದ ಅವರನ್ನು ಸಂಘಟಿಸಲು ತೊಡಗಿರುವ ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ನೇತೃತ್ವದಲ್ಲಿ ಈ ಸಮಾವೇಶ 2013 ಡಿಶೆಂಬರ್ 20 ಮತ್ತು 21 ರಂದು ಕೊಡಗು ಜಿಲ್ಲೆಯ ಮಡಿಕೇರಿ ಪಟ್ಟಣದಲ್ಲಿ ಜರುಗಲಿದೆ.

ಇದನ್ನು ಯಶಸ್ವಿಗೊಳಿಸಲು ಇದೇ ಅಕ್ಟೋಬರ್ 6ರಂದು ಮಡಿಕೇರಿ ಬಾಲ ಭವನದಲ್ಲಿ ಸ್ವಾಗತ ಸಮಿತಿ ರಚಿಸಲು ವಿಶಾಲವಾದ ಸಭೆಯು ಜರುಗಿತು. ಇದರಲ್ಲಿ



ಹಲವಾರು ಪ್ರಗತಿಪರ ಚಿಂತಕರು, ಸಾಮಾಜಿಕ ಕಾರ್ಯಕರ್ತರು, ವಿವಿಧ ಸಂಘಟನೆಗಳ ಪ್ರಮುಖರು, ಆದಿವಾಸಿ ಮುಖಂಡರು, ಸಂಘದ ಕಾರ್ಯಕರ್ತರು, ಮುಂತಾಗಿ ಭಾಗವಹಿಸಿದ್ದರು. ರಾಜ್ಯ ಸಮಿತಿಯಿಂದ ಎಸ್. ವೈ.ಗುರುಶಾಂತ್ ಭಾಗವಹಿಸಿದ್ದರು.

ರಾಜ್ಯದಲ್ಲಿ ಮತ್ತು ಜಿಲ್ಲೆಯಲ್ಲಿನ ಆದಿವಾಸಿ-ಬುಡಕಟ್ಟು ಜನಗಳ ಸ್ಥಿತಿ-ಗತಿಗಳು, ಸಮಸ್ಯೆಗಳು ಮುಂತಾಗಿ ಅಲ್ಲಿ ಮಾತನಾಡಿದ ಪ್ರಮುಖರು ಪ್ರಸ್ತಾಪಿಸಿದರು. ಅತ್ಯಂತ ಶೋಷಣೆಗೀಡಾಗಿರುವ ಈ ಸಮುದಾಯವನ್ನು ಸಂಘಟಿಸಲು ನಡೆಯುವ ಈ ಸಮಾವೇಶವನ್ನು ಯಶಸ್ವಿಗೊಳಿಸಲು ತೊಡಗುವುದಾಗಿ ಅಲ್ಲಿದ್ದವರು ತಿಳಿಸಿದರು. ನಂತರ ಸ್ವಾಗತ ಸಮಿತಿಯನ್ನು ರಚಿಸಲಾಯಿತು.



ಅದ್ಯಕ್ಷರಾಗಿ ಚಿಂತಕ, ಕಾರ್ಮಿಕ ನಾಯಕ ಡಾ. ಐ.ಆರ್.ದುರ್ಗಾಪ್ರಸಾದ್, ಗೌರವ ಅದ್ಯಕ್ಷರಾಗಿ ಸಾಮಾಜಿಕ ಕಾರ್ಯಕರ್ತರು, ನಗರಸಭೆ ಸದಸ್ಯರಾದ ಶ್ರೀ ಬೇಬಿ ಮ್ಯಾಥ್ಯೂ), ಕಾರ್ಯಾಧ್ಯಕ್ಷರಾಗಿ ಬರಹಗಾರ, ಹಿರಿಯ ವಕೀಲರಾದ -ಶ್ರೀ ವಿದ್ಯಾಧರ, ಉಪಾಧ್ಯಕ್ಷರು-ಕಾಂ. ಮಹದೇವ, ಮತ್ತು ವಿವಿಧ ಸಂಘಟನೆಗಳ ಅದ್ಯಕ್ಷರು ಪ್ರದಾನ ಕಾರ್ಯದರ್ಶಿ-ಕಾಂ. ಕಿಶೋರ್ ಕುಟ್ಟಪ್ಪ, ಸಂಘಟನಾ ಕಾರ್ಯದರ್ಶಿ-ಕಾಂ.ವೈ.ಕೆ.ಗಣೇಶ್, ಕಾರ್ಯದರ್ಶಿಗಳು-ಕಾಂ.ಭರತ್ ಮತ್ತು ವಿವಿಧ ಸಂಘಟನೆಗಳ ಕಾರ್ಯದರ್ಶಿಗಳು

ಮೂಡಬಿದ್ರಿ ವಲಯ ಮಟ್ಟದ ಯುವ ಜನ ಸಮಾವೇಶ

ದಿನಾಂಕ 06-10-2013 ರಂದು ಸಿಐಟಿಯು ಕಛೇರಿಯಲ್ಲಿ ನಡೆಯಿತು. ಶಿಕ್ಷಣ, ಆರೋಗ್ಯ, ನೀರು ಮಾರಾಟದ ಸರಕಾಗುತ್ತಿದೆ. ಸ್ವಾತಂತ್ರ್ಯ ಹೋರಾಟದ ಆಶಯಗಳಿಗೆ ವಿರುದ್ಧವಾಗಿ ಆಳುವ ಸರ್ಕಾರಗಳು ಜನ ವಿರೋಧಿ ನೀತಿಗಳನ್ನು ಜಾರಿಗೆ ತರುತ್ತಿವೆ. ಸರ್ಕಾರದ ನೀತಿಗಳಿಂದ ಸಂಕಷ್ಟಕ್ಕೆ ಗುರಿಯಾಗಿರುವ ಜನ ಸಾಮಾನ್ಯರನ್ನು ಮತೀಯ ಶಕ್ತಿಗಳು ದುರುಪಯೋಗ ಪಡಿಸುವ ಮೂಲಕ ಅವರನ್ನು ದಾರಿ ತಪ್ಪಿಸುತ್ತಿದೆ. ಇಂತಹ ಸಂದರ್ಭದಲ್ಲಿ ಡಿ.ವೈ.ಎಫ್.ಐ. ಸಂಘಟನೆಯ ಕಾರ್ಯಕರ್ತರು ಜನತೆಯ ಸಂಕಷ್ಟಗಳಿಗೆ ಧ್ವನಿಯಾಗುವ ಪ್ರಯತ್ನ ಮಾಡಬೇಕು. ಎಂದು ಡಿ.ವೈ.ಎಫ್.ಐ. ಜಿಲ್ಲಾಧ್ಯಕ್ಷ ಮುನೀರ್ ಕಾಟಿಪಳ್ಳ ಕರೆ ನೀಡಿದರು.

ಅವರು ಮೂಡಬಿದ್ರಿಯಲ್ಲಿ ನಡೆದ ಡಿ.ವೈ. ಎಫ್.ಐ ನ ವಲಯ ಸಮಾವೇಶವನ್ನು ಉದ್ಘಾಟಿಸಿ ಮಾತಾಡಿದರು. ಪುರಸಭಾ ಸದಸ್ಯೆ ರಮಣಿ ಡಿ.ವೈ.ಎಫ್.ಐ ಮುಖಂಡರಾದ ಅಬೂಬಕ್ಕರ್ ಮಾತಾಡಿದರು. ಡಿ.ವೈ.ಎಫ್.ಐ ಮೂಡಬಿದ್ರಿ ವಲಯ ಕಾರ್ಯದರ್ಶಿ ಶಂಕರ ವಾಲ್ಪಡಿ, ತಸ್ರೀಫ್, ಕೃಷ್ಣಪ್ಪ ಕೆಸರುಗದ್ದೆ, ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸೀತರಾಮ ಶೆಟ್ಟಿಯವರು ಅಧ್ಯಕ್ಷತೆ ವಹಿಸಿದರು. ವಿಜಯ ಅಳಿಯೂರು ವರದಿ ಮಂಡಿಸಿದರು.

–ಶಂಕರ



ಇಷ್ಟೇನಾ . . . ?

ಕವನ

ಇಷ್ಟೇನಾ . . . ಇಷ್ಟೇನಾ . . . ಹೆಮ್ಮೆಯ ಭಾರತ ಇಷ್ಟೇನಾ . . .?
ಕೊಲೆಯಾಗಿರುವಳು ಸೌಜನ್ಯ, ಸಾವಿನ ತನಿಖೆ ಇಷ್ಟೇನಾ . . .?

ದೇವರ ನಾಡು ಧರ್ಮದ ಬೀಡಲಿ ದೇವರ ಮಹಿಮೆ ಇಷ್ಟೇನಾ . . .?
ಭಾರತಾಂಭೆಯ ನ್ಯಾಯ ಪೀಠದಿ ನ್ಯಾಯಕ್ಕೇ ಬೆಲೆ ಇಷ್ಟೇನಾ . . .?
ಮಾತೆ ದೇವತೆ ವರ್ಣನೆಯೆಲ್ಲಾ ಕೇವಲ ಬಾಯಲ್ಲಷ್ಟೇನಾ . . .?
ಕುರಿಗಳ ಕಾಯುವ ತೋಳದ ನೆರಳಲಿ ಜೀವಕ್ಕೆ ಬೆಲೆ ಇಷ್ಟೇನಾ . . .? ॥ ಇಷ್ಟೇನಾ . . .?॥

ಹಾಡು ಹಗಲಲೇ ಹಸುಳೆಯ ಕೊಂದರೂ ಆಗುವ ತನಿಖೆ ಇಷ್ಟೇನಾ . . .?
ಸ್ವತಂತ್ರ ದೇಶದ ಸಂವಿಧಾನಕೆ ಇರುವ ತಾಕತ್ತು ಇಷ್ಟೇನಾ . . .?
ಪುಣ್ಯ ಭೂಮಿಯಲಿ ಪೂಜ್ಯ ಮಹಿಳೆಗೆ ಆಸ್ತಿಯು ಕಣ್ಣೀರಷ್ಟೇನಾ . . .?
ಗೋಮುಖ ವ್ಯಾಘ್ರರ ಅಬ್ಬರದಲ್ಲಿ ನಿಜ ಗುಂಡಿಗೆಯವರಿಷ್ಟೇನಾ. . .? ॥ ಇಷ್ಟೇನಾ . . .?॥

ಆಳುವಂತಹ ಸರಕಾರಗಳ ಕರ್ತವ್ಯಗಳೂ ಇಷ್ಟೇನಾ . . .?
ಓಟಲಿ ಗೆದ್ದ ಜನಪ್ರತಿನಿಧಿಗಳ ಧರ್ಮೇ ಇರುವುದು ಇಷ್ಟೇನಾ . . .?
ರಕ್ಷಣೆಗಿರುವ ಆರಕ್ಷಕರು ಧನಿಕರ ರಕ್ಷಣೆಗಷ್ಟೇನಾ . . .?
ಮುಚ್ಚಿದ ಸತ್ಯವ ಬಿಚ್ಚಿಡುವಲ್ಲಿ ಮಾಧ್ಯಮಗಳ ನಡೆ ಇಷ್ಟೇನಾ . . .? ॥ ಇಷ್ಟೇನಾ . . .?॥

ಜಾತಿ ಕೂಟಗಳ ಧರ್ಮ ಪೀಠಗಳ ನ್ಯಾಯದ ಬಯಕೆ ಇಷ್ಟೇನಾ . . .?
ರಾಜಕೀಯದಾ ಬಡವರ ತುಡಿತ ಓಟಿನ ಸಮಯದಲ್ಲಷ್ಟೇನಾ . . .?
ನ್ಯಾಯದ ಬದಲು ಕೊಲೆಗೈದವರ ಜೇಬಿನ ದುಡ್ಡೇ ಇಷ್ಟಾನಾ . . .?
ರಾಮ-ಗಾಂಧಿಯರ ಆದರ್ಶಗಳಿಗೆ ಕೊಡುವಾ ಬದ್ಧತೆ ಇಷ್ಟೇನಾ . . .? ॥ ಇಷ್ಟೇನಾ . ..?॥

ನಾಗರಿಕತೆಯ ಮಾನವಂತರ ಮಾನವೀಯತೆ ಇಷ್ಟೇನಾ . . .?
ದಬ್ಬಾಳಿಕೆಯಡಿ ಹೇಡಿಗಳಾಗಿ ಬದುಕುವುದೆಂದರೆ ಇಷ್ಟಾನಾ . . .?
ಸೌಜನ್ಯ ಬಲಿ ನಿನ್ನೆಯಾದರೆ ನಾಳೆ ನಿಮ್ಮ ಮಗಳ ಬಲಿ ಇಷ್ಟಾನಾ. . .?
ದಾಳಿ ತಡೆಯಲು ನ್ಯಾಯ ಪಡೆಯಲು ನಾವೊಟ್ಟಾದರೆ ಕಷ್ಟಾನಾ . . .? ॥
ಕಷ್ಟಾನಾ ಕಷ್ಟಾನಾ ನಾವೊಟ್ಟಾದರೆ ಕಷ್ಟಾನಾ . . .?॥ 2 ॥


ಸರ್ವ ಸಮತೆಯ ಶಾಂತಿ ನೆಮ್ಮದಿಯ ಹೆಮ್ಮೆಯ ಭಾರತ ಕಟ್ಟೋಣ.
ಕಟ್ಟೋಣ ಕಟ್ಟೋಣ ಹೆಮ್ಮೆಯ ಭಾರತ ಕಟ್ಟೋಣ

— ಶ್ಯಾಮರಾಜ

ಹೊರಗುತ್ತಿಗೆ ಪದ್ಧತಿಯನ್ನು ಕೈಬಿಟ್ಟು ಸೇವೆಯನ್ನು ಖಾಯಂಗೊಳಿಸಲು ಆಗ್ರಹಿಸಿ

ಅಕ್ಟೋಬರ್ 22, 2013 ರಂದು


ಬೆಂಗಳೂರಿನಲ್ಲಿ ಹಾಸ್ಟೆಲ್ ಮತ್ತು ವಸತಿ ಶಾಲಾ ಹೊರಗುತ್ತಿಗೆ ನೌಕರರ ರಾಜ್ಯ ಮಟ್ಟದ ರ್‍ಯಾಲಿ



ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ಅಡಿಯಲ್ಲಿ ಇರುವ ಎಸ್.ಸಿ./ಎಸ್.ಟಿ, ಬಿ.ಸಿ.ಎಂ. ಹಾಸ್ಟೆಲ್ (ವಿದ್ಯಾರ್ಥಿ ನಿಲಯ)ಗಳಲ್ಲಿ ಮತ್ತು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆ ನಡೆಸುತ್ತಿರುವ ಮೊರಾರ್ಜಿ ದೇಸಾಯಿ, ಕಿತ್ತೂರು ಚೆನ್ನಮ್ಮ ಮೊದಲಾದ ವಸತಿ ಶಾಲೆಗಳಲ್ಲಿ ಕಳೆದ ಹತ್ತಾರು ವರ್ಷಗಳಿಂದ ಅಡುಗೆ, ಸಫಾಯಿ, ಕಾವಲು ಮುಂತಾದ ಕೆಲಸಗಳನ್ನು ಮಾಡುತ್ತಿರುವ ನೌಕರರು ಗುತ್ತಿಗೆ, ಹೊರ ಗುತ್ತಿಗೆ ನೌಕರರಾಗಿ ದುಡಿಯುತ್ತಿದ್ದಾರೆ. ಖಾಯಂ ಸ್ವರೂಪದ ಕೆಲಸಕ್ಕಾಗಿ ಅವರನ್ನು ನಿಯೋಜಿಸಲಾಗಿದ್ದರೂ ಅವರ ಸೇವೆಯನ್ನು ಖಾಯಂಗೊಳಿಸಿ, ಅವರಿಗೆ ಕಾನೂನುಬದ್ಧ ವೇತನವನ್ನು ಮತ್ತು ಇತರ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ನೀಡಲಾಗುತ್ತಿಲ್ಲ. ಹಿಂದೆ ಅವರು ಇಲಾಖೆಯ ದಿನಗೂಲಿ ನೌಕರರಾಗಿ ದುಡಿಯುತ್ತಿದ್ದರು. ಮತ್ತು ಇಲಾಖೆಯಿಂದ ನೇರವಾಗಿ ವೇತನವನ್ನು ಪಡೆಯುತ್ತಿದ್ದರು. ಈಗ ಇವರನ್ನೆಲ್ಲಾ ಗುತ್ತಿಗೆದಾರರಿಗೆ ಒಪ್ಪಿಸಲಾಗಿದ್ದು ಗುತ್ತಿಗೆದಾರರು ಟೆಂಡರ್ ಮೂಲಕ ನೌಕರರನ್ನು ಪೂರೈಸುವ, ಅವರಿಗೆ ಸರ್ಕಾರ ನಿಗದಿ ಪಡಿಸಿದ ವೇತನವನ್ನು ನೀಡುವ ಷರತ್ತುಗಳಿಗೆ ಒಪ್ಪಿಗೆ ನೀಡಿರುತ್ತಾರೆ.

ಆದರೆ, ಗುತ್ತಿಗೆದಾರರು ನೌಕರರಿಗೆ ಸರ್ಕಾರ ನಿಗದಿಪಡಿಸಿದ ಕನಿಷ್ಠ ಕೂಲಿಯನ್ನು ಸಹ ಕೊಡುವುದಿಲ್ಲ. ಇವರು ಇಲಾಖೆಯಿಂದಲೂ ಕಮಿಶನ್ ಪಡೆಯುತ್ತಾರೆ; ಇತ್ತ ನೌಕರರ ಸಂಬಳದಿಂದಲೂ ಕಡಿತ ಮಾಡಿ ತಮ್ಮ ಜೇಬು ತುಂಬಿಸಿಕೊಳ್ಳುತ್ತಾರೆ. ಪ್ರತಿ ತಿಂಗಳು 5ನೇ ತಾರೀಖಿನೊಳಗಾಗಿ ವೇತನ ಪಾವತಿ ಮಾಡುವ ಷರತ್ತನು ಒಪ್ಪಿ ಗುತ್ತಿಗೆ ಹಿಡಿಯುವ ಈ ಗುತ್ತಿಗೆದಾರರು ನೌಕರರಿಗೆ ತಿಂಗಳುಗಟ್ಟಲೆ ವೇತನ ಪಾವತಿ ಮಾಡದೆ ಸತಾಯಿಸುತ್ತಾರೆ. ನೌಕರರ ವೇತನದಿಂದ ಕಡಿತ ಮಾಡುವ ಪಿ.ಎಫ್. ಮತ್ತು ಇ.ಎಸ್.ಐ. ವಂತಿಗಿಯನ್ನು ಸಂಬಂಧಪಟ್ಟ ಇಲಾಖೆಗಳಲ್ಲಿ ನೌಕರರ ವ್ಯಕ್ತಿಗತ ಖಾತೆಗಳಿಗೆ ಜಮಾ ಮಾಡದೆ ಮೋಸ ಮಾಡುತ್ತಾರೆ, ವಾರದ ರಜೆ, ರಾಷ್ಟ್ರೀಯ ಹಬ್ಬಗಳ ರಜಾ ಸಂಬಳ, ಮಹಿಳಾ ನೌಕರರಿಗೆ ಹೆರಿಗೆ ರಜಾ ಮತ್ತು ಹೆರಿಗೆ ರಜಾ ಸಂಬಳ ಮುಂತಾದ ಕನಿಷ್ಠ ಕಾರ್ಮಿಕ ಕಾನೂನುಗಳನ್ನು ಜಾರಿಮಾಡದೆ ಅನ್ಯಾಯ ಮಾಡಲಾಗುತ್ತದೆ.

ಹಾಸ್ಟೆಲ್ ಹಾಗೂ ವಸತಿ ಶಾಲಾ ಹೊರಗುತ್ತಿಗೆ ನೌಕರರೇ ಹೆಚ್ಚಿನ ಕೆಲಸ ಮಾಡುತ್ತಾರೆ. ಆದರೆ ಅವರಿಗೆ ಸರಿಯಾದ ಸಂಬಳ ಮತ್ತು ಇತರ ಕಾನೂನುಬದ್ಧ ಸೌಲಭ್ಯಗಳನ್ನು ನೀಡದೆ ಇರುವುದರಿಂದ ಹಾಸ್ಟೆಲ್ ವಿದ್ಯಾರ್ಥಿಗಳೂ ತೊಂದರೆ ಅನುಭವಿಸುತ್ತಿರುತ್ತಾರೆ. ಹೊರಗುತ್ತಿಗೆ ನೌಕರರ ಸಮಸ್ಯೆಗಳತ್ತ ಸರ್ಕಾರದ ಗಮನ ಸೆಳೆಯಲು 2012 ಡಿಸೆಂಬರ್‌ನಲ್ಲಿ ಮತ್ತು 2013 ಜೂನ್ ತಿಂಗಳಲ್ಲಿ ಎರಡು ಬಾರಿ ರಾಜ್ಯಮಟ್ಟದ ರ್‍ಯಾಲಿಗಳನ್ನು ನಡೆಸಲಾಗಿದೆ. ಸಮಾಜ ಕಲ್ಯಾಣ ಇಲಾಖೆಯ ಓಲಯ ಅಧಿಕಾರಿಗಳೊಂದಿಗೆ ಎರಡು ಬಾರಿ ಸಮಸ್ಯೆಗಳ ಕುರಿತು ಚರ್ಚೆ ಮಾಡಲಾಗಿದೆ. ಹೊರಗುತ್ತಿಗೆ ಪದ್ಧತಿ ಇರುವವರೆಗೂ ಹಾಸ್ಟೆಲ್ ಹಾಗೂ ಶಾಲಾ ಹೊರಗುತ್ತಿಗೆ ನೌಕರರಿಗೆ ನ್ಯಾಯ ಸಿಗಲಾರದು. ಆದ್ದರಿಂದ ಹೊರಗುತ್ತಿಗೆ ಪದ್ಧತಿಯನ್ನು ಕೈಬಿಟ್ಟು ಎಲ್ಲ ಹೊರಗುತ್ತಿಗೆ ನೌಕರರ ಸೇವೆಯನ್ನು ಖಾಯಂಗೊಳಿಸಬೇಕೆಂದು ಒತ್ತಾಯಿಸಲು, ಇದೇ 22.10.2013ರಂದು ಬೆಂಗಳೂರಿನಲ್ಲಿ ಬೃಹತ್ ರ್‍ಯಾಲಿಯನ್ನು ಎರ್ಪಡಿಸಲಾಗಿದೆ.



ಅಂದು ಬೆಳಿಗ್ಗೆ 11:30 ಗಂಟೆಗೆ ನಗರ ರೈಲು ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ಬೃಹತ್ ಮೆರವಣಿಗೆ ನಡೆಯಲಿದೆ. ನೌಕರರ ಬೇಡಿಕೆ ಪತ್ರವನ್ನು ಸ್ವೀಕರಿಸಲು ಸಮಾಜ ಕಲ್ಯಾಣ ಇಲಾಖೆಯ ಸಚಿವರಾದ ಶ್ರೀ ಹೆಚ್. ಆಂಜನೇಯರವರನ್ನು ಆಮಂತ್ರಿಸಲಾಗಿದೆ.

ದೊಡ್ಡಬಳ್ಳಾಪುರದ ವಿದ್ಯಾರ್ಥಿನಿಲಯಗಳಲ್ಲಿ ಮೂಲ ಸೌಕರ್ಯಗಳಿಗಾಗಿ ಒತಾಯ

ದೊಡ್ಡಬಳ್ಳಾಪುರದಲ್ಲಿ ಎಸ್ಸಿ, ಎಸ್ಟಿ ವಿದ್ಯಾರ್ಥಿನಿಲಯಗಳಲ್ಲಿ ಅಗತ್ಯ ಮೂಲಸೌಕರ್ಯ ಕೊರತೆಯನ್ನು ನೀಗಿಸಬೇಕು ಎಂದು ಒತ್ತಾಯಿಸಿ ಸಿಪಿಎಂ ನೇತೃತ್ವದ ದಲಿತ ಹಕ್ಕುಗಳ ಸಮಿತಿ ವತಿಯಿಂದ ಸೋಮವಾರ ತಾಲ್ಲೂಕು ಪಂಚಾಯಿತಿ ಕಚೇರಿ ಮುಂದೆ ಪ್ರತಿಭಟನೆ ನಡೆಸಲಾಯಿತು.

ದೊಡ್ಡಬಳ್ಳಾಪುರ ತಾಲ್ಲೂಕಿನ ಎಸ್ಸಿ,ಎಸ್ಟಿ ವಿದ್ಯಾರ್ಥಿನಿಲಯಗಳಲ್ಲಿ ಅಗತ್ಯ ಮೌಲ ಸೌಕರ್ಯಗಳ ಕೊರತೆಯನ್ನು ನೀಗಿಸಬೇಕು ಹಾಗೂ ಸರ್ಕಾರದ ಅನುದಾನಗಳನ್ನು ಸದುಪಯೋಗಪಡಿಸಿಕೊಳ್ಳುವಲ್ಲಿ ಇಲಾಖೆಯ ಅಧಿಕಾರಿಗಳು ಗಮನ ಹರಿಸಬೇಕು ಎಂದು ಒತ್ತಾಯಿಸಿ ಸಿಪಿಎಂ ನೇತೃತ್ವದ ದಲಿತ ಹಕ್ಕುಗಳ ಸಮಿತಿ ವತಿಯಿಂದ ತಾಲ್ಲೂಕು ಪಂಚಾಯಿತಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ದಲಿತ ಹಕ್ಕುಗಳ ತಾಲ್ಲೂಕು ಸಮಿತಿ ಅಧ್ಯಕ್ಷ ಮಂಜುನಾಥ್. ಕಾರ್ಯದರ್ಶಿ ಶಿವಶಂಕರ್, ತಾಲ್ಲೂಕಿನಲ್ಲಿ ದಲಿತ ಮಕ್ಕಳಿಗಾಗಿ ಇರುವ ವಿದ್ಯಾರ್ಥಿ ನಿಲಯಗಳಿಗೆ ಸರ್ಕಾರದಿಂದ ಲಕ್ಷಾಂತರ ರೂಪಾಯಿ ಅನುದಾನ ಬರುತ್ತಿದ್ದರೂ ಸಮರ್ಪಕವಾಗಿ ವಿತರಣೆಯಾಗುತ್ತಿಲ್ಲ. ವಿದ್ಯಾರ್ಥಿ ನಿಲಯಗಳಲ್ಲಿ ನೀರಿನ ಸಮಸ್ಯೆಯಿದೆ. ಕಳಪೆ ಆಹಾರ ನೀಡಲಾಗುತ್ತಿದ್ದು, ಊಟದಲ್ಲಿ ಮಾಂಸ, ಮೊಟ್ಟೆ ಮತ್ತು ಬಾಳೆಹಣ್ಣು ನೀಡಬೇಕೆಂದಿದ್ದರೂ ಯಾವುದನ್ನೂ ನೀಡುತ್ತಿಲ್ಲ. ಗ್ರಂಥಾಲಯ ಸೌಲಭ್ಯ ಇಲ್ಲ. ವಿದ್ಯಾರ್ಥಿ ನಿಲಯಗಳಿಗೆ ಅಗತ್ಯ ನೀರು ಸರಬರಾಜು ಹಾಗೂ ಶುದ್ಧ ನೀರು ಒದಗಿಸಲಾಗುತ್ತಿಲ್ಲ. ಕ್ರೀಡಾ ಸಾಮಗ್ರಿ, ಹೆಣ್ಣು ಮಕ್ಕಳ ವಿದ್ಯಾರ್ಥಿ ನಿಲಯಗಳಲ್ಲಿ ಸ್ನಾನದ ಸೌಲಭ್ಯವಿಲ್ಲ. ಸೂಕ್ತ ಭದ್ರತಾ ವ್ಯವಸ್ಥೆ ಇಲ್ಲ. ಈ ಸಮಸ್ಯೆಗಳನ್ನು ಶೀಘ್ರವೇ ಬಗೆಹರಿಸಬೇಕು ಎಂದು ಒತ್ತಾಯಿಸಿದರು. ಸಂಬಂಧಪಟ್ಟ ಅಧಿಕಾರಿಗಳು ಗಮನ ಹರಿಸಿ ಸೂಕ್ತ ಕ್ರಮ ಕೈಗೊಳ್ಳದಿದ್ದರೆ ತೀವ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.



ಪ್ರತಿಭಟನೆಯಲ್ಲಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಆರ್.ಚಂದ್ರತೇಜಸ್ವಿ, ನಗರ ಸಭೆ ಮಾಜಿ ಸದಸ್ಯ ಬಿ.ಜಿ.ಹೇಮಂತರಾಜು, ಮುಖಂಡರಾದ ಪಿ.ಎ.ವೆಂಕಟೇಶ್, ತಾ.ಡಿವೈಎಫ್ಐ ಮುಖಂಡರಾದ ಸಿ.ಅಶ್ವತ್ಥ್, ಕಾರ್ಯದರ್ಶಿ ರಘು ಕುಮಾರ್ ಮತ್ತಿತರರು ಭಾಗವಹಿಸಿದ್ದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಅಂಬಾನಿ ಕಂಪೆನಿ ಶರತ್ತು ಪಾಲಿಸದಿದ್ದರೂ ಯುಪಿಎ–2 ರಿಯಾಯ್ತಿ

ಮತ್ತೆ ಮುಕೇಶ್ ಅಂಬಾನಿ ಒಡೆತನದ ರಿಲಯಂಸ್ ಇಂಡಸ್ಟ್ರೀಸ್ ಲಿಮಿಟೆಡ್ (ಆರ್‌ಐಎಲ್) ಸುದ್ದಿಯಲ್ಲಿದೆ. ಮಾಧ್ಯಮಗಳಲ್ಲಿನ ವರದಿಗಳನ್ನು ಗಮನಿಸಿದರೆ ಬಹಶಃ ಕೆಜಿ ಡಿ6 ನೈಸರ್ಗಿಕ ಅನಿಲ ನಿಕ್ಷೇಪದ ಕಾಂಟ್ರಾಕ್ಟ್‌ನ ಶರತ್ತನ್ನು ದೇಶದ ಹಿತದೃಷ್ಟಿಯಿಂದ ಜಾರಿಗೆ ತರುವಲ್ಲಿ ಯುಪಿಎ–2 ಸರಕಾರದ ಪೆಟ್ರೋಲಿಯಂ ಮಂತ್ರಿಗಳು ಹಿಂದೇಟು ಹಾಕುವುದನ್ನು ನಿಲ್ಲಿಸುವ ವರೆಗೆ, ಅಥವ ಸ್ವತಃ ಪ್ರಧಾನ ಮಂತ್ರಿಗಳು ಮಧ್ಯಪ್ರವೇಶಿಸುವ ವರೆಗೆ ಇದು ಹೀಗೇ ಮುಂದುವರೆಯುತ್ತದೆ. ಅಥವ ಇಲ್ಲೂ ಸರ್ವೋಚ್ಚ ನ್ಯಾಯಾಲಯವೇ ಮಧ್ಯಪ್ರವೇಶಿಸಬೇಕೋ ಏನೋ.

ಈಗಾಗಲೇ ನಮ್ಮ ಓದುಗರಿಗೆ ತಿಳಿದಿರುವಂತೆ ಆರ್‌ಐಎಲ್ ಭಾರತ ಸರಕಾರದೊಡನೆ ಮಾಡಿಕೊಂಡ ಕಾಂಟ್ರಾಕ್ಟಿನ ಶರತ್ತಿನಂತೆ ಅನಿಲ ಉತ್ಪಾದನೆ ಮಾಡುತ್ತಿಲ್ಲ, ಅಷ್ಟೇ ಅಲ್ಲ, ತನ್ನ ಖರ್ಚುಗಳನ್ನು ತೋರಿಸಿ ದೇಶದ ಬೊಕ್ಕಸಕ್ಕೆ ಸಲ್ಲಬೇಕಾದುದನ್ನೂ ಸಲ್ಲಿಸುತ್ತಿಲ್ಲ, ನೈಸರ್ಗಿಕ ಅನಿಲದ ಬೆಲೆ ಹೆಚ್ಚಿಸಲು ಒತ್ತಡ ಹಾಕಲಿಕ್ಕಾಗಿಯೇ ಉತ್ಪಾದನೆಯಲ್ಲಿ ಕಡಿತ ತಂದಿದೆ ಎಂಬ ಆರೋಪವೂ ಅದರ ಮೇಲಿದೆ, ಹಾಗೂ ಆ ಒತ್ತಡ ತಂತ್ರ–ಕ್ಕೆ ತಲೆಬಾಗಿದ ಆರೋಪ ಯುಪಿಎ–2 ಸರಕಾರದ ಮೇಲಿದೆ.

ಭಾರತ ಸರಕಾರ ಅಂಬಾನಿ ಕಂಪನಿಗೆ ಈ ನಿಕ್ಷೇಪಗಳ ಶೋಧನೆ ಮತ್ತು ಉತ್ಪಾದನೆಗೆ ಒಟ್ಟು 7645 ಚದರ ಕಿ.ಮೀ ಬ್ಲಾಕನ್ನು ವಹಿಸಿ ಕೊಟ್ಟಿತ್ತು. ಆದರೆ ಅದು ಇದುವರೆಗೆ ಶೋಧನೆ ನಡೆಸಿದ್ದು ಕೇವಲ 14ಶೇ. ಕ್ಷೇತ್ರದಲ್ಲಿ ಮಾತ್ರ. ಉಳಿದೆಡೆಗಳಲ್ಲಿ ಶೋಧನೆಗೂ ಅದು ಹಣತೊಡಗಿಸಿಲ್ಲ, ಉತ್ಪಾದನೆಯಂತೂ ಬಹಳ ದೂರ. ಇದಕ್ಕೆ ಅದು ತಾಂತ್ರಿಕ ತೊಂದರೆಗಳು ಕಾರಣ ಎನ್ನುತ್ತಿದೆ. ಆದರೆ ಅಂತರ್‍ರಾಷ್ಟ್ರೀಯ ಪರಿಣಿತರೊಬ್ಬರು ನಡೆಸಿದ ತನಿಖೆಯ ಪ್ರಕಾರ ಕಾಂಟ್ರಾಕ್ಟುದಾರರು ಈ ನಿಟ್ಟಿನಲ್ಲಿ ಏನೂ ಮಾಡದಿರುವುದೇ ಸಮಸ್ಯೆ ಉಂಟು ಮಾಡಿದೆ. ಇದಲ್ಲದೆ ಸಿಎಜಿ ಕೂಡ ಆಗಾಗ ಈ ಕಂಪನಿಯ ಕೆಲಸ ಕಾರ್ಯಗಳು, ಲೆಕ್ಕಪತ್ರಗಳ ಬಗ್ಗೆ ಪ್ರತಿಕೂಲ ಟಿಪ್ಪಣಿಗಳನ್ನು ಮಾಡಿಕೊಂಡು ಬಂದಿದೆ.



ಇವೆಲ್ಲದರ ಆಧಾರದಲ್ಲಿ ದೇಶದ ನೈಸರ್ಗಿಕ ಅನಿಲ ಸಂಪನ್ಮೂಲಗಳ ಉಸ್ತುವಾರಿಯ ಜವಾಬ್ದಾರಿ ಇರುವ ಹೈಡ್ರೋಕಾರ್ಬನ್ ಮಹಾ ನಿರ್ದೇಶನಾಲಯ (ಡಿಜಿಹೆಚ್) ಪರಿಣಿತರ ಅಭಿಪ್ರಾಯವನ್ನು ಎತ್ತಿ ಹಿಡಿದಿದೆ. ಆದ್ದರಿಂದ ಉಳಿದ 6601 ಚದರ ಕಿಲೋಮೀಟರ್ ಪ್ರದೇಶದ ಮೇಲೆ ಆರ್‌ಐಎಲ್ ಪಡೆದ ಪರವಾನಿಗೆ ತಂತಾನೇ ರದ್ದಾಗುತ್ತದೆ, ಅದನ್ನು ಸರಕಾರ ಹಿಂದಕ್ಕೆ ಪಡೆಯಬೇಕೆಂದು ಕಳೆದ ಡಿಸೆಂಬರಿನಲ್ಲಿ ಶಿಫಾರಸು ಮಾಡಿತ್ತು. ಈ ವರ್ಷ ಎಪ್ರಿಲ್‌ನಲ್ಲಿ ಮತ್ತೆ ಅದೇ ಶಿಫಾರಸು ಮಾಡಿದೆ. ಇದನ್ನು ಪೆಟ್ರೋಲಿಯಂ ಇಲಾಖೆಯ ಜಂಟಿ ಕಾರ್ಯದರ್ಶಿ(ಅನ್ವೇಷಣೆ) ಮತ್ತು ಸ್ವತಃ ಆ ಇಲಾಖೆಯ ಕಾರ್ಯದರ್ಶಿಗಳೂ ಅನುಮೋದಿಸಿದ್ದರು.

ವೇದರಾಜ

ಆದರೆ ಇನ್ನೂ ಆ ಕಡತ ಯುಪಿಎ–2 ಸರಕಾರದ ಪೆಟ್ರೋಲಿಯಂ ಮಂತ್ರಿಗಳ ಮೇಜಿನ ಮೇಲೆ ಧೂಳು ತಿನ್ನುತ್ತಿದೆಯಂತೆ. ಮೂರು ತಿಂಗಳ ಹಿಂದೆ ಈ ಬಗ್ಗೆ ಕೇವಲ ಕಾಂಟ್ರಾಕ್ಟ್‌ನಲ್ಲಿ ಹೇಳಿದೆಯೆಂದ ಮಾತ್ರಕ್ಕೆ ಅದು ತಂತಾನೇ ಅನ್ವಯವಾಗುವುದಿಲ್ಲ, ಅದರ ಆಧಾರದಲ್ಲಿ ನಿರ್ಧಾರ ಕೈಗೊಳ್ಳಲು ಆಗುವುದಿಲ್ಲ, ಅದು ದೇಶಕ್ಕೆ ಒಳ್ಳೆಯದಲ್ಲ ಎಂದು ಅವರು ಪ್ರತಿಕ್ರಿಯಿಸಿದ್ದರೆಂದು ವರದಿಯಾಗಿದೆ. 4.86 ಬಿಲಿಯ ಡಾಲರುಗಳಷ್ಟು ಅಂದರೆ ಸುಮಾರು 30 ಸಾವಿರ ಕೋಟಿ ರೂ.ಗಳಷ್ಟು ಬೆಲೆಬಾಳುವ ದೇಶದ ಸಂಪನ್ಮೂಲದ ಮೇಲೆ ಖಾಸಗಿಯವರೊಬ್ಬರು ತಮಗೆ ನೀಡಿದ್ದ ಲೈಸೆನ್ಸಿನ ಅವಧಿ ಮುಗಿದ ಮೇಲೂ ಸುಮ್ಮನೇ ಏನೂ ಮಾಡದೆ ಕೂತಿರಲು ಬಿಡುವುದು ದೇಶದ ಹಿತದೃಷ್ಟಿ ಹೇಗಾಗುತ್ತದೆ ಎಂದೇನೂ ಮಂತ್ರಿಗಳು ವಿವರಿಸಲು ಹೋಗಿಲ್ಲ.

ವಾಸ್ತವವಾಗಿ ಹೀಗೆ ಬಿಟ್ಟಿರುವುದೇ 60ಸಾವಿರ ಕೋಟಿ ರೂ.ಗಳ ಹಗರಣವನ್ನು ಸೃಷ್ಟಿಸುತ್ತಿದೆ ಎಂದು ಸಿಪಿಐ. ಸಂಸತ್ ಸದಸ್ಯ ಗುರುದಾಸ್ ದಾಸ್‌ಗುಪ್ತ ಹೇಳಿದ್ದಾರೆ.

ಸುಪ್ರಿಂ ಕೋರ್ಟಿನಲ್ಲಿ 'ಕಾಮನ್ ಕಾಸ್'(ಸರ್ವರ ಹಿತ) ಎಂಬ ಸಂಸ್ಥೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಹಾಕಿ ಆರ್‌ಐಎಲ್ ಕಂಪನಿಯೊಂದಿಗೆ ಮಾಡಿಕೊಂಡಿರುವ ಉತ್ಪಾದನಾ ಪಾಲುದಾರಿಕೆ ಗುತ್ತಿಗೆ'(ಪಿಎಸ್‌ಸಿ)ಯನ್ನು ರದ್ದು ಮಾಡುವಂತೆ ಕೇಂದ್ರ ಸರಕಾರಕ್ಕೆ ನಿರ್ದೇಶನ ನೀಡಬೇಕು ಎಂದು ಕೇಳಿದೆ. ನ್ಯಾಯಾಲಯ ಕೇಂದ್ರ ಸರಕಾರಕ್ಕೆ ಮತ್ತು ಆರ್‌ಐಎಲ್ ಕಂಪನಿಗೆ ಈ ಬಗ್ಗೆ ನೋಟೀಸುಗಳನ್ನು ಕಳಿಸಿದೆ.

ಈ ಅರ್ಜಿ ಸಲ್ಲಿಸಿದವರಲ್ಲಿ ಮಾಜಿ ಕೇಂದ್ರ ಸಂಪುಟ ಕಾರ್ಯದರ್ಶಿ ಟಿ ಎಸ್ ಆರ್ ಸುಬ್ರಮಣ್ಯನ್, ನಿವೃತ್ತ ನೌಕಾಸೇನಾಧ್ಯಕ್ಷ ಅಡ್ಮಿರಲ್ ರಾಮದಾಸ್ ಮತ್ತು ಭಾರತ ಸರಕಾರದ ಮಾಜಿ ಕಾರ್ಯದರ್ಶಿ ರಾಮಸ್ವಾಮಿ ಆರ್ ಅಯ್ಯರ್ ಸೇರಿದ್ದಾರೆ. ಇದಕ್ಕೆ ಮೊದಲು ಸಿಪಿಐ ಸಂಸತ್ ಸದಸ್ಯ ಗುರುದಾಸ್ ದಾಸ್‌ಗುಪ್ತ ಹಾಕಿದ್ದ ಅರ್ಜಿಯ ಜೊತೆಗೆ ಇದರ ವಿಚಾರಣೆಯನ್ನು ಕೈಗೆತ್ತಿಕೊಳ್ಳಲಾಗಿದೆ.

ಈ ಅರ್ಜಿಯಲ್ಲಿ ಆರ್‌ಐಎಲ್ ಕುರಿತಂತೆ 5 ಪ್ರಶ್ನೆಗಳನ್ನು ಎತ್ತಲಾಗಿದೆ– 1. ಅನಿಲದ ಕಳ್ಳದಾಸ್ತಾನು, ಖರ್ಚುಗಳಿಗೆ 'ಚಿನ್ನದ ಲೇಪನ' (ಅಂದರೆ ವಿಪರೀತ ಹಿಗ್ಗಿಸಿ ತೋರಿಸುವುದು), ಪರವಾನಿಗೆ ಮುಗಿದುಹೊಂದ ಕ್ಷೇತ್ರವನ್ನು ಬಿಡದಿರುವುದು, ದುರುದ್ದೇಶದಿಂದ ಅನಿಲ ಬೆಲೆ ದುಪ್ಪಟ್ಟು ಮತ್ತು ಪೂರ್ವಾನ್ವಯವಾಗುವಂತೆ ತೆರಿಗೆ ರಿಯಾಯ್ತಿ.

ಈ ವಿಷಯದಲ್ಲಿ ಆರ್‌ಐಎಲ್ ಮತ್ತು ರಾಜಕೀಯ ವ್ಯವಸ್ಥೆಯ ನಡುವೆ ಉನ್ನತ ಹಂತದಲ್ಲಿ ಶಾಮೀಲು ಇರುವಂತೆ ಕಾಣುತ್ತಿದೆ ಎಂದಿರುವ ಅರ್ಜಿ ಕಂಪನಿಗೆ ಸರಕಾರ ಬೇ–ಕೆಂದೇ ಉತ್ಪಾದನಾ ಕಡಿತ ಮಾಡಲಾಗಿದೆ ಎಂಬ ನೋಟೀಸು ಕೊಟ್ಟಿದ್ದರೂ, ಅದನ್ನು ಅನುಸರಿಸಿ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಅಭಿಪ್ರಾಯ ಪಟ್ಟಿದೆ. ಈ ಬಗ್ಗೆ ಸುಪ್ರಿಂ ಕೋರ್ಟಿನ ಉಸ್ತುವಾರಿಯಲ್ಲಿ ಒಂದು ವಿಶೇಷ ತನಿಖಾ ತಂಡ(ಎಸ್‌ಐಟಿ)ದ ಅಥವ ಸಿಬಿಐನ ತನಿಖೆ ನಡೆಸಬೇಕು ಎಂದೂ ಕೇಳಲಾಗಿದೆ.



ಇದು ನಿಮಗೆ ಗೊತ್ತೇ?

ವಿಶ್ವ ಸಂಸ್ಥೆಯ ಬಾಲವಿವಾಹತಡೆ ನಿರ್ಣಯಕ್ಕೆ ಭಾರತ ಸಹಿ ಮಾಡುತ್ತಿಲ್ಲ!

ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮಂಡಳಿಯ 24ನೇ ಅಧಿವೇಶನ ಬಾಲವಿವಾಹಗಳನ್ನು ತಡೆಯುವ ಕುರಿತಾದ ಒಂದು ನಿರ್ಣಯವನ್ನು ಅಂಗೀಕರಿಸಿದೆ. ಇದಕ್ಕೆ 107 ದೇಶಗಳ ಬೆಂಬಲ ದೊರೆತಿದೆ. ಇವುಗಳಲ್ಲಿ ಹೆಚ್ಚಿನವು ಗಣನೀಯ ಸಂಖ್ಯೆಯಲ್ಲಿ ಬಾಲವಿವಾಹಗಳು ನಡೆಯುತ್ತಿರುವ ದೇಶಗಳು. ಜಗತ್ತಿನಲ್ಲಿ 6 ಕೋಟಿ ಬಾಲವಿವಾಹಗಳು ನಡೆಯುತ್ತಿದ್ದು, ಅದರಲ್ಲಿ 2.4 ಕೋಟಿ, ಅಂದರೆ 40 ಶೇ.ದಷ್ಟು ಭಾರತದಲ್ಲೇ ನಡೆಯುತ್ತಿವೆ ಎಂದು ಅಂಕಿ–ಅಂಶಗಳು ಹೇಳುತ್ತವೆ. ಅಲ್ಲದೆ 1978ರಲ್ಲೇ ಹುಡುಗಿಯರ ವಿವಾಹದ ಕನಿಷ್ಟ ವಯಸ್ಸು 18 ಎಂದು ನಿಗದಿಪಡಿಸಿದ ಕಾನೂನನ್ನು ಇಲ್ಲಿ ತರಲಾಗಿತ್ತು. 2006ರಲ್ಲಿ 18ವರ್ಷದ ಕೆಳಗಿನ ಹುಡುಗಿಯರ ಮದುವೆಯನ್ನು ನಿಷೇಧಿಸುವ ಕಾನೂನನ್ನು ಕೂಡ ಪಾಸು ಮಾಡಲಾಗಿದೆ. ಆದರೂ ಭಾರತ ಈ ನಿರ್ಣಯಕ್ಕೆ ಸಹಿ ಹಾಕದಿರಲು ನಿರ್ಧರಿಸಿರುವುದು ಅರ್ಥವಾಗದ ಸಂಗತಿ ಎಂದು ಸಿಪಿಐ(ಎಂ) ರಾಜ್ಯಸಭಾ ಸದಸ್ಯರೂ, ಜನವಾದಿ ಮಹಿಳಾ ಸಂಘಟನೆಯ ಕೇರಳ ರಾಜ್ಯಾಧ್ಯಕ್ಷೆಯೂ ಆಗಿರುವ ಟಿ.ಎನ್. ಸೀಮಾ ಹೇಳಿದ್ದಾರೆ. ಪ್ರಧಾನ ಮಂತ್ರಿಗಳು ಈ ವಿಷಯದಲ್ಲಿ ಮಧ್ಯಪ್ರವೇಶಿಸಿ, ನಮ್ಮ ದೇಶವೂ ಈ ನಿರ್ಣಯವನ್ನು ಬೆಂಬಲಿಸುವಂತಾಗಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಅರ್ಧದಷ್ಟು ಯುಪಿಎ–2 ಮಂತ್ರಿಗಳು ಆಸ್ತಿ ವಿವರ ಸಲ್ಲಿಸಿಲ್ಲ

ಮಂತ್ರಿಗಳಿಗೆ ಇರುವ ನೀತಿ ಸಂಹಿತೆಯ ಪ್ರಕಾರ ಕೇಂದ್ರದಲ್ಲಿ ಮತ್ತು ರಾಜ್ಯಗಳಲ್ಲಿಯೂ ಮಂತ್ರಿಮಂಡಳಗಳ ಸದಸ್ಯರು ಪ್ರತಿ ವರ್ಷ ಆಗಸ್ಟ್ 31ರೊಳಗೆ ತಮ್ಮ ಮತ್ತು ತಮ್ಮ ಕುಟುಂಬದವರ ಆಸ್ತಿ–ಪಾಸ್ತಿಗಳು, ಬಾಧ್ಯತೆಗಳು ಮತ್ತು ವ್ಯಾಪಾರ ಹಿತಾಸಕ್ತಿಗಳ ವಿವರವನ್ನು ಪ್ರಧಾನ ಮಂತ್ರಿಗೆ ಅಥವ ಸಂಬಂಧಪಟ್ಟ ಮುಖ್ಯಮಂತ್ರಿಗೆ ಸಲ್ಲಿಸಬೇಕು.

ಈ ವರ್ಷ ಈ ಸಮಯ ಮಿತಿ ದಾಟಿ ಒಂದು ತಿಂಗಳ ಮೇಲಾದರೂ ಯುಪಿಎ–2 ಸರಕಾರದ 77 ಮಂತ್ರಿಗಳಲ್ಲಿ 35 ಮಂತ್ರಿಗಳು ಇನ್ನೂ ಈ ವಿವರಗಳನ್ನು ಸಲ್ಲಿಸಿಲ್ಲ. ಇವರಲ್ಲಿ ಸಂಪುಟ ದರ್ಜೆಯ ಮಂತ್ರಿಗಳ ಸಂಖ್ಯೆ 14, ಸ್ವತಂತ್ರವಾಗಿ ಖಾತೆಗಳನ್ನು ನಿರ್ವಹಿಸುತ್ತಿರುವ ರಾಜ್ಯ ದರ್ಜೆಯವರು 5 ಮಂದಿ ಮತ್ತು ರಾಜ್ಯ ದರ್ಜೆಯವರು 16 ಮಂದಿ.

ಹೀಗೆ ಆಸ್ತಿ ವಿವರ ಸಲ್ಲಿಸದವರಲ್ಲಿ ಸ್ವತಃ ಕಾನೂನು ಮಂತ್ರಿಗಳು ಮತ್ತು ಮಾನವ ಸಂಪನ್ಮೂಲಗಳ ಮಂತ್ರಿಗಳೂ ಇದ್ದಾರೆ ಎನ್ನಲಾಗಿದೆ.

ಏರುತ್ತಲೇ ಇರುವ ಆಹಾರ ಬೆಲೆಗಳಿಂದಾಗಿ ಏರುತ್ತಲೇ ಇದೆ ಹಣದುಬ್ಬರ ದರ

ಸಗಟು ಬೆಲೆ ಸೂಚ್ಯಂಕ ಅಧಾರಿತ ಹಣದುಬ್ಬರ ದರ ಸಪ್ಟಂಬರಿನಲ್ಲಿ 6.46ಶೇ.ಕ್ಕೇರಿದೆ ಎಂದು ಸರಕಾರ ಪ್ರಕಟಿಸಿರುವ ಅಂಕಿ–ಅಂಶಗಳು ಹೇಳುತ್ತಿವೆ. ಇದು ಕಳೆದ ಏಳು ತಿಂಗಳಲ್ಲೇ ಅತಿ ಹೆಚ್ಚು ಹಣದುಬ್ಬರ ದರ ಎನ್ನಲಾಗಿದೆ. ಈರುಳ್ಳಿ ಬೆಲೆಯಲ್ಲಿ 323ಶೇ. ಏರಿಕೆ ಸೇರಿದಂತೆ ಆಹಾರಸಾಮಗ್ರಿಗಳ ಏರು ಬೆಲೆಗಳೇ ಈ ಹಣದುಬ್ಬರಕ್ಕೆ ಪ್ರಧಾನ ಕಾರಣ ಎನ್ನಲಾಗಿದೆ.

ಚಿಲ್ಲರೆ ಬೆಲೆಗಳನ್ನು ಆಧರಿಸಿದ, ಅಂದರೆ ಬಳಕೆದಾರ ಬೆಲೆ ಸೂಚ್ಯಂಕವನ್ನು ಆಧರಿಸಿದ ಹಣದುಬ್ಬರ ಮತ್ತೆ 10ಶೇ. ಸಮೀಪಿಸುತ್ತದೆ. ಆಗಸ್ಟ್ ತಿಂಗಳಲ್ಲಿ 9.52 ಇದ್ದದ್ದು ಸಪ್ಟಂಬರಿನಲ್ಲಿ 9.84 ಶೇ.ತಲುಪಿದೆ. ನಗರಗಳಲ್ಲಿ ಇದು 9.93ಶೇ. ಮತ್ತು ಗ್ರಾಮೀಣ ಪ್ರದೇಶಗಳಲ್ಲಿ 9.71ಶೆ. ಇಲ್ಲಿಯೂ ಏರಿಕೆಗೆ ಮುಖ್ಯಾಕಾರಣ ಆಹಾರ ಸಾಮಗ್ರಿಗಳ ಬೆಲೆಯೇರಿಕೆ.



ಯುಪಿಎ ಮಾರ್ಟ್–ಹಬ್ಬದ ಉತ್ಸವ : ಇಂತಹ 'ಸೇಲ್' ನಾನೆಂದೂ ಕಂಡಿಲ್ಲ. ಪ್ರತಿಯೊಂದರ ಬೆಲೆಯೂ ಸಾಮಾನ್ಯ ಬೆಲೆಗಿಂತ ದುಪ್ಪಟ್ಟು, ಮೂರುಪಟ್ಟು !
–'ಡೆಕ್ಕನ್ ಕ್ರಾನಿಕಲ್' ಪತ್ರಿಕೆಯಲ್ಲಿ ಸುಧೀರ್ ತೈಲಾಂಗ್ ವ್ಯಂಗ್ಯ

ಜಗದಗಲ

ಶರತ್‌ಚಂದ್ರ



ವಿಯೇಟ್ನಾಂ ಜನತಾ ಯುದ್ಧದ ಸೇನಾನಿ ಜನರಲ್ ಗಿಯಾಪ್ ಇನ್ನಿಲ್ಲ

ಫ್ರೆಂಚ್ ಮತ್ತು ಅಮೆರಿಕನ್ ಸಾಮ್ರಾಜ್ಯಶಾಹಿಯ ವಿರುದ್ಧ, ವಿಯೇಟ್ನಾಮಿನ ಜನತಾ ಯುದ್ಧದ ಸಫಲ ನಾಯಕತ್ವ ವಹಿಸಿ, ಅವರಿಗೆ ಚಳ್ಳೆ ಹಣ್ಣು ತಿನ್ನಿಸಿದ್ದ ಜನರಲ್ ಗಿಯಾಪ್ ಅಕ್ಟೋಬರ್ 4 ರಂದು ತಮ್ಮ 102ರ ತುಂಬು ವಯಸ್ಸಿನಲ್ಲಿ ನಿಧನರಾಗಿದ್ದಾರೆ. ಗೆರಿಲ್ಲಾ ಯುದ್ಧತಂತ್ರದ 'ಜೀನಿಯಸ್' ಎಂದು ಪರಿಗಣಿಸಲಾದ ಗಿಯಾಪ್ ಅವರ ಮಿಲಿಟರಿ ಕೌಶಲ್ಯವನ್ನು ನೆಪೋಲಿಯನ್, ರೊಮೆಲ್ ಅಂತವರಿಗೆಲ್ಲಾ ಹೋಲಿಸಲಾಗಿದೆ. ಅವರನ್ನು ಪಾಶ್ಚಿಮಾತ್ಯ ದೇಶಗಳಲ್ಲಿ 'ಕೆಂಪು ನೆಪೋಲಿಯನ್' ಎಂದೇ ಕರೆಯಲಾಗುತ್ತದೆ. ಜನತಾ ಸೈನ್ಯ ಹಾಗೂ ಜನತಾ ಯುದ್ಧಗಳ ಪರಿಕಲ್ಪನೆಗಳು, ಗೆರಿಲ್ಲಾ ಯುದ್ಧತಂತ್ರ ಮತ್ತು ತಮ್ಮ ನಾಯಕತ್ವದ ಪ್ರಮುಖ ಕಾಳಗಗಳ ತಂತ್ರಗಾರಿಕೆ ಬಗ್ಗೆ ಅವರು ಬರೆದ 'ಜನತಾ ಸೈನ್ಯ, ಜನತಾ ಯುದ್ಧ' ಎಂಬ ಮತ್ತು ಇತರ ಪುಸ್ತಕಗಳು 'ಕ್ಲಾಸಿಕ್' ಎಂದು ಹೆಸರು ಗಳಿಸಿವೆ. ಗಿಯಾಪ್ ವಿಯೇಟ್ನಾಮಿನ ಮಿಲಿಟರಿ ಮುಖ್ಯಸ್ಥರಾಗಿದ್ದಲ್ಲದೆ, ರಕ್ಷಣಾ ಸಚಿವ, ಗೃಹ ಸಚಿವ, ಉಪ ಪ್ರಧಾನಿಯಾಗಿದ್ದರು. ವಿಯೇಟ್ನಾಮಿನ ಕಮ್ಯುನಿಸ್ಟ್ ಪಕ್ಷದ ಪೊಲಿಟ್ ಬ್ಯೂರೋ ಸದಸ್ಯರಾಗಿದ್ದರು.


ವಿಯೇಟ್ನಾಮಿನಲ್ಲಿ, 'ರಾಷ್ಟ್ರಪಿತ' 'ಹೊ ಮಾಮ' ಎಂದೆಲ್ಲಾ ಕರೆಯಲಾಗುವ ಹೊ ಚಿ ಮಿನ್ ಬಿಟ್ಟರೆ, ಅತ್ಯಂತ ಜನಪ್ರಿಯ ಮತ್ತು ಗೌರವಾನ್ವಿತ ನಾಯಕನೆಂದರೆ ಗಿಯಾಪ್ ಅವರೇ. ಅವರನ್ನು ಭೇಟಿಯಾಗಿದ್ದ ಭಾರತದ ನಿವೃತ್ತ ಬ್ರಿಗೇಡಿಯರ್ ದರ್ಜೆಯ ಹಿರಿಯ ಮಿಲಿಟರಿ ಅಧಿಕಾರಿ ಒಬ್ಬರು ಗಿಯಾಪ್ ನಿಧನದ ಬಗೆಗಿನ 'ದಿ ಹಿಂದು' ಪತ್ರಿಕೆ-ಯ ವರದಿಗೆ ವೆಬ್ ಕಮೆಂಟು ಕೊಡುತ್ತಾ, ಅವರನ್ನು ನಮ್ಮ ಮಹಾತ್ಮ ಗಾಂಧಿ ಮತ್ತು ಸುಭಾಶ್ ಚಂದ್ರ ಬೋಸ್ ಅವರ ಅಮೋಘ ಮಿಶ್ರಣ ಎಂದು ಮಾರ್ಮಿಕವಾಗಿ ಕರೆದಿದ್ದಾರೆ. ಅವರ ಜೀವನ ಚರಿತ್ರೆ ಪ್ರಕಟಿಸಬೇಕೆಂದೂ ಹೇಳಿದ್ದಾರೆ.

ಗಿಯಾಪ್ ಅವರ ನಿಧನ ವಿಯೆಟ್ನಾಮನ್ನು ಶೋಕಸಾಗರದಲ್ಲಿ ಮುಳುಗಿಸಿದೆ. ರಾಜಧಾನಿಯಲ್ಲಿ ಅವರ ದೇಹವನ್ನು ಸಾರ್ವಜನಿಕರಿಗೆ ಗೌರವ ಸಲ್ಲಿಸಲು ಇಡಲಾಗಿತ್ತು. ಒಂದುವರೆ ಲಕ್ಷಕ್ಕೂ ಹೆಚ್ಚು ಜನ ಗೌರವ ಸಲ್ಲಿಸಿದ್ದು, ಅವಧಿ ಮುಗಿಯುವ ಸಮಯವನ್ನು ರಾತ್ರಿ 9ರಿಂದ 12ಕ್ಕೆ ವಿಸ್ತರಿಸಿದರೂ ಮೈಲಿಗಟ್ಟಲೆ ಕ್ಯೂ ಇತ್ತಂತೆ. ಇದಲ್ಲದೆ ಅವರ ಇಚ್ಛೆಯಂತೆ ಕೂ ಬಿನ್ ಪ್ರಾಂತ್ಯದ ಹುಟ್ಟೂರಲ್ಲಿ ಅವರ ಅಂತಿಮ ಸಂಸ್ಕಾರಕ್ಕೆ ಶವವನ್ನು ವಿಮಾನದಲ್ಲಿ ಒಯ್ಯಲು, ಹನೊಯ್ ವಿಮಾನ ನಿಲ್ದಾಣಕ್ಕೆ ಮಿಲಿಟರಿ ಗೌರವದೊಂದಿಗೆ ಮೆರವಣಿಗೆಯಲ್ಲಿ ಒಯ್ಯಲಾಯಿತು. ಈ ದಾರಿಯ ಎರಡೂ ಬದಿಯಲ್ಲೂ ಲಕ್ಷಾಂತರ ಜನ ತಮ್ಮ ಗೌರವ ಸಲ್ಲಿಸಲು ಗಂಟೆಗಟ್ಟಲೆ ಕಾದಿದ್ದರು ಎಂದು ವರದಿಯಾಗಿದೆ.

ದಿನ್-ಬಿನ್-ಫೂ ಮತ್ತು ಟೆಟ್ ದಾಳಿಗಳ ರೂವಾರಿ

ಗಿಯಾಪ್ ಎಂದರೆ 'ಗುರಾಣಿ' ಅಂತೆ. ವೊ ಎಂದರೆ 'ಬಲ' ಅಂತೆ. ಎರಡು ಸೂಪರ್ ಪವರ್ (ಫ್ರೆಂಚ್ ಮತ್ತು ಅಮೆರಿಕನ್) ಗಳ ಬೃಹತ್ ಮಿಲಿಟರಿ ಶಕ್ತಿಯನ್ನು ಮಣಿಸಿದ ಜನರಲ್ ಗಿಯಾಪ್‌ಗೆ ಇದು ತಕ್ಕ ಹೆಸರೇ. ಗಿಯಾಪ್ ಅವರ ಹೆಸರು ಮೊದಲ ಇಂಡೋಚೀನಾ ಯುದ್ಧ (1946–54) ಮತ್ತು ವಿಯೆಟ್ನಾಂ ಯುದ್ಧ (1960–75) ದೊಂದಿಗೆ ಬೆಸೆದುಕೊಂಡಿದೆ. ಎರಡೂ ಯುದ್ಧಗಳ ವಿಜಯೀ ವ್ಯೂಹ ರಚನೆ ಮತ್ತು ರಣನೀತಿಯಲ್ಲಿ ಅವರ ನಾಯಕತ್ವ ಮತ್ತು ಪಾತ್ರವೇ ಅವರಿಗೆ ಅಪಾರ ಹೆಸರು ಮತ್ತು ಗೌರವ ತಂದು ಕೊಟ್ಟಿರುವುದು. ಬೇರೆ ಯಾವ ದೇಶ ಅಥವಾ ನಾಯಕ ಎರಡು ಮಿಲಿಟರಿ ಶಕ್ತಿ ಮತ್ತು ಸೂಪರ್ ಪವರ್‌ಗಳನ್ನು ಒಂದರ ನಂತರ ಒಂದಾಗಿ ಎದುರಿಸುವ ಪರಿಸ್ಥಿತಿ ನಿಭಾಯಿಸಿ ವಿಜಯಿಯಾಗಿಲ್ಲ. ಈ ಅಪ್ರತಿಮ ಕೀರ್ತಿ ಗಿಯಾಪ್ ಮತ್ತು ವಿಯೆಟ್ನಾಮಿಗೆ ಸೇರುತ್ತದೆ.

ಅದರಲ್ಲೂ 1954ರಲ್ಲಿ ದಿನ್-ಬಿನ್-ಫೂ ನಲ್ಲಿ ಫ್ರೆಂಚ್ ಮಿಲಿಟರಿ ಕ್ಯಾಂಪನ್ನು ಸುತ್ತುವರೆದು 54 ದಿನದ ಗೆರಿಲ್ಲಾ ಹೋರಾಟದ ನಂತರ ಅವರು ಶರಣಾಗತರಾಗುವಂತೆ ಮಾಡಿದ್ದು, ಅವರನ್ನು ಜಗತ್ತಿನಾದ್ಯಂತ ರಾಷ್ಟ್ರೀಯ ವಿಮೋಚನಾ ಚಳುವಳಿಯ ಹಿರೋ ಮಾಡಿತು. ಅಲ್ಜಿರಿಯಾದಿಂದ ಆರಂಭಿಸಿ ಆಫ್ರಿಕಾದ ವಸಾಹತುಶಾಹಿ ವಿರೋಧಿ ಹೋರಾಟಕ್ಕೆ ಇದು ಭಾರಿ ಸ್ಫೂರ್ತಿ ಮತ್ತು ಕುಮ್ಮಕ್ಕು ಕೊಟ್ಟಿತು



ಎನ್ನಲಾಗಿದೆ. ಗಿಯಾಪ್ ಜಗತ್ತಿನಾದ್ಯಂತ ವಸಾಹತುಶಾಹಿಯನ್ನು ಕೊನೆಗಾಣಿಸುವ ಹೋರಾಟದ ಪ್ರತೀಕವಾದರು.

ಅದೇ ರೀತಿ 1968 'ಟೆಟ್ ದಾಳಿ'ಯೆಂದು ಪ್ರಸಿದ್ಧವಾದ ಅಮೆರಿಕದ ಕೈಗೊಂಬೆ ಸರ್ಕಾರದ ಆಳ್ವಿಕೆಯಲ್ಲಿದ್ದ ದಕ್ಷಿಣ ವಿಯೆಟ್ನಾಮಿನ ಸರ್ಕಾರ-ಮಿಲಿಟರಿಗಳ ಪ್ರಮುಖ ಕೇಂದ್ರಗಳ ಮೇಲೆ ನಡೆಸಿದ ದಾಳಿ ಸಹ ಪ್ರಖ್ಯಾತವಾಗಿದೆ. ಈ ದಾಳಿಯಲ್ಲಿ ಅಮೆರಿಕನ್ ಸೈನ್ಯದ ಮೇಲೆ ಆದ ಭಾರೀ ಸಾವು-ನೋವು ಅದನ್ನು ಓಡಿಸಲು ವಿಫಲವಾದರೂ ಅಮೆರಿಕದ ಮಿಲಿಟರಿ ಮತ್ತು ಸರ್ಕಾರವನ್ನು ಬೆಚ್ಚಿ ಬೀಳಿಸುವಲ್ಲಿ ಸಫಲವಾಯಿತು. ಇದರ ನಂತರವೇ ಅಮೆರಿಕದಲ್ಲಿ ವಿಯೆಟ್ನಾಂ ಯುದ್ಧದ ಬಗ್ಗೆ ಅರಿವು ಮೂಡಿ ಭಾರಿ ಯುದ್ಧ-ವಿರೋಧಿ ಚಳುವಳಿ ಆರಂಭವಾಯಿತು. ಇವೆಲ್ಲದರ ಫಲವಾಗಿ ಅಮೆರಿಕ ವಿಯೆಟ್ನಾಮಿನಿಂದ ಕಾಲ್ತೆಯಬೇಕಾಗಿ ಬಂತು. ಇದೂ ಜಗತ್ತಿನಾದ್ಯಂತ ಅಮೆರಿಕನ್ ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟಕ್ಕೆ ಸ್ಫೂರ್ತಿ ತುಂಬಿತ್ತು. 1991ರ ಮೊದಲ ಕೊಲ್ಲಿ ಯುದ್ಧದ ವರೆಗೆ ಯಾವುದೇ ಪ್ರಮುಖ ಅತಿಕ್ರಮಣ ಮಾಡುವಲ್ಲಿ ಅಮೆರಿಕ ಹಿಂಜರಿಯುವಂತೆ ಮಾಡಿತ್ತು.

ಎಳವೆಯಲ್ಲೇ ಚಳುವಳಿಗೆ


ಗಿಯಾಪ್ 2011ರಲ್ಲಿ ಆಗಿನ ಫ್ರೆಂಚ್ ಇಂಡೋಚೀನಾದ ರೈತ ಕುಟುಂಬದಲ್ಲಿ ಕೂ ಬಿನ್ ಪ್ರಾಂತ್ಯದಲ್ಲಿ ಜನಿಸಿದರು. ಅವರ ತಂದೆ 1885 ಮತ್ತು 1888ರ ಫ್ರೆಂಚ್-ವಿರೋಧಿ ರಾಷ್ಟ್ರೀಯವಾದಿ ದಂಗೆಯಲ್ಲಿ ಭಾಗಿಯಾಗಿದ್ದು ಅವರನ್ನು ಬಂಧಿಸಲಾಗಿತ್ತು. ಅವರು ಜೈಲಿನಲ್ಲೇ ಕೆಲವು ತಿಂಗಳುಗಳ ನಂತರ ಸತ್ತರು. ಅವರ ಒಬ್ಬ ಅಕ್ಕನನ್ನೂ ಬಂಧಿಸಲಾಗಿದ್ದು ಆಕೆಯೂ ಜೈಲಿನ ಪರಿಸ್ಥಿತಿಗಳಿಂದಾಗಿ ಬಿಡುಗಡೆಯಾಗಿ ಕೆಲವೇ ಸಮಯದಲ್ಲಿ ಸತ್ತಿದ್ದಳು. ಹೀಗೆ ಗಿಯಾಪ್ ಅವರಿಗೆ ಹತ್ತು ವರ್ಷ ಆಗುವ ಮೊದಲೇ ರಾಷ್ಟ್ರೀಯ ಚಳುವಳಿ ಅವರ ಕುಟುಂಬದ ಇಬ್ಬರನ್ನು ಬಲಿ ತೆ-ಗೆದುಕೊಂಡಿತ್ತು. ಇದು ಬಾಲಕ ಗಿಯಾಪ್‌ನ್ನು ಧೃತಿಗೆಡಿಸಲಿಲ್ಲ. ಬದಲಾಗಿ ಅವರನ್ನು ರಾಷ್ಟ್ರೀಯ ಚಳುವಳಿಯತ್ತ ಬಲವಾಗಿ ಸೆಳೆಯಿತು. ಅವರು ಹೈಸ್ಕೂಲಿನಿದ್ದಾಗಲೇ ರಾಷ್ಟ್ರೀಯ ಚಳುವಳಿಗೆ ಧುಮುಕಿದರು.


ಹಲವು ಕ್ರಾಂತಿಕಾರಿ ಸಂಘಗಳ ಸದಸ್ಯರಾಗಿದ್ದರು. ಇದರಿಂದಾಗಿ ಅವರ ಶಿಕ್ಷಣದಲ್ಲಿ ತೀವ್ರ ತೊಡಕುಗಳು ಉಂಟಾದವು. ಈ ಎಲ್ಲಾ ತೊಡಕುಗಳ ಮಧ್ಯೆ ಅವರು ಹನೊಯ್ ವಿಶ್ವವಿದ್ಯಾಲಯದಲ್ಲಿ ಡಾಕ್ಟರೆಟ್ ಪಡೆದರು. ಸ್ಕೂಲೊಂದರಲ್ಲಿ ಇತಿಹಾಸ ಅಧ್ಯಾಪಕರಾಗಿ ಕೆಲಸ ಮಾಡಿದರು. ಅವರು ಮಿಲಿಟರಿ ಚರಿತ್ರೆಯಲ್ಲಿ ಪರಿಣತರಾಗಿದ್ದು ನೆಪೊಲಿಯನಿನ ಪ್ರಮುಖ ಕಾಳಗಗಳ ಮಿಲಿಟರಿ ವ್ಯೂಹವನ್ನು ನೆನಪಿನಿಂದಲೇ ಚಿತ್ರಿಸುತ್ತಿದ್ದರಂತೆ. ಅವರು ಹಲವು ಪತ್ರಿಕೆಗಳಲ್ಲಿ ಪತ್ರಕರ್ತರಾಗಿಯೂ ದುಡಿದರು. 1938ರಲ್ಲಿ ಭೂಗತ ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸುತ್ತಾ ಅವರು ಹೊ ಚಿ ಮಿನ್ ಸ್ಥಾಪಿಸಿದ್ದ ಇಂಡೋಚೀನಾ ಕಮ್ಯುನಿಸ್ಟ್ ಪಕ್ಷ ಸೇರಿದರು.

ವಿಯೆಟ್ ಮಿನ್ ಸ್ಥಾಪಕ

ಅದೇ ಸಮಯದಲ್ಲಿ ರಾಷ್ಟ್ರೀಯ ಚಳುವಳಿಯಲ್ಲಿ ಸಕ್ರಿಯರಾಗಿದ್ದ ಮಹಿಳೆ ಒಬ್ಬರ ಜತೆ ಅವರ ವಿವಾಹವೂ ಆಯಿತು.







ಿ ಕೂಲಿಕಾರರಿಂದ......

ುಟ 5 ರಿಂದ

ರ್ಾಣ ಮಾಡಿ ಕೊಳ್ಳಲಾಗದಂತಹ
ಸ್ಥಿತಿಯನ್ನು ಈ ಸರ್ಕಾರಗಳು
ರ್ಾಣ ಮಾಡುತ್ತಿವೆ ಹಾಗೂ ಸರ್ಕಾರಿ
ಯಿಯನ್ನು ಮನೆ ಇಲ್ಲದವರಿಗೆ ಹಂಚಿಕೆ
ಡುವಲ್ಲಿ ಸರ್ಕಾರಗಳು ವಿಫಲವಾಗಿವೆ.
ನೆಯ ಅನುದಾನವೂ ನಿಜವಾದ
ಕೂಲಿಕಾರರಿಗೆ, ಫಲಾನುಭವಿಗಳಿಗೆ
ತ್ತಿಲ್ಲ. ಇದನ್ನು ತಪ್ಪಿಸಿ ಗುಡಿಸಲುಗಳಲ್ಲಿ
ಸಿಸುವರಿಗೆ ಮನೆ ಕಟ್ಟಲು ಸರ್ಕಾರ
ದಾನ ನೀಡಬೇಕು. ವಾಸಿಸಲು ಜಾಗ
ದೆ ಸರ್ಕಾರಿ ಜಾಗದಲ್ಲಿ ವಾಸ ಮಾಡುವ
ಕೂಲಿಕಾರರಿಗೆ ಸರ್ಕಾರ ಹಕ್ಕು ಪತ್ರ
ತಬೇಕು ಎಂದು ಒತ್ತಾಯಿಸಿದರು.
ಘಟನೆಯ ಜಿಲ್ಲಾಧ್ಯಕ್ಷರಾದ ಪುಟ್ಟಮಾದು
ಮ್ಮ ಸಮಸ್ಯೆಗೆ ಜಿಲ್ಲಾಧಿಕಾರಿಗಳು, ಸರ್ಕಾರ
ಯಾಗಿ ಸ್ಪಂಧಿಸುತ್ತಿಲ್ಲ. ಹಾಗಾಗಿ ನಮ್ಮ
ಸ್ಯೆ ಬಗೆಹರಿಸುವ ತನಕ ಎಂತಹ
ೋರಾಟಕ್ಕೂ ನಾವೆಲ್ಲರೂ ಸಜ್ಜಾಗಿ
ಯಲ್ಲಿ ಭಾಗವಹಿಸುವುವೆಂದು
ಸಿದರು. ನಂತರ ಜಿಲ್ಲಾಧಿಕಾರಿ ಕೃಷ್ಣಯ್ಯ
ಣಿಯ ಸ್ಥಳಕ್ಕೆ ಆಗಮಿಸಿ ಸಂಘದ

ಬೇಡಿಕೆಗಳ ಬಗ್ಗೆ ಎಲ್ಲಾ ತಾಲ್ಲೂಕುಗಳ ಕೂಲಿಕಾರರು, ಮಹಿಳೆಯರಿಂದ ಮಾಹಿತಿ ಪಡೆದರು. ಧರಣಿಯನ್ನು ಉದ್ದೇಶಿಸಿ, ನಿಮ್ಮ ಸಮಸ್ಯೆಗಳನ್ನು ಕೇಳಿದ್ದೇನೆ. ನಿಮ್ಮ ಸಮಸ್ಯೆಗಳು ನನಗೆ ತುಂಬಾ ನೋವು ಉಂಟು ಮಾಡಿವೆ. ಅಕ್ಟೋಬರ್ 15 ರ ನಂತರ ಸಂಘದ ಮುಖಂಡರು ಮತ್ತು ಸಂಬಂಧಪಟ್ಟ ಅಧಿಕಾರಿಗಳ ಸಭೆ ಕರೆದು ಸಮಸ್ಯೆಗಳ ಬಗ್ಗೆ ಚರ್ಚಿಸಿ ಪರಿಹಾರ ಮಾಡುತ್ತೇನೆ ಎಂದು ಭರವಸೆ ನೀಡಿ ಧರಣಿಯನ್ನು ವಾಪಸ್ಸು ಪಡೆಯಬೇಕು ಎಂದು ಮನವಿ ಮಾಡಿದರು. ಜಿಲ್ಲಾಧಿಕಾರಿಗಳು ಮಾತಿಗೆ ತಪ್ಪಿದರೆ ತೀವ್ರವಾದ ಅನಿರ್ದಿಷ್ಟ ಹೋರಾಟವನ್ನು ಮಾಡುವುದು ಎಂದು ತೀರ್ಮಾನಿಸಿ ಧರಣಿಯನ್ನು ಮುಕ್ತಾಯ ಮಾಡಲಾಯಿತು. ಪ್ರಾಸ್ತವಿಕವಾಗಿ ಜಿಲ್ಲಾ ಕಾರ್ಯದರ್ಶಿ ಕೆ. ಬಸವರಾಜು ಮಾತನಾಡಿದರು. ಬೇಡಿಕೆಗಳ ಮನವಿ ಪತ್ರವನ್ನು ಜಿಲ್ಲಾ ಸಹಕಾರ್ಯದರ್ಶಿ ಕೆ. ಹನುಮೇಗೌಡ ಓದಿ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದರು. ಧರಣಿಯ ನೇತೃತ್ವವನ್ನು ಜಿಲ್ಲಾ ಉಪಾಧ್ಯಕ್ಷ ಶಿವಮಲ್ಲು, ಅಬ್ದುಲಾ, ನಾಗಮಣಿ, ಹನುಮೇಶ, ಚಂದ್ರು, ಸರೋಜಮ್ಮ, ಡಿ.ಸಿ. ಚೌಡೇಗೌಡ, ಶಂಕರಪ್ಪ, ಶಾಂತಮ್ಮ ವಹಿಸಿದ್ದರು.

ವರದಿ : ಕೆ. ಹನುಮೇಗೌಡ

ಧವೆಯರಿಂದ ಪೂಜೆ....

ಟ 5 ರಿಂದ

ಾರ್ಧನ ಪೂಜಾರಿ ಧರ್ಮಸ್ಥಳದ ಮಧ್ಯದ
ಬಂಧಗಳು ಯಾವಾಗ ಯಾಕಾಗಿ ತಿರುವು
ರುವಾದುವು?
ಇನ್ನೊಂದು ಅಚ್ಚರಿ. ಆರೆಸ್ಸೆಸ್ಸಿನ ದಕ್ಷಿಣ
ುಖರಾದ ಡಾ|ಕಲ್ಲಡ್ಕ ಪ್ರಭಾಕರ
ಟ್ಟರನ್ನು ಇದೇ ನವರಾತ್ರಿಯ ಉತ್ಸವದ
ಳಿ ಜನಾರ್ಧನ ಪೂಜಾರಿಯವರು ಕೈನೀಡಿ
ಗತಿಸಿದ್ದು, ತಾನು ಅಜೀವ ಪರ್ಯಂತ
ರೆಸ್ಸೆಸ್ಸಿನ ವಿರೋಧಿಯೇ ಎಂಬುದಾಗಿ
ಖ್ಯಾತರಾಗಿದ್ದ ಪೂಜಾರಿಯವರು ಆರೆಸ್ಸೆಸ್ಸಿನ
ಟ್ಟರನ್ನು ಅದೂ ಹೆಚ್ಚಿನ ಬ್ರಾಹ್ಮಣರು

ತಿರಸ್ಕರಿಸುವ ಕುದ್ರೋಳಿ ದೇವಾಲಯಕ್ಕೆ ಆಹ್ವಾನಿಸಿದ್ದಾದರೂ ಯಾಕೆ?

ವಿಧವೆಯರಿಂದ ಪೂಜೆ ಮಾಡಿಸಿದ ಕ್ರಾಂತಿಕಾರಿ ಜನಾರ್ಧನ ಪೂಜಾರಿಯವರು, ಸಮಾಜದ ಪ್ರಗತಿಪರ ಪರಿವರ್ತನೆಗೆ ಮೂಲಭೂತವಾಗಿ ವಿರೋಧಿಗಳಾದ ಶೃಂಗೇರಿ ಸ್ವಾಮಿಗಳು, ವಿರೇಂದ್ರ ಹೆಗಡೆಯವರು ಮತ್ತು ಕಲ್ಲಡ್ಕ ಪ್ರಭಾಕರ ಭಟ್ಟರು ಮೊದಲಾದವರೊಂದಿಗೆ ಆಪ್ತ ಸಂಬಂಧ ಹೊಂದಿದ್ದಾರೆ ಎನ್ನುವಾಗ, ಅವರ ಕ್ರಾಂತಿಕಾರತೆಯೂ ಯಾವುದೋ ರಾಜಕೀಯ ಲಾಭಕ್ಕಾಗಿ ಹೂಡುತ್ತಿರುವ ದಾಳ ಎನಿಸುವುದಿಲ್ಲವೇ?

ಎರಡು ವಿಪತ್ತುಗಳು......

ಪುಟ 7 ರಿಂದ

ಬಿಜೆಪಿ ಮುಂದುವರೆಸುತ್ತಾ ಬಂದಿರುವುದು ಕೋಮುವಾದಿ ಧ್ರುವೀಕರಣವನ್ನು ತೀಕ್ಷ್ಣಗೊಳಿಸುವ 'ಹಿಂದೂರಾಷ್ಟ್ರ'ದ ಅದೇ ಆರೆಸ್ಸೆಸ್ ಯೋಜನೆಯ ಅಳವಡಿಕೆಯಷ್ಟೇ.

ನಾಚಿಕೆಗೇಡಿನ ದಾಖಲೆ

ರತನ್‌ಗಡ್ ದೇವಸ್ಥಾನ ನೂಕುನುಗ್ಗಲು ಕುರಿತಂತೆ ಬಂದಿರುವ ಆಪಾದನೆಗಳು ನಿಜವಾಗಿದ್ದರೆ, ಅದು ಬಿಜೆಪಿ ಅಡಿಯಲ್ಲಿ ಮಧ್ಯಪ್ರದೇಶದಲ್ಲಿ ಆಡಳಿತ ಯಂತ್ರವನ್ನು ಎಂತಹ ಅಮಾನುಷ ಮತ್ತು ಭ್ರಷ್ಟ ಮಟ್ಟಕ್ಕೆ ಇಳಿಸಲಾಗಿದೆ ಎಂಬುದರ ಒಂದು ನಾಚಿಕಗೇಡಿನ ದಾಖಲೆ. ಸೇತುವೆಯನ್ನು ಕಾನೂನುಬಾಹಿರವಾಗಿ ದಾಟಲು ಪೋಲೀಸ್ ಸಿಬ್ಬಂದಿಗೆ ಲಂಚ ಕೊಟ್ಟ ಕೆಲವು ಟ್ರಾಕ್ಟರುಗಳಿಗೆ ಅವಕಾಶ ಮಾಡಕೊಡಲಿಕ್ಕಾಗಿ ಸೇತುವೆ ಕುಸಿಯುತ್ತಿದೆ ಎಂಬ ಸುಳ್ಳುಸುದ್ದಿ ಹರಡಿಸಲಾಯಿತು ಎನ್ನಲಾಗುತ್ತಿದೆ. ಪೋಲೀಸರು ಅವರ ಚಲನೆಗೆ ದಾರಿ ಮಾಡಿಕೊಡುವ ಹೆಸರಿನಲ್ಲಿ ಹಲವು ಜನಗಳು ಸೇತುವೆಯಿಂದ ನದಿಗೆ ಹಾರುವಂತೆ ಮಾಡಿ ಹಲವು ಮಂದಿಯ ಸಾವಿಗೆ ಕಾರಣರಾದರು ಎಂಬ ಆಪಾದನೆಗಳಿವೆ. ಬೆಲೆಬಾಳುವ ವಸ್ತುಗಳನ್ನು ದೋಚಲು ಪೋಲೀಸರು ಹೆಣಗಳ ನಡುವೆ ಹುಡುಕಾಡುತ್ತಿದ್ದರು ಎಂಬ ಆಪಾದನೆಗಳೂ ಕೇಳಬಂದಿವೆ.

ಮಧ್ಯಪ್ರದೇಶದಲ್ಲಿ ಧಾರ್ಮಿಕ ಸ್ಥಳಗಳಲ್ಲಿ ಇಂತಹ ನೂಕುನುಗ್ಗಲಿನ ಇತಿಹಾಸವಿದ್ದರೂ ಕೂಡ ಅವುಗಳಿಂದ ಪಾಟಗಳನ್ನು ಕಲಿತಿಲ್ಲ, ಇಂತಹ ದುರಂತಗಳನ್ನು ತಡೆಯಲು ಯಾವ ಆಡಳಿತ ಕ್ರಮಗಳನ್ನೂ ಕೈಗೊಳ್ಳಲಿಲ್ಲ ಎಂಬುದು ಕೂಡ ನಿಜಕ್ಕೂ ನಾಚಿಕೆಗೇಡಿನ ಸಂಗತಿ. ಕೋಮುವಾದಿ ಅಜೆಂಡಾವನ್ನು ಮುಂದೊತ್ತುವ ಗುರಿಯನ್ನು ಅನುಸರಿಸಿರುವುದರ ಒಂದು ಸಹಜ ಉತ್ಪನ್ನ ಇದು.

ಪ್ರತಿವರ್ಷ ದಸರಾದ ಸಂದರ್ಭದಲ್ಲಿ ಲಕ್ಷಾಂತರ ಯಾತ್ರಿಗಳು ಈ ದೇವಸ್ಥಾನಕ್ಕೆ ಬರುತ್ತಾರೆ. ಆದರೂ ಯಾತ್ರಿಗಳ ಹರಿವನ್ನು ನಿಯಂತ್ರಿಸುವ ಯಾವ ವ್ಯವಸ್ಥೆಯೂ ಇರಲಿಲ್ಲ. ಆಡಳಿತ ಯಂತ್ರ ಎಷ್ಟೊಂದು ನಿರ್ಲಕ್ಷ್ಯದಿಂದಿತ್ತು ಎಂದರೆ ಅಲ್ಲಿ ನೆರೆದಿರುವವರಿಗೆ ಮಾಹಿತಿ ನೀಡಲು, ಅಗತ್ಯ ಬಂದಲ್ಲಿ ಎಚ್ಚರಿಕೆಗಳನ್ನು ನೀಡಲು ಧ್ವನಿವರ್ಧಕಗಳ ವ್ಯವಸ್ಥೆಯನ್ನೂ ಮಾಡಿರಲಿಲ್ಲ. ಇವೆಲ್ಲದರ ಫಲಿತಾಂಶವೆಂದರೆ ಅಧಿಕೃತವಾಗಿ 115 ಮಂದಿಯ ಸಾವು. ನಿಜವಾಗಿ ಈ ಸಂಖ್ಯೆ ಬಹಳ ಹೆಚ್ಚಿದೆಯೆಂದು ಅನಧಿಕೃತವಾಗಿ ವಿವಿಧ ಸಂಸ್ಥೆಗಳು ಹೇಳುತ್ತಿವೆ. ನಿಜಕ್ಕೂ ಇದು ನಾಚಿಕೆಗೇಡಿನ ಸಂಗತಿ. ಕೋಮುವಾದಿ ಅಜೆಂಡಾವನ್ನು ಅನುಸರಿಸಿ 'ಉಕ್ಕಿನ ಚೌಕಟ್ಟ'ನ್ನು ಪೂರ್ಣವಾಗಿ ಟೊಳ್ಳುಗೊಳಿಸಲಾಗಿದೆ ಎಂಬುದು ಸ್ಪಷ್ಟ.

ಒಡಿಶಾವನ್ನು ಅಪ್ಪಳಿಸಿದ ಚಂಡಮಾರುತ ಮಾಡಬಹುದಾಗಿದ್ದ ಅನಾಹುತಗಳನ್ನು ಕನಿಷ್ಟ ಮಟ್ಟಕ್ಕೆ ಇಳಿಸಲಾಗಿದೆಯಾದರೂ, ಅದರ ನಂತರದ ಹಾವಳಿಗಳು ರಾಜ್ಯವನ್ನು ಬಾಧಿಸುತ್ತಿವೆ. ಚಂಡಮಾರುತ ಬಂದು ಹೋದ ಮೇಲೆ ಬಂದ ಭಾರೀಮಳೆ ಉಂಟು ಮಾಡಿದ ಪ್ರವಾಹ ಪರಿಸ್ಥಿತಿ ಆಂಧ್ರಪ್ರದೇಶವನ್ನೂ ಮಾತ್ರವಲ್ಲದೆ, ನೆರೆಯ ಬಿಹಾರ ಮತ್ತು ಬಂಗಾಳದ ಪ್ರದೇಶಗಳನ್ನೂ ಬಾಧಿಸುತ್ತಿದೆ. ಸುಮಾರು ಎರಡು ಕೋಟಿ ಜನರನ್ನು ಇದು ತಟ್ಟಿದೆ ಎಂದು ಅಂದಾಜು ಮಾಡಲಾಗಿದೆ. ಒಡಿಶಾದಲ್ಲಿ 12 ಜಿಲ್ಲೆಗಳ 14,514 ಹಳ್ಳಿಗಳಿಗೆ ಹಾನಿಯಾಗಿದೆ, 2.34 ಲಕ್ಷ ಪಕ್ಕಾ ಮನೆಗಳು ಧ್ವಂಸವಾಗಿವೆ ಅಥವ ಗಂಭೀರವಾಗಿ ಹಾನಿಗೊಳಗಾಗಿವೆ ಎಂದು ಹೇಳಲಾಗಿದೆ. ಸಾವಿರಾರು ಹೆಕ್ಟೇರ್ ಕೃಷಿ ಭೂಮಿ ಜಲಾವೃತ್ತವಾಗಿವೆ. ಪ್ರವಾಹದಲ್ಲಿ ಸಿಲುಕಿಕೊಂಡ ಲಕ್ಷಾಂತರ ಜನರಿಗೆ ಆಹಾರ ಮತ್ತು ಕುಡಿಯುವ ನೀರು ಒದಗಿಸುವ ಪರಿಹಾರ ಪ್ರಯತ್ನಗಳನ್ನು ಹೆಲಿಕಾಪ್ಟರುಗಳ ನೆರವಿನಿಂದ ಎನ್‌ಡಿಆರ್‌ಎಫ್ ಮತ್ತು ಸೇನಾಪಡೆಗಳು ಕೈಗೊಂಡಿವೆ.

ವಿಪತ್ತಿಗೊಳಗಾಗಿರುವ ಜನಗಳ ಜೀವ-ಜೀವನದ ರಕ್ಷಣೆಯ ಬೃಹತ್ ಮಾನವ ಸವಾಲನ್ನು ಎದುರಿಸುವ ಪ್ರಯತ್ನಗಳಲ್ಲಿ ನೆರವಾಗಲು ಸಮಸ್ತ ದೇಶ ತನ್ನ ಬೆಂಬಲವನ್ನು, ಭೌತಿಕ ನೆರವನ್ನು ಒದಗಿಸಬೇಕಾಗಿದೆ. ●

➜

0ರಲ್ಲಿ ಫ್ರೆಂಚ್ ಸರ್ಕಾರ ಕಮ್ಯುನಿಸ್ಟ್
ವನ್ನು ನಿಷೇಧಿಸಿತು. ಆಗ ಅವರು
ನಾಕ್ಕೆ ದೇಶಾಂತರ ಹೋಗಬೇಕಾಯಿತು.
ರು ಚೀನಾದಲ್ಲಿ ಇದ್ದಾಗಲೇ ಅವರ
ಡದಿಯನ್ನು ಬಂಧಿಸಿ 15 ವರ್ಷ ಕಠಿಣ
ಗೆ ವಿಧಿಸಲಾಯಿತು. ಅವರು ಫ್ರೆಂಚ್
ಾಹತುಶಾಹಿಯಿಂದ ವಿಮೋಚನೆಗೆ
ಮ್ಯುನಿಸ್ಟ್ ಪಕ್ಷ 1941ರಲ್ಲಿ ಸಂಘಟಿಸಿದ
ಷ್ಟ್ರೀಯ ವಿಮೋಚನಾ ರಂಗವಾದ
ಯೆಟ್ ಮಿನ್‌ನ ಮಿಲಿಟರಿ ವಿಭಾಗದ
ಪಕ ಸದಸ್ಯರೂ ಮುಖ್ಯಸ್ಥರೂ ಆಗಿದ್ದರು.
42ರಲ್ಲಿ ವಿಯೆಟ್ ಮಿನ್‌ನ ಮಿಲಿಟರಿ
ಲ್ಲಾ ದಳಗಳನ್ನು ಸಂಘಟಿಸಲು
ರು ದೇಶಕ್ಕೆ ಭೂಗತರಾಗಿ ವಾಪಸು
ದರು. ಮುಂದಿನ ಹಲವು ತಿಂಗಳುಗಳು
ನ್ನು ಸುತ್ತಿ ಭೂಗತ ಮಿಲಿಟರಿ
ಗಳನ್ನು ಸಂಘಟಿಸಿದರು. ಶಸ್ತ್ರಾಸ್ತ್ರಗಳನ್ನು
ಂದಿಸುವುದು, ಅದರ ಮೇಲೆ ತರಬೇತಿ

ಇತ್ಯಾದಿ ಸಹ ಇದರ ಭಾಗವಾಗಿತ್ತು. 1944ರ ಹೊತ್ತಿಗೆ ನೂರಾರು ಸೈನಿಕರಿದ್ದ ವಿಯೆಟ್ ಮಿನ್ ಗೆರಿಲ್ಲಾ ಕಾಳಗಕ್ಕೆ ಸಿದ್ಧವಾಗಿತ್ತು. ಅದೇ ಅವಧಿಯಲ್ಲಿ (1943ರಲ್ಲಿ) ಅವರ ಮಡದಿ ಜೈಲಿನಲ್ಲಿ ಕೊಡಲಾದ ಚಿತ್ರಹಿಂಸೆಯಿಂದ ಸತ್ತರು ಎಂಬ ಸುದ್ದಿ ಬಂತು.

ಸೂಪರ್ ಪವರ್ ಭಂಜಕ

1944ರಿಂದ ಫ್ರೆಂಚ್ ಮಿಲಿಟರಿ ನೆಲೆಗಳ ಮೇಲೆ ವಿಯೆಟ್ ಮಿನ್ ಗೆರಿಲ್ಲಾ ದಾಳಿಗಳನ್ನು ಆರಂಭಿಸಿತು. ಎರಡನೇ ಮಹಾಯುದ್ಧದ ಕೊನೆಯ ಹೊತ್ತಿಗೆ ಇಂಡೋಚೀನಾ ಜಪಾನಿನ ವಶಕ್ಕೆ ಬಂತು. ಆಗ ವಿಯೆಟ್ ಮಿನ್ ಜಪಾನಿ ಸೈನ್ಯದ ವಿರುದ್ಧ ಹೋರಾಟವನ್ನು ಆರಂಭಿಸಿತು. ಈ ಅವಧಿಯಲ್ಲಿ ವಿಯೆಟ್ ಮಿನ್‌ಗೆ ಮಿತ್ರಪಕ್ಷಗಳ ಬೆಂಬಲ ದೊರಕಿತು. 1945 ಅಗಸ್ಟನಲ್ಲಿ ವಿಯೆಟ್ ಮಿನ್ ಗಿಯಾಪ್ ನೇತೃತ್ವದಲ್ಲಿ ಹನೊಯ್ ವಶಪಡಿಸಿಕೊಂಡಿತು. ಹೊ ಚಿ ಮಿನ್ ಸ್ವತಂತ್ರ ವಿಯೆಟ್ನಾಂ ರಿಪಬ್ಲಿಕಿನ ಉದಯದ ಘೋಷಣೆ ಮಾಡಿದರು. ಆದರೆ ಪೊಟ್ಸ್‌ಡಾಮ್ ಸಮ್ಮೇಳನದ ನಿರ್ಣಯದಂತೆ ಉತ್ತರ ಜಪಾನಿಯರನ್ನು ವಿಯೆಟ್ನಾಮ್‌ನಿಂದ 'ಪೂರ್ಣವಾಗಿ ತೆರವು' ಮಾಡುವ ಜವಾಬ್ದಾರಿಯನ್ನು ಚೀನಾ ರಾಷ್ಟ್ರೀಯವಾದಿಗಳಿಗೂ, ಬ್ರಿಟಿಷರಿಗೂ ಕೊಡಲಾಗಿತ್ತು. ಆದರೆ ಆ ಮೇಲೆ ಇವರಿಬ್ಬರೂ ವಿಯೆಟ್ನಾಮನ್ನು ಫ್ರೆಂಚರಿಗೆ ಪುನಃ ಒಪ್ಪಿಸಿದರು. ವಿಯೆಟ್ನಾಮ್ ಕಮ್ಯುನಿಸ್ಟ್ ಪಕ್ಷ ಮತ್ತು ವಿಯೆಟ್ ಮಿನ್ ಇದನ್ನು ಬಲವಾಗಿ ವಿರೋಧಿಸಿತು. ಒಂದು ಕಡೆ ಮಿಲಿಟರಿ ಕಾರ್ಯಾಚರಣೆಗಳ ಮೂಲಕ, ಇನ್ನೊಂದು ಕಡೆ ಮಾತುಕತೆಗಳ ಮೂಲಕ ಅಂತರ್‍ರಾಷ್ಟ್ರೀಯವಾಗಿ, ಫ್ರೆಂಚ್ ವಸಾಹತುಶಾಹಿ ಸರ್ಕಾರದ ಮೇಲೆ ಒತ್ತಡ ಹೇರುತ್ತಾ ಹೋಯಿತು.

ಇಂಡೋಚೀನಾದ ಆಯಕಟ್ಟಿನ ಪ್ರದೇಶವನ್ನು ಬಿಟ್ಟುಕೊಡಲು ಒಲ್ಲದ ಫ್ರೆಂಚ್ ಸರ್ಕಾರದ ವಿರುದ್ಧ ಅತ್ಯಂತ ದೀರ್ಘ ಗೆರಿಲ್ಲಾ ಹೋರಾಟದ ನಂತರ 1954ರಲ್ಲಿ ಅವರು ದೇಶ ಬಿಟ್ಟು ಹೋಗಬೇಕಾಯಿತು. ದಿನ್-ಬಿನ್-ಫೂ ನ ದಾಳಿ ಇದರಲ್ಲಿ ಮಹತ್ವದ ಪಾತ್ರ ವಹಿಸಿತು. ಆದರೆ ಮಾತುಕತೆಗಳ ಪ್ರಕಾರ ದಕ್ಷಿಣ ವಿಯೆಟ್ನಾಮ್ ಅಮೆರಿಕನ್ ಬೆಂಬಲಿತ ರಾಷ್ಟ್ರೀಯವಾದಿಗಳ ಕೈನಲ್ಲಿ ಉಳಿಯಿತು. ಉತ್ತರ ಮತ್ತು ದಕ್ಷಿಣ ವಿಯೆಟ್ನಾಮ್ ಐಕ್ಯತೆ ಬಗ್ಗೆ ಜನಮತ ಸಂಗ್ರಹ ಮತ್ತು ಚುನಾವಣೆಯ ಮೂಲಕ ಮುಂದೆ ನಿರ್ಧರಿಸಲಾಗುವುದು ಎಂದು ಹೇಳಲಾಯಿತು. ಆದರೆ ಈ ಆಶ್ವಾಸನೆಯನ್ನು ದಕ್ಷಿಣ ವಿಯೆಟ್ನಾಮ್ ಸರ್ಕಾರ ಅಮೆರಿಕದ ಕುಮ್ಮಕ್ಕಿನಿಂದ ಹುಸಿಗೊಳಿಸಿದಾಗ ಆ ಪ್ರದೇಶದಲ್ಲಿ ಗೆರಿಲ್ಲಾ ಹೋರಾಟಗಳನ್ನು ಸಂಘಟಿಸಿ ದೇಶದ ಐಕ್ಯತೆ ಸ್ಥಾಪಿಸುವ ಜವಾಬ್ದಾರಿ ಪುನಃ, ಈಗ ರಕ್ಷಣಾ ಮಂತ್ರಿಯಾಗಿದ್ದ ಜನರಲ್ ಗಿಯಾಪ್ ಅವರ ಹೆಗಲ ಮೇಲೆ ಬಿತ್ತು. 1960-75ರ ದೀರ್ಘ ಅವಧಿಯಲ್ಲಿ ಜಗತ್ತಿನ ಅತಿ ದೊಡ್ಡ ಸೂಪರ್ ಪವರ್ ನ ಅಭೇದ್ಯ ಮಿಲಿಟರಿ ಬಲವನ್ನು ಮಣಿಸಿ ಇದನ್ನು ಸಾಧಿಸುವಲ್ಲಿ ಗಿಯಾಪ್ ಪಾತ್ರ ಅವಿಸ್ಮರಣೀಯ. ●

JANASHAKTHI KANNADA VARA PATRIKE OCT 27, 2013 Price : Rs. 10/-
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO
RNI No. KARKAN /2006/17 ...
Licensed to Post without prepayment License No. WPP-2...

ಬೆಳ್ತಂಗಡಿ: 'ಪಟ್ರಮೆ'ಯಲ್ಲಿ ರಾಜಕೀಯ ಸಮಾವೇಶ, ಉತ್ಸವದ ಉತ್ಸಾಹ

ಬೆಳ್ತಂಗಡಿ ತಾಲ್ಲೂಕು ಪಟ್ರಮೆ ಗ್ರಾಮದಲ್ಲಿ ಅಂದು ಹಬ್ಬವೋ, ಜಾತ್ರೆಯೋ ಎಂದುಕೊಳ್ಳುವಂತಹ ವಾತಾವರಣ ನಿರ್ಮಾಣವಾಗಿತ್ತು. ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಪಟ್ರಮೆ ಗ್ರಾಮದ 5 ಶಾಖೆಗಳು ಜಂಟಿಯಾಗಿ ರಾಜಕೀಯ ಸಮಾವೇಶ ನಡೆಸಿ ಇಂತಹ ವಾತಾವರಣ ನಿರ್ಮಿಸಿದ್ದು ವಿಶೇಷ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪಟ್ರಮೆಯ ಮತದಾರರು ಸಿಪಿಐ(ಎಂ) ಜೊತೆ ಗುರುತಿಸಿಕೊಂಡು ಉಳಿದ ಪಕ್ಷದವರಿಗೆ ಪ್ರಚಾರಕ್ಕೂ ಜನ ಸಿಗದಂತಾಗಿತ್ತು. ಒಟ್ಟು ಚಲಾವಣೆಯಾದ ಮತಗಳಲ್ಲಿ ಮೂರನೇ ಎರಡು ಪಾಲು ಸಿಪಿಐ(ಎಂ)ಗೆ ದೊರೆತಿತ್ತು. ಬಿಜೆಪಿ, ಕಾಂಗ್ರೆಸ್‌ಗಳ ಯಾವುದೇ ಆಮಿಶ, ಬೆದರಿಕೆಗಳಿಗೂ ಬಗ್ಗದೆ ಸಿಪಿಐ(ಎಂ)ಗಾಗಿ ದುಡಿದ ಜನತೆ ರಾಜಕೀಯ ಸಮಾವೇಶವನ್ನು ನಡೆಸುವ ಮೂಲಕ ಸಂತೋಷ ಪಟ್ಟರು. ಸು.500 ಕ್ಕೂ ಮಿಕ್ಕಿದ ಜನ ಸೇರಿದ್ದರು. ಈ ಕುಗ್ರಾಮದಲ್ಲಿ ಇದುವರೆಗೆ ಇಷ್ಟೊಂದು ಜನ ಸೇರಿ ಯಾವ ಸಭೆಗಳು ನಡೆದಿದ್ದೆ ಇಲ್ಲ. ಊರ ಜಾತ್ರೆಗೂ ಇಷ್ಟು ಜನ ಸೇರುತ್ತಿಲ್ಲವಲ್ಲ ಎಂದು ಜನರಾಡುವಂತಾಗಿತ್ತು. ಒಂದು ವಾರದಿಂದ ಇದಕ್ಕಾಗಿ ಸಿದ್ದತೆ ಮಾಡುತ್ತಾ ದುಡಿದ ಜನ ಊರನ್ನೇ ಕೆಂಪಾಗಿಸಿದ್ದರು. ಎಲ್ಲೆಲ್ಲೂ ಕೆಂಬಾವುಟ ಹಾರುತ್ತಿತ್ತು. ಗಲ್ಲಿಗಲ್ಲಿಯಲ್ಲಿ, ರಸ್ತೆಯುದ್ದಕ್ಕೂ ಬ್ಯಾನರುಗಳೇ ತೋರಣದಂತಿದ್ದವು.

ಬೆಳಿಗ್ಗೆ ಉದ್ಘಾಟನಾ ಸಭೆ. ಪಕ್ಷದ



ಸದಸ್ಯರು ಹಿತೈಶಿಗಳು, ಸಹಾಯಕ ಗುಂಪಿನ ಸದಸ್ಯರಿಗೆ ಪಕ್ಷವನ್ನು ಕಟ್ಟುವ ಮತ್ತು ಬೆಳೆಸುವ ತರಬೇತಿ ಶಿಬಿರ ಸಹ ನಡೆಸಲಾಯಿತು. ಸಂಜೆ 3.30 ರಿಂದ ಅರಣ್ಯ ಹಕ್ಕು ಸಂತ್ರಸ್ಥರ ಹಾಗೂ ಎಂಡೋಸಲ್ಫಾನ್ ಸಂತ್ರಸ್ಥರ ಸಭೆ ನಡೆಸಲಾಯಿತು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ. ಶ್ರೀರಾಮರೆಡ್ಡಿ ಆಗಮಿಸಿ ಬೆಳಿಗ್ಗೆ ಎಂಡೋಸಲ್ಫಾನ್ ಸಂತ್ರಸ್ಥರ ಮನೆಗಳಿಗೆ ಭೇಟಿ ನೀಡಿದ್ದರು. ಸಮಾವೇಶ ಉದ್ಘಾಟಿಸಿ ಪ್ರಸಕ್ತ ರಾಜಕೀಯ ವಿದ್ಯಮಾನಗಳ ಬಗೆಗೆ ಗಮನ ಸೆಳೆದ ಅವರು, ಬೆಲೆ ಏರಿಕೆ, ಭ್ರಷ್ಟಾಚಾರದಲ್ಲಿ ಮುಳುಗಿದ ಕಾಂಗ್ರೆಸ್-ಬಿಜೆಪಿಗಳ ರಾಜಕೀಯವನ್ನು ಎಳೆ ಎಳೆಯಾಗಿ ಬಿಡಿಸಿ ವಿವರಿಸಿದರು. ಸಿಪಿಐ(ಎಂ) ಪಕ್ಷ ಕಟ್ಟಿ ಬೆಳೆಸುವುದರಿಂದಷ್ಟೇ ಈ ಜನವಿರೋಧಿ ಬಿಜೆಪಿ-ಕಾಂಗ್ರೆಸ್‌ಗಳಿಂದ ಬಿಡುಗಡೆ ಸಾದ-ಆನ ... ಎಂದು ಹೇಳಿದರು. ಅರಣ್ಯ ಪ್ರದೇಶದ ನಿವಾಸಿ... ಹೆದರದೆ ಅದೇ ಜಾಗದಲ್ಲಿ ವಾಸ್ತವ್ಯ... ಧೈರ್ಯ ತುಂಬಿದ ಅವರು ಎಂಡೋಸಲ್... ಸಂತ್ರಸ್ತರ ಪರ ಹೋರಾಡಲು ಪಕ್ಷ... ಎಂದು ಘೋಷಿಸಿದರು. ಪಕ್ಷ ಸಂಘಟ... ಚಳುವಳಿ ಕುರಿತು ಮಾತನಾಡಿದ ಅ... ಕಳೆದ ವಿಧಾನ ಸಭಾ ಚುನಾವಣೆ... ಅತ್ಯಂತ ಹೆಚ್ಚು ಮತ ನೀಡಿ ಪಕ್ಷ... ಬೆಂಬಲಿಸಿದ ಪಟ್ರಮೆಯ ಜನತೆಯ... ಅಭಿನಂದಿಸಿದರು.

ಪಟ್ರಮೆ ಮಾತ್ರವಲ್ಲ ಇತರ ಗ್ರಾಮಗಳ... ಕಳೆದ ವಿಧಾನ ಸಭಾ ಚುನಾ... ಸಮಯ ಜನರನ್ನು ಹುರಿದುಂಬಿಸಿ ಪ... ಕೆಲಸಕ್ಕೆ ಇಳಿಸಿ ದುಡಿದ ಈ ಜನತ... ಕೆಲಸ ಮಾದರಿಯಾಗಿತ್ತು. ಈಗ ಇ... ಪಂಚಾಯತ್ ಸದಸ್ಯರ ಅವ... ಹೊಂದಿರುವ ಪಟ್ರಮೆ ಪ್ರತಿ ತಿಂ... 5,6,9,.10,11 ನೇ ತಾರೀಕುಗಳಲ್ಲಿ ಮಾ... ಸಭೆ ನಡೆಸುತ್ತಾ ಪಕ್ಷ ಕಟ್ಟುವ ಹಾ... ಇಲ್ಲಾ ಹೋರಾಟಗಳಲ್ಲೂ ಸಕ್ರಿಯ... ಭಾಗವಹಿಸುತ್ತಿದ್ದಾರೆ. ಈ ಗ್ರಾಮದ ಪ... ಸದಸ್ಯರು ಪ್ರತಿ ಗ್ರಾಮ ಸಭೆಯ... ಭಾಗವಹಿಸಿ ಊರಿಗಾಗಿ ಮಾತಾಡುತ... ಚರ್ಚೆ ಮಾಡುತ್ತಾರೆ. ಪಟ್ರಮೆಯ ಗ್ರಾ... ಸಭೆಯು ತಾಲೂಕಿಗೇ ಮಾದರಿ ಗ್ರಾ... ಸಭೆ ಎಂದು ನೋಡಲ್ ಅಧಿಕಾರಿ... ಹೇಳುತ್ತಿರುತ್ತಾರೆ. ಈ ಸಭೆ ಸುತ್ತಮುತ್ತ... ಗ್ರಾಮದ ಪಕ್ಷದ ಸದಸ್ಯರಿಗೂ ಹುರು... ತಂದಿದೆ.

– ಬಿ.ಎಂ.ಭಟ್, ಪಟ್ರ...

ಆದಿವಾಸಿ-ಬುಡಕಟ್ಟು ಜನರ ಸಮಾವೇಶ

ಜಾರಿಯಾಗದ ಅರಣ್ಯಹಕ್ಕು ಕಾಯ್ದೆ : ರಾಜಕೀಯ ಇಚ್ಛಾಶಕ್ತಿ ಕೊರತೆ – ಟೀಕೆ

ಆದಿವಾಸಿಗಳ ಬದುಕಿನ ಸಂರಕ್ಷಣೆಯ ದೆಸೆಯಲ್ಲಿ ತಂದಿರುವ ಅರಣ್ಯ ಹಕ್ಕುಗಳ ಕಾಯ್ದೆ 2006 ನ್ನು ಜಾರಿಗೆ ತರುವಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಗಳಿಗೆ ಇಚ್ಛಾಶಕ್ತಿಯೇ ಇಲ್ಲವಾಗಿದ್ದು ಅವು ತಮ್ಮ ನಿಷ್ಕ್ರಿಯತೆ ಮತ್ತು ನಿರ್ಲಕ್ಷ್ಯತನದ ದೋರಣೆಯನ್ನು ಬಿಡಬೇಕೆಂದು ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ಎಸ್. ವೈಗುರುಶಾಂತ್ ರವರು ಆಗ್ರಹಿಸಿ ದರು.

ಅವರು ಬೆಳ್ತಂಗಡಿಯಲ್ಲಿ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಭವನದಲ್ಲಿ ಇತ್ತೀಚೆಗೆ ನಡೆದ ತಾಲೂಕು ಮಟ್ಟದ ಆದಿವಾಸಿ-ಬುಡಕಟ್ಟು ಜನರ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು. ರಾಜ್ಯ ಸಮಾವೇಶದ ಪೂರ್ವಭಾವಿಯಾಗಿ ವಿವಿಧ ತಾಲೂಕುಗಳಲ್ಲಿ ಇಂತಹ ಸಮಾವೇಶಗಳು ನಡೆಯುತ್ತಿವೆ.

ಮುಂದುವರಿದು ಮಾತನಾಡುತ್ತಾ ಅವರು, ಎಡ ಪಕ್ಷಗಳ ಒತ್ತಾಯದ ಬಳಿಕ ಅಂಗೀಕರಿಸಲಾದ ಮಹತ್ವದ ಈ ಕಾಯ್ದೆ ಆದಿವಾಸಿಗಳಿಗೆ ಭೂಮಿ, ನಿವೇಶನ, ಕಾಡಿನ ಉತ್ಪನ್ನಗಳ ಮೇಲಿನ ಹಕ್ಕುಗಳ ರಕ್ಷಣೆ, ಅವರ ಭಾಷೆ-ಸಂಸ್ಕೃತಿ-ಜ್ಞಾನದ ಉಳಿವು ಬೆಳವಣಿಗೆಯತ್ತ ಮೂಲಭೂತ ಕ್ರಮಗಳನ್ನು ಖಾತರಿ ಪಡಿಸುತ್ತದೆ. ಈ ಕಾಯ್ದೆಯನ್ವಯ ಭೂಮಿಯ ಹಕ್ಕಿಗಾಗಿ ಹಾಕಲಾದ ಕ್ಲೇಮ್‌ಗಳನ್ನು ಪರಿಗಣಿಸುವಲ್ಲಿ ಸರಕಾರಗಳು ಪೂರ್ಣ ನಿರ್ಲಕ್ಷ್ಯ ತೋರಿ ಆದಿವಾಸಿಗಳ ವಿರೋಧಿ ನೀತಿಯನ್ನು ಅನುಸರಿಸುತ್ತಿವೆ. ಅಂತಹ ಬಹುತೇಕ ಅರ್ಜಿಗಳನ್ನು ನಿರಾಕರಿಸಿವೆ. ಕ್ರಮಕ್ಕಾಗಿ ಪರಿಗಣಿಸಿರುವುದು ತೀರಾ ಅತ್ಯಲ್ಪ. ಆದರೆ ಸರಕಾರ ತಾನೇನೋ ಆದಿವಾಸಿಗಳಿಗೆ ಭಾರೀ ಕೊಡುಗೆ ನೀಡಿದಂತೆ ಪ್ರಚಾರಿಸಿಕೊಳ್ಳುತ್ತಿರುವುದು ನಾಚಿಕೆಗೇಡು ಎಂದು ಖಂಡಿಸಿದರು.



ಇದೇ ಸರಕಾರ ಆದಿವಾಸಿಗಳಿಗೆ ಹಕ್ಕು ನಿರಾಕರಿಸಲಾಗುತ್ತಿದೆ. ವಿವಿಧ ಅಭಿವೃದ್ಧಿ ಯೋಜನೆಗಳು, ವಿಶ್ವ ಪಾರಂಪರಿಕ ತಾಣಗಳು, ಹುಲಿ ಸಂರಕ್ಷಣೆ ವುಂತಾದವುಗಳ ಹೆಸರಿನಲ್ಲಿ ತಲೆ, ತಲಾಂತರದಿಂದ ಕಾಡಿನಲ್ಲೇ ಹುಟ್ಟಿ, ಬೆಳೆದು ಬದುಕಿರುವ ಆದಿವಾಸಿ-ಬುಡಕಟ್ಟು ಜನರನ್ನು ಒಕ್ಕಲೆಬ್ಬಿಸಲಾಗುತ್ತಿದೆ. ಜೀವನೋಪಾಯದ ಅನ್ಯ ಮಾರ್ಗಗಗಳಿಲ್ಲದೇ ಅವರು ಬೀದಿ ಭಿಕಾರಿಗಳಾಗುತ್ತಿದ್ದಾರೆ. ಪರಿಹಾರದ ಪ್ಯಾಕೇಜ್ ಎಂಬುದು ಶುದ್ಧ ಮೋಸ, ವಂಚನೆಯಿಂದ ಕೂಡಿದೆ ಎಂದರು. ಇಂತಹ ನೀತಿಗಳ ವಿರುದ್ಧ, ಮೂಲಭೂತ ಹಕ್ಕು, ಪ್ರಗತಿಗಾಗಿ ಸದಾ ಶೋಷನೆಗೆ ಒಳಗಾಗಿರುವ ಆದಿವಾಸಿ-ಬುಡಕಟ್ಟು ಜನಾಂಗಗಳು ಐಕ್ಯತೆಯಿಂದ ಸಂಘಟಿತರಾಗಿ ಹೋರಾಡಬೇಕೆಂದು ಕರೆ ನೀಡಿದರು. ಈ ನಿಟ್ಟಿನಲ್ಲಿ ಬೆಳ್ತಂಗಡಿ ತಾಲೂಕಿನಲ್ಲಿ ನಡೆದಿರುವ ಮುತುವರ್ಜಿ ಹಾಗೂ ಸಂಘಟನೆಯ ಮದ್ಯಪ್ರವೇಶವನ್ನು ಶ್ಲಾಘಿಸಿದರು.

ಸಮಾವೇಶದ ಅದ್ಯಕ್ಷತೆಯನ್ನು ವಸಂತ ನಡ ವಹಿಸಿದ್ದರು. ವಿಠ್ಠಲ ಮಲೆಕುಡಿಯ, ಡಿ.ಶಾಮರಾಜ್, ಶಿವಕುಮಾರ್, ಬಿ.ಎಂ.ಭಟ್, ಹರಿದಾಸ್, ಶೇಖರ್, ಮುನೀರ್ ಕಾಟಿಪಳ್ಳ, ಮುಂತಾದವರು ಶುಭ ಹಾರೈಸಿ ಮಾತನಾಡಿದರು., 'ಸುಕ... ಜಯರಾಮ್ ಮಯ್ಯ, ಸಂಜೀವ ನಾ... ಚೋಮನಾಯ್ಕ,ಮುಂ. ವಿವಿಧ ಸಂಘಟನ... ಮುಖಂಡರು ಉಪಸ್ಥಿತರಿದ್ದರು. ಹಾ... ವಿವಿಧ ಸಮುದಾಯಗಳ ಪ್ರಮುಖ... ಭಾಗವಹಿಸಿದ್ದರು. ಮುಖ್ಯವಾಗಿ ಅ... ಪ್ರದೇಶಗಳಲ್ಲಿ ಆದಿವಾಸಿ-ಬುಡ... ಜನತೆಯ ಸಮಸ್ಯೆಗಳು, ಪರಿ... ಕುರಿತು ಪ್ರತಿನಿದಿಗಳು ವಿವರಿಸಿದ... ಕಳೆದ ಅವಧಿಯಿಂದ ಇಲ್ಲಿನವರ... ಚಟುವಟಿಕೆಗಳು, ಸಂಘಟನೆ ಬಗ್ಗೆ ಲಿ... ವರದಿಯನ್ನು ಶೇಖರ್ ಮಂಡಿಸಿದ ಬ... ಚರ್ಚೆಯಾಯಿತು.

ಕೊನೆಯಲ್ಲಿ ಕಾರ್ಯ ಯೋ... ಮತ್ತು ಕೆಲ . ನಿರ್ಣಯಗಳ... ಅಂಗೀಕರಿಸಲಾಯಿತು.

ನೂತನ ತಾಲೂಕು ಸಮಿತಿಯ... ರಚಿಸಲಾಗಿದ್ದು ಅದ್ಯಕ್ಷರಾಗಿ ವಸಂತ ... ಕಾರ್ಯದರ್ಶಿಯಾಗಿ ವಿಠ್ಠಲ ಮಲೆಕುಡಿ... ಹಾಗೂ 12 ಜನರ ಸಮಿತಿ ಆ... ಮಾಡಲಾಯಿತು .

–ವರದಿ: ಶೇಖ...

JANASHAKTHI KANNADA VARA PATRIKE: Printed by G.V.SRIRAMA REDDY, EMS Bhavana, No.37/A, 8th Cross, Mahalakshmi Layout, BANGALORE-560086Published by: G.V.SRIRAMA REDDY EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor NITHYANANDASWAMI EMS Bhavana, No.37/A, 8th Cross, Mahalakshmi Layout, BANGALORE-560086 Editor : NITHYANANDASWAMI